ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಜನಪದ ಹೊಲಿಗೆ ಮತ್ತು ಚಿತ್ರಕಲೆ

ಡಾ. ರಾಜೇಂದ್ರ ಯರನಾಳೆ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮.

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಜನಪದ ಹೊಲಿಗೆ ಮತ್ತು ಚಿತ್ರಕಲೆ

ಡಾ. ರಾಜೇಂದ್ರ ಯರನಾಳೆ

ಶುಭವಾಗಲಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

JANAPADA HOLIGE & CHITRAKALE
by : Dr. Rajendra Yaranaale
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 46+v Price : Rs. 20=00 : 2004

ಪ್ರಥಮ ಮುದ್ರಣ : ೨೦೦೪
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತು ರೂಪಾಯಿಗಳು

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ-ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

'ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ದತ್ತಿ ನಿಧಿ' ನೆರವಿನಿಂದ ಈ ಕೃತಿ ಪ್ರಕಟವಾಗಿದೆ. ದತ್ತಿ ದಾನಿಗಳಾದ ಶ್ರೀಮಠದ ಪೂಜ್ಯ ಸ್ವಾಮೀಜಿಯವರಿಗೆ ಪ್ರಣಾಮಗಳು. ಈ ಗ್ರಂಥವು ಕನ್ನಡ ಸಾಹಿತ್ಯ ಸಂಶೋಧನಾಸಕ್ತರಿಗೂ, ವಿದ್ಯಾರ್ಥಿಗಳಿಗೂ, ಉಪನ್ಯಾಸಕರಿಗೂ ಅತ್ಯಂತ ಉಪಯುಕ್ತವಾಗಿದೆ. ಸಹೃದಯ ಓದುಗರು ಈ ಗ್ರಂಥವನ್ನು ಆದರದಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇನೆ.

ಈ ಕೃತಿಯನ್ನು ಸಿದ್ಧಪಡಿಸಿರುವ ಡಾ. ರಾಜೇಂದ್ರ ಯರನಾಳೆ ಅವರಿಗೆ ಧನ್ಯವಾದಗಳು. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಲೇಖಕರ ಮಾತು

ಸುಮಾರು ಹತ್ತು ವರ್ಷಗಳ ಹಿಂದೆ ಬರೆದು ಪುಸ್ತಕವಾಗಿ ಪ್ರಕಟಿಸಲು ಸಿದ್ಧವಿರುವ ಹಸ್ತಪ್ರತಿಗಳಲ್ಲಿ 'ಜನಪದ ಹೊಲಿಗೆ ಮತ್ತು ಚಿತ್ರಕಲೆ' ಓದುಗರಿಗೆ ಮುಟ್ಟುವಲ್ಲಿ ಕಾರಣಕರ್ತರಾದ ಪರಿಷತ್ತಿನ ಅಧ್ಯಕ್ಷರಾದ ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು ಅವರಿಗೆ ಮೊದಲ ಕೃತಜ್ಞತೆ ಸಲ್ಲಿಸುವೆ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ಅವರು ಕೂಡ ನನ್ನ ಅಭಿಮಾನಿಗಳಲ್ಲಿ ಒಬ್ಬರು. ಅವರಿಗೂ ಈ ಸಂದರ್ಭದಲ್ಲಿ ಕೃತಜ್ಞತೆ ಸಲ್ಲಿಸುವುದು ಅನಿವಾರ್ಯ. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಜಿಲ್ಲಾಧ್ಯಕ್ಷರುಗಳಿಗೆ, ಹಾಗೂ ಪುಸ್ತಕ ಪ್ರಕಟಣಾ ಸಮಿತಿ ಹಾಗೂ ಸಿಬ್ಬಂದಿಗಳಿಗೆ ಜೊತೆಗೆ ಅತೀ ಶೀಘ್ರದಲ್ಲಿ ಬೆರಳಚ್ಚು ಮಾಡಿರುವ, ಮುದ್ರಿಸಿರುವ ಮಹನೀಯರ ಕಾರ್ಯವೂ ಅಷ್ಟೇ ಪ್ರಮುಖವಾದುದೆಂದು ಭಾವಿಸಿ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಪುಸ್ತಕ ರಚನೆ ಸಂದರ್ಭದಲ್ಲಿ ಪ್ರಮುಖರಾಗಿ ಸಹಕರಿಸಿದವರು ಹಲವು ಜನರು. ಅವರಲ್ಲಿ ಕೆಲವರೀಗ ದಿವಂಗತರು: ಅವರೆಲ್ಲರೊಂದಿಗೆ ಇಂತಹ ಒಂದು ಪುಸ್ತಕ ಬರೆಯಬೇಕೆಂಬ ಕಲ್ಪನೆಯೊಂದಿಗೆ ಪ್ರೋತ್ಸಾಹ ನೀಡಿರುವ ಗುರುಗಳಾದ ಡಾ. ಎಂ.ಎಸ್.ಲಠ್ಠೆ ಅವರಿಗೂ ತುಂಬು ಹೃದಯದಿಂದ ನಮಿಸುವೆ.

ಹೊಲಿಗೆ ಕಲೆ, ಚಿತ್ರಕಲೆ ಎಂದಾಕ್ಷಣ ದಿನನಿತ್ಯ ಕಾಣುವ ಇವುಗಳು ನಮಗೆ ವಿಶೇಷ ಎನಿಸುವುದಿಲ್ಲ. ಆದರೆ ಜನಪದ ಹೊಲಿಗೆಗಳಾದ ಖವುದಿ, ಕುಂಚಿಕುಲಾಯಿ ಮೊದಲಾದವುಗಳ ಕುರಿತು ಕ್ಷಣ ಚಿಂತಿಸುತ್ತಿದ್ದರೆ ಅದ್ಭುತವೆನಿಸುತ್ತದೆ. ಇದರಂತೆ ಚಿತ್ರಕಲೆ ಎಂದಾಕ್ಷಣ ಇಂದು ಪ್ರತಿಯೊಂದು ಕಡೆಗಳಲೆಲ್ಲ ಚಿತ್ರಕಲಾ ಶಾಲೆಗಳು ಪ್ರಾರಂಭವಾಗಿ ಹಾಳೆ ಮೊದಲಾದವುಗಳ ಮೇಲೆ ಬಿಡಿಸುವ ಚಿತ್ರ ನೆನಪಾಗುವುದು ಸಹಜ. ಆದರೆ ಸಾವಿರಾರು ವರ್ಷಗಳಾದರೂ ಹಳೆಯ ಕಟ್ಟಡಗಳ ಮೇಲೆ, ಗೋಡೆಗಳ ಮೇಲೆ ಕಾಣುವ ಚಿತ್ರಗಳ ಬಣ್ಣ, ಹೊಳಪು ಕುರಿತು ವಿಚಾರಿಸಿದರೆ ನಮ್ಮ ಪೂರ್ವಜರ ಕಲೆಗೆ ಬೆರಗಾಗದವರೆ ಇಲ್ಲವೆನ್ನಬೇಕು. ಈ ಎಲ್ಲ ಚಿಂತನೆಗಳ ಫಲವೇ ಪ್ರಸ್ತುತ ಪುಸ್ತಕ.

ಇದರಲ್ಲಿ ಎರಡು ಕಲೆಗಳ ಕುರಿತು ಸಂಶೋಧಿಸುವಾಗ ಜನಪದರ ಬಾಯಿಯಲ್ಲಿರುವ ಪದಗಳ ಗತ್ತು-ಗಮ್ಮತ್ತು ಸ್ವಾರಸ್ಯ ರೀತಿ-ನೀತಿಗಳು ಇದ್ದಕ್ಕಿದಂತೆ ಇಡಲು ಪ್ರಯತ್ನಿಸಿದ್ದೇನೆ. ಅವುಗಳೆಲ್ಲ ಓದುಗರಿಗೂ, ಸಂಶೋಧಕರಿಗೂ, ಕಲಾ ಪ್ರಿಯರಿಗೂ ಒಂದು ಹೊಸತನ ನೀಡುವವೆಂದು ಭಾವಿಸಿರುವೆ. ಹಾಗಾದರೆ ನನ್ನ ಭಾವಕ್ಕೆ ಬಲಬಂದಂತೆ ಖುಷಿ ಪಡುವೆ. ಎಲ್ಲರಿಗೂ ನಮಸ್ಕಾರಗಳು.

ಡಾ. ರಾಜೇಂದ್ರ ಯರನಾಳೆ

ಪರಿವಿಡಿ

೧. ಹೊಲಿಗೆ ಕಲೆ

೧. ಉಗಮ :

ಆದಿ ಕಾಲದಲ್ಲಿ ಹೊಲಿಗೆ ಹುಲ್ಲಿನಲ್ಲಿ ಹಾಗೂ ಚರ್ಮದಲ್ಲಿ ಕಾಣುತ್ತೇವೆ. ಬತ್ತಲೆ ಇರುವ ಮಾನವ ಕಾಲಾನಂತರ ಗಿಡದ ತೊಗಟೆ ಹಾಗೂ ತಾನು ಬೇಟೆ ಆಡಿದ ಪ್ರಾಣಿಗಳ ಚರ್ಮದಿಂದ ಮೈ ಮುಚ್ಚಿಕೊಳ್ಳುತ್ತಿದ್ದ ಎಂಬುದಕ್ಕೆ ಅನೇಕ ಆಧಾರಗಳಿವೆ. ಹಾಗೆ ಮೈ ಮುಚ್ಚಿಕೊಳ್ಳಲು ಗಿಡದ ತಪ್ಪಲು, ತೊಗಟೆ, ಬೇಟೆ ಆಡಿದ ಪ್ರಾಣಿಗಳ ಚರ್ಮ ಸಹಜವಾಗಿ ಮೈಗೆ ಸುತ್ತಿಕೊಂಡು, ನಂತರ ಅವುಗಳನ್ನು ಎಳೆಯಾದ ಹುಲ್ಲಿನಿಂದ ಒಂದನ್ನೊಂದು ಕಟ್ಟಲು ಪ್ರಾರಂಭಿಸಿದ. ಬೇಟೆ ಆಡುತ್ತ ಗಿಡದ ಪೊಟರೆಯಲ್ಲಿಯೋ, ಗವಿಯಲ್ಲಿಯೋ, ಮಳೆ, ಗಾಳಿ, ಬಿಸಿಲು ಇವುಗಳಿಂದ ರಕ್ಷಿಸಿಕೊಳ್ಳುವ ಮಾನವ ತನ್ನದೆ ಆದ ಗುಡಿಸಲು ಕಟ್ಟಿಕೊಳ್ಳಲು ಪ್ರಾರಂಭಿಸಿದ. ಹೀಗೆ ಹೊಲಿಗೆ ಎನ್ನುವುದು ಆರಂಭದಲ್ಲಿ ಹುಲ್ಲಿನಿಂದ ಗುಡಿಸಲುಗಳು ಮೊದಲಾಗಿ ಕಟ್ಟುವುದು ಹೆಣೆಯುವುದು ಪ್ರಾರಂಭವಾಯಿತು.

ಮಾನವ ಗುಡಿಸಲಿನಲ್ಲಿ ವಾಸಿಸಲು ಪ್ರಾರಂಭಿಸಿದಾಗಲೇ ಬೇಸಾಯವೂ ಪ್ರಾರಂಭವಾಯಿತೆಂಬ ಹೇಳಿಕೆಗಳನ್ನು ಕಾಣುತ್ತೇವೆ. ಪ್ರಗತಿ ಹೊಂದುತ್ತಿರುವ ಮಾನವ ತನ್ನ ದಿನನಿತ್ಯಕ್ಕಾಗಿ ಬೇಕಾಗುವ ಹಾಸಿಗೆ, ಹೊದಿಕೆ, ಬುಟ್ಟಿ ಮುಂತಾದವುಗಳನ್ನು ಹುಲ್ಲಿನಿಂದ ಕಟ್ಟಿ ಜೋಡಿಸಿ, ಹೆಣೆದು ಒಂದು ರೂಪಕೊಟ್ಟು ಬಳಸಿಕೊಳ್ಳಲು ಪ್ರಾರಂಭಿಸಿದ. ಉದಾ: ಈಗಲೂ ಹಂಜಣಿಯೆನ್ನುವ ಒಂದು ಜಾತಿಯ ಹುಲ್ಲಿನಿಂದ ಪರಸ್ಪರ ಒಂದನ್ನೊಂದು ಜೋಡಿಸಿ ಬುಟ್ಟಿ, ಡಬ್ಬಿ ಮುಂತಾದ ಆಕಾರಗಳಲ್ಲದೆ ಮಕ್ಕಳ ಆಟಿಕೆಗಳನ್ನು ಮಾಡುವುದು (ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಕೆಲ ಊರುಗಳಲ್ಲಿ) ಕಾಣುತ್ತೇವೆ. ಈ ಹುಲ್ಲು ಒಂದನ್ನೊಂದು ಜೋಡಿಸಿದರೆ ತಾನಾಗಿಯೇ ಅಂಟಿಕೊಳ್ಳುತ್ತದೆ. ಹೀಗೆ ಜೋಡಿಸಿದ ಹುಲ್ಲಿನ ಬುಟ್ಟಿ ಆಟಿಕೆ ಮೊದಲಾದವುಗಳನ್ನು ನುಣ್ಣಗೆ ಮಾಡುವ ಸಲುವಾಗಿ ದನಗಳ ಸಗಣಿಯಿಂದ ಸಾರಿಸುತ್ತಾರೆ. ಇಂತಹ ಸಾಮಾನುಗಳ ಜೊತೆಗೆ ಹಾಸಿಕೊಳ್ಳಲು ಚಾಪೆ ಮುಂತಾದವುಗಳನ್ನು ತಯಾರಿಸಿಕೊಳ್ಳಲು ಆರಂಭಿಸಬೇಕು. ಆಮೇಲೆ ಲವಳಿ ಕಡ್ಡಿ (ಒಂದು ಜಾತಿಯ ಹುಲ್ಲು) ಮೊದಲಾದವುಗಳಿಗೆ ಮುಳ್ಳಿನಿಂದ, ಸಿಬುರಿನಿಂದ ಅಥವಾ ಯಾವುದೇ ಚೂಪೆನಿಸುವ ಹುಲ್ಲಿನಿಂದ ತಿವಿದು, ಚುಚ್ಚಿ ಒಂದನ್ನೊಂದು ಜೋಡಿಸುತ್ತ ಹೆಣೆಯುವುದನ್ನು ಪ್ರಾರಂಭಿಸಿದ. ಉದಾ. ಇಂದು ದನ ಕಾಯುವ ಹುಡುಗರು ದೀಪಾವಳಿಗೆ ದನಬೆಳಗುವ ಫಣಿ ತಯಾರಿಸಿಕೊಳ್ಳುವುದು ಲವಳಿಯ ಕಡ್ಡಿಯೇ ಆಗಿದೆ.

ಲವಳಿ ಕಡ್ಡಿ ಮೊದಲಾದ ಕೆಲವು ಜಾತಿಯ ಹುಲ್ಲುಗಳಲ್ಲಿ ಸೂಜಿಯಂತೆ ಮುಳ್ಳು ಮೊದಲಾಗಿ ಚುಚ್ಚಿ ಅಥವಾ ತೂತು ಹಾಕಿ ಹೊಲೆಯಬೇಕೆಂಬ ಕಲ್ಪನೆ ಮಾನವನಿಗೆ ಬಹಳ ಹಿಂದೆಯೇ ಹೊಳೆದಿರಬೇಕು. ಹೀಗಾಗಿ ಆದಿಮಾನವ ತಾನು ಬೇಟೆ ಆಡಿದ ಚರ್ಮ

ಮೊದಲಾಗಿ ಹೊಲಿದು ತನಗನುಕೂಲ ಎನಿಸಿದ ರೀತಿಯಲ್ಲಿ ಮೈ ಮುಚ್ಚಿಕೊಳ್ಳಲು ಪ್ರಾರಂಭಿಸಿದ. ನಂತರ ಮೊಳೆಗಳಿಂದ ತೂತು ಹಾಕಿ ಚರ್ಮದ ಎಳೆಗಳಿಂದ ಒಂದನ್ನೊಂದು ಕಟ್ಟುವ ಮೂಲಕ ಹೊಲಿಗೆ ಪ್ರಾರಂಭಿಸಿದ. ತೂತು ಹಾಕಿ ಪೋಣಿಸಿ ಕಟ್ಟುವುದನ್ನೇ, ಒಂದು ಮೊಳೆಗೆ ದಾರಕಟ್ಟಿ ಎಳೆಯಲು ಪ್ರಾರಂಭಿಸಿರುವುದೇ, ಡಬ್ಬಣವಾಗಿ ಪರಿಣಮಿಸಿರಬೇಕು. ಹೀಗೆ ಪ್ರಗತಿ ಹೊಂದಿದ ಮಾನವ ಬೇಸಾಯದಿಂದ ಹತ್ತಿ ಬೆಳೆದು ಅರಿಬೆ ತಯಾರಿಸಿ ಸೂಜಿ ಮೊದಲಾದವುಗಳನ್ನು ಕಂಡುಕೊಂಡು ಸೂಕ್ಷ್ಮ ಹೊಲಿಗೆ ಹೊಲಿಯಲು ಪ್ರಾರಂಭಿಸಿದ.

೨. ವಿಕಾಸ

ಮಾನವ ಪ್ರಗತಿ ಹೊಂದುತ್ತಿದ್ದಂತೆ ಡಬ್ಬಣದಂಥ ವಸ್ತುಗಳಿಂದ ಹೊಲಿಯಲು ಪ್ರಾರಂಭಿಸಿ ಬರುಬರುತ್ತ ಅವುಗಳಲ್ಲಿಯೇ ಸಣ್ಣ ಸಣ್ಣ ಆಕೃತಿಯ ಪರಿಕರಗಳನ್ನು ತಯಾರಿಸಿಕೊಂಡ. ಇವೇ ಡಬ್ಬಣ, ದಪ್ಪಸೂಜಿ, ಮೊದಲಾಗಿ ತಯಾರಾಗಿ ಇಂದು ಹತ್ತಾರು ಪ್ರಕಾರದ ಸೂಜಿಗಳು ಹೊಲಿಗೆಗಳಲ್ಲಿ ತಯಾರಾದದ್ದು ಕಾಣುತ್ತೇವೆ. ಜೊತೆಗೆ ಹೊಲಿಗೆಯ ಬಗೆಗಳು ಹೆಚ್ಚಾದಂತೆ ಅವುಗಳಿಗೊಂದೊಂದು ಹೆಸರುಗಳೂ ಪ್ರತ್ಯೇಕವಾಗಿಯೇ ಹುಟ್ಟಿಕೊಂಡವು. ಉದಾ : ಹುಲ್ಲಿನಿಂದ ಕಟ್ಟುವುದಕ್ಕೆ ಅಥವಾ ಜೋಡಿಸುವುದಕ್ಕೆ 'ಹೆಣಿಗೆ' ಎಂದು ದಪ್ಪವಾದ ಬಟ್ಟೆ, ತಟ್ಟು ಪೊಂಗಡಿ ಮೊದಲಾದವು ತಯಾರಿಸುವುದಕ್ಕೆ 'ನೆಯ್ಗೆ' ಎಂದು, ತೆಳುವಾದ ಬಟ್ಟೆಗಳನ್ನು ಜೋಡಿಸುವುದಕ್ಕೆ 'ಹೊಲಿಗೆ' ಎಂದು ಕರೆಯುವುದು ಕಾಣುತ್ತೇವೆ.

ಮೊದಲಿಗೆ ಮುಳ್ಳು, ಕಡ್ಡಿ, ಆನೆಯ ದಂತ, ಮರಗಳಿಂದ ಮಾಡಿದ ಸೂಜಿ ಮೊದಲಾದವುಗಳಿಂದ ಬಟ್ಟೆ ಹೊಲಿಯಲು ಪ್ರಾರಂಭಿಸಿದ ಮಾನವ, ಬರಬರುತ್ತ ಆಧುನಿಕ ಸೂಜಿ- ದಾರ ಕಂಡುಕೊಂಡರೂ ಅನೇಕ ದಿನಗಳವರೆಗೆ ದಿನಗಟ್ಟಲೆ, ಗಂಟೆಗಟ್ಟಲೆ ಹೊಲಿಗೆ ಹೊಲಿಯಬೇಕಾಗುತ್ತಿತ್ತು. ಇಂತಹ ಕಾಲವಿಳಂಬ ಗಮನಿಸಿ : ಫ್ರಾನ್ಸಿನ 'ಬಾರ್ತಲೆಮ್ಮಿ ಥಿಮಾನಿಯ' ಎಂಬ ದರ್ಜಿ ಸರಪಳಿ ಹೊಲಿಗೆ ಯಂತ್ರ ತಯಾರಿಸಿದ..... ನಂತರ ನ್ಯೂಯಾರ್ಕಿನ 'ವಾಲ್ತರ ಹಂಟ' ಎಂಬಾತ ಸೂಜಿ ಬಟ್ಟೆಯೊಳಕ್ಕೆ ಹಾಯಿಸಿದ. ಒಂದು ದಾರವನ್ನು ಕೆಳಗಿನಿಂದ ಬಂದ ದಾರ ಹಿಡಿಯಿತು. ಹಿಂದಕ್ಕೂ ಮುಂದಕ್ಕೂ ಚಲಿಸಿ ಎರಡನೆ ದಾರ ಬರುವಂತೆ ಮಾಡಿದ... ನಂತರ ೧೮೪೬ ರಲ್ಲಿ ಮೆಸಾಚುಸೆಟ್ಸಿನ 'ಎಲಿಯಾಸ ಹೋವೆ' ಎಂಬಾತ ಹಿಡಿಕೆಯುಳ್ಳ ಚಕ್ರವನ್ನು ಕೈಯಿಂದ ತಿರುಗಿಸಿ ಚಲಿಸುವ ಯಂತ್ರ ಜಾರಿಗೆ ತಂದ... ನಂತರ ೧೮೫೦ ರಲ್ಲಿ 'ಆಲನ್ ಬೆಂಜಮಿನ್ ವಿಲ್ಸನ್' ಮುಂದೆ- ಹಿಂದೆ, ಮೇಲೆ- ಕೆಳಗೆ ನಾಲ್ಕು ಚಲನೆಯುಳ್ಳ ಯಂತ್ರ ಕಂಡು ಹಿಡಿದ... ನಂತರ (೧೮೧೧-೭೫) 'ಐಸಾಕ್ ಮೆರಿಟ್ ಸಿಂಗರ್' ಇಂದಿನ ಹೊಲಿಗೆ ಯಂತ್ರದ ಪೂರ್ಣ ಪ್ರಮಾಣ ಕಂಡು ಹಿಡಿದು

ಜನಪ್ರಿಯನಾದ. ಜೊತೆಗೆ ಅವನ ಹೊಲಿಗೆಯಂತ್ರಗಳು ಎಲ್ಲೆಡೆಗೂ ಪಸರಿಸಿ ಪ್ರಖ್ಯಾತಿ ಹೊಂದಿದವು ಎಂಬುದನ್ನು ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ ಭಾಗ-೪ರಲ್ಲಿ ಹೇಳಿರುವುದು ಹೊಲಿಗೆಯ ಬೆಳವಣಿಗೆ ಕುರಿತದ್ದೇ ಆಗಿದೆ.(ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರವ (ಪು. ೧೯೭೨ ಪು.೧೭೮, ೬೭೭, ೬೭೮, ೬೭೯) ಹೀಗೆ ಜನಪದ ಹೊಲಿಗೆ ಅಭಿಜಾತ ಹೊಲಿಗೆಯಾಗಿ ಬೆಳೆದದ್ದು ಕಾಣುತ್ತೇವೆ.

ಹೊಲಿಗೆ ಕಲೆ ಬೆಳೆದಂತೆ ಅದನ್ನು ಇನ್ನಷ್ಟು ಸುಂದರಗೊಳಿಸಲು ಮನುಷ್ಯ ಅದರಲ್ಲಿ ಚಿತ್ರ ಮೊದಲಾಗಿಯೂ ಬಿಡಿಸಲು ಪ್ರಾರಂಭಿಸಿದ. ಇದುವೆ ಕಸೂತಿ ಕಲೆ ಎನಿಸಿಕೊಂಡಿತು. ಕಸೂತಿ ಕಲೆ ಕೂಡ ಜನಪದದಿಂದ ಅಭಿಜಾತವಾಗಿ ಬೆಳೆಯುತ್ತ ಇಂದು ಯಾಂತ್ರಿಕವಾಗಿ ಕಸೂತಿ ಹಾಕುವ ' ಜಿಗ್ ಜಾಗ್ ' ಯಂತ್ರಗಳವರೆಗೆ ಬೆಳೆದದ್ದು ಕಾಣುತ್ತೇವೆ. ಜೊತೆಗೆ ಕಾಲು ಚೀಲ, ಟೋಪಿ, ಕೈಚೀಲ, ಮೊದಲಾದವುಗಳನ್ನು ಹೊಲಿಯಲು ಬೇರೆ ಬೇರೆ ಪ್ರತ್ಯೇಕ ಯಂತ್ರಗಳೂ ಇವೆ. ಉದಾ : ನಮ್ಮಲ್ಲಿ ' ಓರಲಕ್ 'ಹಾಗೂ 'ಜಿಗ್‌ಜಾಗ್' ಯಂತ್ರಗಳು ಇರುವಂತೆ ಒಂದು ನಿಮಿಷಕ್ಕೆ ೨೦,೦೦೦ ಹೊಲಿಗೆಗಳು ಹಾಕುವ ಯಂತ್ರಗಳೂ ಇಂದು ಕಾಣುತ್ತೇವೆ.

೩. ಹೊಲಿಗೆ ಹಾಗೂ ವಿನ್ಯಾಸಗಳು :

ಹೊಲಿಗೆ ಕೇವಲ ಬಟ್ಟೆಗಳ ಮೇಲಲ್ಲದೆ ಚರ್ಮಗಳ ಮೇಲೆ, ಎಲೆಗಳ ಮೇಲೆ ಹಾಳೆಗಳ ಮೇಲೆ, ಹುಲ್ಲು ಮುಂತಾದವುಗಳ ಮೇಲೆ ಹಾಗೂ ಅಂಗಾಂಗಗಳ ಮೇಲೆ ಹೊಲಿಯುವುದನ್ನು ಕಾಣಬಹುದಾಗಿದೆ.

ಚರ್ಮದ ಮೇಲೆ : ಎತ್ತಿನ ಕೊರಳಲ್ಲಿ ಗೆಜ್ಜೆಗಳು, ಕಟ್ಟಲು ಹಾಕುವ ತೊಗಲಿನ ಪಟ್ಟಿಯ ಮೇಲೆ ಬಳ್ಳಿಯಂತೆ ಸುಂದರವಾಗಿ ಹೊಲಿಯುವುದು, ನಾಯಿಗಳ ಕೊರಳಲ್ಲಿ ಕಟ್ಟುವ ಪಟ್ಟಿಯ ಮೇಲೆ ಕುಸುರಿ, ಕುಸುರಿಯಾಗಿ ಹೊಲಿಯುವುದು, ಕುದುರೆಯ ಮೇಲೆ ಹಾಕುವ ಖೋಗಿಲ ಮೇಲೆ ಹೂವಿನಂತೆ, ಬಳ್ಳಿಯಂತೆ ಹಾಗೂ ಸುತ್ತಲು ಕರಿ ಕಟ್ಟಿದಂತೆ ಹೊಲಿಯುವುದನ್ನು ಕಾಣುತ್ತೇವೆ. ಬಾವಿಯಿಂದ ನೀರೆತ್ತುವ ಮಟ್ಟಿಯ ಮೇಲೆ, ಚಬಕದ ಮೇಲೆ, ಮಿಳಿ ಮುಂತಾದವುಗಳ ಮೇಲೆಯೂ ಸುಂದರವಾದ ಹೊಲಿಗೆಗಳನ್ನು ಕಾಣಬಹುದಾಗಿದೆ. ಸಮಗಾರರು ಹೊಲಿಯುವ ಚಡಾವು ಜೋಡಾ, ಕೋಲಾಪೂರಿ ಚಪ್ಪಲಿ, ಮಹಾರಾಜಾ ಜೂತಾ ಮುಂತಾದವುಗಳ ಮೇಲೆಲ್ಲ ವಿವಿಧ ಬಣ್ಣದ ದಾರ, ಚಮಕಿ, ಗುಂಡಿ ಮುಂತಾದವುಗಳನ್ನು ಕೂಡಿಸಿ ಹೊಲಿಯುವುದು ಹಾಗೂ ಎಲೆ, ಹೂ, ಕಾಯಿ, ಪಶು, ಪಕ್ಷಿ, ಮೊದಲಾದ ಚಿತ್ರಗಳನ್ನು ಬಿಡಿಸಿ ಹೊಲಿಯುವುದು ವಿಶೇಷವಾಗಿದೆ.

ಎಲೆಗಳ ಮೇಲೆ : ತಾಡೋಲೆಗಳ ಮೇಲೆ ಕಬ್ಬಿಣ ಮೊಳೆಯಂಥ ಲೇಖನಿಯಿಂದ ಬರೆದು ಅವುಗಳನ್ನು ಸರಿಯಾಗಿ ಜೋಡಿಸಿ ಹೊಲಿಯುವುದು ಹಾಗೂ ಇವುಗಳನ್ನು ಸುರಕ್ಷಿತವಾಗಿಡಲು ಮೇಲು ಹೊದಿಕೆ ಹೊಲಿಯುವುದು, ಮುತ್ತಿನ ಎಲೆಗಳು ಒಂದನ್ನೊಂದು ಜೋಡಿಸಿ ಚಿಪಟಿಯ ಸಿಬುರಿನಿಂದ ಹೊಲಿಯುತ್ತ ಪತ್ರೋಳಿ ಹಾಗೂ ಡೊಪ್ಪಿ (ಡೊಣ್ಣೆ) ತಯಾರಿಸುವುದು ವಿಶಿಷ್ಟವಾಗಿದೆ. ಕಾರಹುಣ್ಣಿವೆ ಮೊದಲಾದ ಆಚರಣೆಗಳಲ್ಲಿ ಎತ್ತುಗಳನ್ನು ಮೆರೆಸುವಾಗ ಅವುಗಳ ಹಣೆಗೆ ಕಟ್ಟುವ ಭಾಸಿಂಗದ ಹೊಲಿಗೆಯೂ ಚಿಪಟಿಯ ಸಿಬುರು ಹಾಗೂ ದಾರದಿಂದ ಹೊಲಿಯುವುದಾಗಿದೆ. ಮದುಮಕ್ಕಳ ಭಾಸಿಂಗವೂ ವಿವಿಧ ಬಣ್ಣದ ದಾರ, ಚಮಕಿ ಹಾಗೂ ಸಿಬುರಿನಿಂದ ಹೊಲಿದಿರುವುದು ನೋಡುವಂತಿರುತ್ತವೆ.

ಹಾಳೆಗಳ ಮೇಲೆ: ಖಾತೆ, ಕಿರ್ದಿ, ಪಂಚಾಂಗ, ಪುಸ್ತಕ, ಕಾಪಿ ಮೊದಲಾದವುಗಳು ಸ್ವಲ್ಪ ಪುಟಗಳಿದ್ದರೆ ಹೊಲಿಯುವ ರೀತಿ ಹಾಗೂ ಮೇಲು ಹೊದಿಕೆಗಳು ಹೊಲಿಯುವ ರೀತಿ ಮೊದಲಾಗಿ ಸಹಜ ಹೊಲಿಗೆಗಳ ವಿಭಾಗೀಯ (ಸೆಕ್ಷನ್) ಹೊಲಿಗೆ, ಲಪೆಟಾ ಹೊಲಿಗೆಗಳ ಮೊದಲಾದ ಪ್ರಕಾರಗಳನ್ನೂ ಕಾಣುತ್ತೇವೆ. ಇಲ್ಲಿ ವಿಶಿಷ್ಟವಾದ ಚಿತ್ರ ಮೊದಲಾದವುಗಳು ಇರದಿದ್ದರೂ ಹೊಲಿಯುವ ಕಲೆ ಮಾತ್ರ ಬಹು ವಿಶಿಷ್ಟವಾಗಿದೆ. ಪುಸ್ತಕ, ಪ್ರಬಂಧ ಮೊದಲಾದವುಗಳನ್ನು ಹೊಲಿಯುವುದರಲ್ಲಿ ಇಂದು ರಾಜ್ಯ ಹಾಗೂ ದೇಶಮಟ್ಟದಲ್ಲಿ ಪ್ರಖ್ಯಾತಿ ಪಡೆದ ವಿಶಿಷ್ಟ ಹೊಲಿಗೆಗಾರರನ್ನೂ ಕಾಣುತ್ತೇವೆ. ಉದಾ : ಹೈದ್ರಾಬಾದಿನ ನರಸಿಂಹಲು ಅಂಡ್‌ಸನ್ಸ್ ಇವರು ಪುಸ್ತಕ ಹೊಲಿಯುವುದು ಇಂದು ದೇಶಾದ್ಯಂತ ವಿಶಿಷ್ಟ ಹಾಗೂ ಗಟ್ಟಿ, ಜೊತೆಗೆ ಸುಂದರ ಹೊಲಿಗೆ ಎನಿಸಿಕೊಂಡಿದೆ. ಇದೇ ರೀತಿ ಕಟ್ಟು, ಹಾಳೆ ಮೊದಲಾದವನ್ನು ಕತ್ತರಿಸಿ ವಿವಿಧ ಆಕೃತಿ ಕಮಾನು, ಮುಂತಾಗಿ ಹೊಲಿಯುವುದೂ ಸೂಕ್ಷ್ಮ ಹಾಗೂ ನಾಜೂಕಾಗಿಯೇ ಇದೆ.

ಹುಲ್ಲು ಮುಂತಾದವುಗಳ ಮೇಲೆ : ಲವಳಿ ಕಡ್ಡಿ ಮೊದಲಾದವುಗಳನ್ನು ಮುಳ್ಳಿನಿಂದ ಚುಚ್ಚಿ ಅಥವಾ ದಾರದಿಂದ ಹೊಲಿದು ಬೇಕಾದ ಆಕೃತಿಯಲ್ಲಿ ಹಾಸಿಗೆಯಂತೆ ತಯಾರಿಸುತ್ತಾರೆ. ಜೊತೆಗೆ ವಿವಿಧ ರೀತಿಯ ಆಟಿಕೆಗಳು, ಕಲಾಕೃತಿಗಳು, ಸಹ ಸಿಬುರಿನಿಂದ ಅಥವಾ ದಾರದಿಂದ ಹೊಲಿಯುತ್ತಾರೆ.

ಸಿಂದಿ ಮೊದಲಾದ ಜಾತಿಯ ಹುಲ್ಲಿನಿಂದ ಚಾಪೆ ಮುಂತಾದವುಗಳನ್ನು ಹೆಣೆಯುವುದು, ಹಾಗೂ ಹೆಣೆದ ಚಾಪೆಗಳಿಗೆ ಸುತ್ತಲು ಕರಿ ಕಟ್ಟಿದಂತೆ ಬಣ್ಣದ ಬಟ್ಟೆಯ ಅಂಚು ಹಚ್ಚಿ ಹೊಲಿಯುತ್ತಾರೆ. ಇವುಗಳಂತೆ ಕೂರಬುಟ್ಟಿ, ಹೆಂಡಿಬುಟ್ಟಿ, ಗುಮ್ಮಿ ಕರಸಿ ಮೊದಲಾದವುಗಳನ್ನು ತಯಾರಿಸಿ ಅವುಗಳು ಬಹಳ ದಿವಸದವರೆಗೆ ಬಾಳಿಕೆ ಬರಲೆಂದು ಸುತಳಿ, ಫುಂಡಿ ಮುಂತಾದವುಗಳಿಂದ ಹೊಲಿಯುತ್ತಾರೆ. ಛೆಪ್ಪರು (ಚೆಪ್ಪರು) ಹೊಚ್ಚು

(ಕಟ್ಟು) ವಾಗ ಮೇಲಿನ ಹುಲ್ಲು ಹಾರದಿರಲೆಂದು ಹಾಗೂ ಸರಿಯಾಗಿ ಕೂಡಲೆಂದು ಮೇಲೊಂದು ಪೋಕ ಹಚ್ಚಿ ಸೂಜಿ ಕಟಗಿಯಿಂದ ಹೊಲಿಯುತ್ತಾರೆ. (ಇದಕ್ಕೆ ಸೂಜಿಕಟಗಿ, ಹೊಡೆಯುವುದು, ತಿರುಗಿಸುವುದು ಎನ್ನುತ್ತಾರೆ) ಇದೇ ರೀತಿ ಕುಳಭಾನ ಮೇಲೆ ಇರುಳಿ ಹೊಚ್ಚುವುದು ಕೊಟ್ಗಿ ಕಟ್ಟುವುದು - ಮುಂತಾದಲೆಲ್ಲ ವಿಶಿಷ್ಟ ಹೊಲಿಗೆಗಳನ್ನು ಕಾಣುತ್ತೇವೆ.

ಹುಲ್ಲು ಮುಂತಾದವುಗಳಲ್ಲಿಯ ಹೊಲಿಗೆಗಳಾದರೂ ಬಹಳ ಲೆಕ್ಕದಿಂದ ಹೊಲಿಯಬೇಕಾಗುತ್ತದೆ. ಇಲ್ಲದಿದ್ದರೆ ಹೊಲಿದ ಛೆಪ್ಪರು , ಇರುಳಿ, ಕೊಟ್ಗಿ ಮೊದಲಾದವುಗಳು ಮಳೆಗೆ ಸೋರುತ್ತವೆ. ಹೀಗಾಗಿ ಹುಲ್ಲಿನ ಮೇಲೆ ಹೊಲಿಯುವುದು ಒಂದು ಕೌಶಲ್ಯಯುಕ್ತ ತಂತ್ರಗಾರಿಕೆ ಆಗಿದೆ.

ಬಟ್ಟೆಗಳ ಮೇಲೆ : ಹೊಲಿಗೆ ಪ್ರಮುಖ ತಾಣವೆಂದರೆ ಬಟ್ಟೆ. ಇಂದು ಬಟ್ಟೆಗಳ ಮೇಲೆ ಅನೇಕ ರೀತಿಯ ಹೊಲಿಗೆ ಹಾಗೂ ವಿನ್ಯಾಸಗಳನ್ನು ಕಾಣುತ್ತೇವೆ.

ಖವುದಿ, ಕುಂಚಿ, ಕುಂಚಿಕಲಯಿ, ಎಲಿಚೆಂಚಿ, ಬಾಗಿಲಪರ್ದಾ, ಛೆರಚೀಲಾ, ಎತ್ತಿನ ಝೂಲು, ಲಂಬಾಣಿಗರ ಉಡಿಗೆ, ತಲೆದಿಂಬಿನ ಹೊದಿಕೆ, ಕೈಚೀಲ, ಗಂಗಾಳ ಮುಂತಾದವುಗಳ ಮೇಲೆ ಮುಚ್ಚುವ ಪಾವುಡು, ಭಟರ್ ಚೀಲಾ, ಗದ್ದಿಗೆ ಬಟ್ಟೆ, ಟೇಬಲ್ ಮುಂತಾದವುಗಳ ಮೇಲೆಲ್ಲ ವಿಶಿಷ್ಟವಾದ ಹೊಲಿಗೆಗಳನ್ನು ಕಾಣಬಹುದಾಗಿದೆ.

ಹೊಲಿಗೆಗಳಲ್ಲಿಯು ಅನೇಕ ರೀತಿಯ ಹೆಸರಿನ ಹೊಲಿಗೆಗಳಿವೆ. ಸೀರೆ, ಧೋತರ, ನಿಕ್ಕರ, ಫಡಕಿ ಮುಂತಾದವುಗಳು ಹರಿದಾಗ ಅಲ್ಲಿ ತುಂಡು ಬಟ್ಟೆ ಹಚ್ಚಿ ಹೊಲಿಯುವುದಕ್ಕೆ 'ಠಿಗಳು' ಎಂದು ; ಸೀರೆ ಧೋತ್ರ ಮುಂತಾದವು ಹೆಚ್ಚಿಗೆ ಹರಿದರೆ ಒಂದರಲ್ಲಿ ಎರಡಾಗಿ ಹರಿದು ಸರಿಯಾಗಿರುವ ಭಾಗಗಳನ್ನು ಜೋಡಿಸಿ ಹೊಲಿಯುವುದಕ್ಕೆ 'ದಿಂಡು' ಎಂದು; ಖವುದಿ, ಘೊಂಗಡಿ , ತಟ್ಟು ಮೊದಲಾದವುಗಳ ಕೊನೆಗೆ ಹೊಲಿಯುವುದಕ್ಕೆ 'ಕರಿ' ಕಟ್ಟೋದು ಎಂದು; ಪ್ಯಾಂಟು , ಶರ್ಟು, ಚೆಡ್ಡಿ ಮೊದಲಾದವುಗಳ ಕೊನೆಗೆ ಮಡಿಕೆ ಹಾಕಿ ಕಾಣದಂತೆ ಸೂಕ್ಷ್ಮವಾಗಿ ಹೊಲಿಯುವುದಕ್ಕೆ 'ತುರಪಯಿ' ಎಂದು; ಕುಬ್ಬಸ, ಅಂಗಿ, ಚೆಡ್ಡಿ ಮೊದಲಾದವುಗಳಿಗೆ ಗುಂಡಿ ಹಚ್ಚುವ ಸಲುವಾಗಿ ತೂತು ಹಾಕಿ ಹೊಲಿಯುವುದಕ್ಕೆ 'ಕಾಜು' ಎಂದು; ಹಾಗೂ ಯಾವುದೇ ಬಟ್ಟೆಯ ಮೇಲೆ ದೂರ ದೂರ ಹೊಲಿಗೆ ಹಾಕುವುದಕ್ಕೆ 'ಎಳಿ' ಹಾಕುವುದು ಎಂದು; ಖವುದಿ ಹೊಲಿಯುವಾಗ ಮೂಲೆಯಲ್ಲಿ ತಿರುವು ಬರುವಲ್ಲಿ ಹೊಲಿಯುವುದಕ್ಕೆ 'ಗುಬ್ಬಿ ಕಾಲು' ಎಂದು ಯಾವುದೇ ಅಂಗಾಂಗಕ್ಕೆ ಪೆಟ್ಟಾಗಿ ಇಲ್ಲವೆ ಮೊಳೆ ಮೊದಲಾಗಿ ತೊಡಕಿ ಚರ್ಮ ಮುಂತಾಗಿ ಹರಿದರೆ, ಶಸ್ತ್ರ ಚಿಕಿತ್ಸೆ ಮೊದಲಾಗಿ ಮಾಡಿ ಹೊಲಿಯುವುದಕ್ಕೆ 'ಟಾಕಿ' ಎಂದು; ಚೆಂಡು ಮೊದಲಾದವುಗಳಿಗೆ ಜಾಲಿಯಂತೆ ಹೊಲಿಯುವದಕ್ಕೆ 'ಗೋಪು' ಹಾಕಿ ಹೊಲಿಯುವುದು ಎಂದು; ಬಟ್ಟೆಗಳ ಮೇಲೆ ವಿವಿಧ ಬಣ್ಣದ ದಾರಗಳಿಂದ ಚಿತ್ತಾರ ಮೊದಲಾಗಿ ಬಿಡಿಸುತ್ತ ಹೊಲಿಯುವುದಕ್ಕೆ 'ಕಸೂತಿ' ಎಂದು

3

ಕರೆಯುವುದು ಕಾಣುತ್ತೇವೆ. ಹೀಗೆ ಹೊಲಿಗೆಯ ಅನೇಕ ಪ್ರಕಾರಗಳಿಗೆ ಅನೇಕ ಹೆಸರುಗಳಿಂದ ಗುರುತಿಸುವುದು ಹೊಲಿಗೆ ಕಲೆಯ ವೈಶಿಷ್ಟ್ಯವಾಗಿದೆ.

೧. **ಖವುದಿ:** ಖವುದಿ ಎನ್ನುವುದಕ್ಕೆ ಖವುದಿ, ಕವುಂದಿ, ಕವುದಿ ಮುಂತಾಗಿ ಕರೆಯುತ್ತಾರೆ. ಲಮಾಣಿಗರು ಗೋದಡಿ ಎಂದರೆ, ಮರಾಠಿಗರು ವಾಕಳ, ವಾಕಳಿ, ಮತ್ತೆ ಕೆಲವರು ಗೋದಡಿ ಎಂದು ಕರೆಯುತ್ತಾರೆ.

ಖವುದಿ ಹೊಲಿಯಲು ಹರಿದ ಸೀರೆ ಅಥವಾ ಧೋತರು ತೆಗೆದುಕೊಂಡು ಒಂದನ್ನೊಂದು ದಿಂಡು ಹಾಕಿ ಪಾಲಾ ಹಚ್ಚುತ್ತಾರೆ. ಮೊದಲಿಗೆ ಪಾಲಾ ಹಚ್ಚುವುದಕ್ಕೆ ಬುಡಪಾಲಾ ಎನ್ನುತ್ತಾರೆ. ಅಂದರೆ : ಕೆಳಗೆ ಒಂದು ಅರಿಬೆ ಹಸಿಮಾಡಿ ಸರಿಯಾಗಿ ಹಾಸಿ ಅದರ ಮೇಲೆ ಸಣ್ಣ ಸಣ್ಣ ಅರಿಬೆಗಳು ಹಾಸಿ ಮತ್ತೆ ಮೇಲೊಂದು ಅಖಂಡ ಅಥವಾ ದಿಂಡು ಹಾಕಿದ ಒಂದು ಅರಿಬೆ ಹಾಕಿ ಒಂದು ಗೇಣಿಗೊಂದರಂತೆ ಅಂತರದಲ್ಲಿ ಎಳಿಹಾಕಿಕೊಳ್ಳುತ್ತಾರೆ. ಎಳಿಗಳು ಹಾಕಿದ ಮೇಲೆ ಅದು ಸರಿಯಾಗಿ ಒತ್ತಿಕೂಡಲೆಂದು ಮಡಿಕೆ ಮಾಡಿ ಒಂದು ಮಣೆಮೇಲೆ ಇಟ್ಟು, ಮೇಲೊಂದು ಮಣೆ ಇಟ್ಟು ಅದರ ಮೇಲೆ ಕಲ್ಲು ಮೊದಲಾಗಿ ಭಾರಹಾಕಿ ಒಂದೆರಡು ದಿವಸ ಹಾಗೇ ಇಡುತ್ತಾರೆ. ನಂತರ ಅದಕ್ಕೆ ಸುತ್ತಲು ತುಂಡು ತುಂಡು ಬಟ್ಟೆಗಳು ಹಚ್ಚುತ್ತ ಕರಿಕಟ್ಟುತ್ತಾರೆ. ಕರಿಕಟ್ಟುವುದು ಮುಗಿದ ಮೇಲೆ ಮತ್ತೆ ಒಳಗಡೆಗೆ ತುಂಡು ತುಂಡು ಬಟ್ಟೆಗಳನ್ನು ಜೋಡಿಸುತ್ತ ತಮಗೆ ಸಮಯ ಸಿಕ್ಕಂತೆ ದಿನಾಲು ಸ್ವಲ್ಪ, ಸ್ವಲ್ಪ ಹೊಲಿಯುತ್ತಿರುತ್ತಾರೆ.

ಖವುದಿ ಹೊಲಿಯಲು ಪಡಸಾಲಿ, ಅಂಗಳು, ಪರಕಾನಿ (ಬಂತು), ಮನೆಯ ಮುಂದಿನ ಕಟ್ಟೆ ಮುಂತಾಗಿ ತಮ್ಮ ತಮ್ಮ ವಸತಿಯನುಕೂಲದಂತೆ ಕೂಡುತ್ತಾರೆ. ಒಂದೇ ಖವುದಿ ಆ ಕಡೆಗೊಬ್ಬರು ಈ ಕಡೆಗೊಬ್ಬರು ಕೂತೂ ಇಬ್ಬಿಬ್ಬರು ಆಗಿಯೂ ಹೊಲಿಯುತ್ತಾರೆ. ಖವುದಿ ಹೊಲಿಯಲು ಹಚ್ಚುವ ತುಕಡಿ ಅರಬಿಗಳು ಹೆಚ್ಚಾಗಿ ಹೊಸದಾದ ಚೆಂದಿ ಅರಬಿಗಳೇ ಆಗಿರುತ್ತವೆ. ಅವು ಹೆಚ್ಚುಕಡಿಮೆ ಇದ್ದರೆ ಈಳಿಗೆ ಮುಂತಾದವುಗಳಿಂದ ಕೊಯಿದು ಸರಿಪಡಿಸಿಕೊಳ್ಳುತ್ತಾರೆ. ಸ್ವಲ್ಪಹೆಚ್ಚು ಕಡಿಮೆ ಇದ್ದರೆ ಹೊಲಿಯುವಾಗಲೇ ಒಳ ಮಡಿಕೆ ಹಾಕಿಕೊಂಡು ಹೊಲಿಯುತ್ತಾರೆ. ಹೀಗೆ ತುಣುಕು ಬಟ್ಟೆಗಳನ್ನು ಜೋಡಿಸಿಕೊಳ್ಳುತ್ತ ವಿವಿಧ ರೀತಿಯ ಚಿತ್ತಾರಗಳನ್ನು ಬಿಡಿಸುತ್ತ ಹೊಲಿಯುವ ಕಲೆ ಅದ್ಭುತವಾಗಿದೆ. ಇದು ಕಾಣಲು ಸಾಮಾನ್ಯವಾಗಿ ಕಾಣಬಹುದಾದರು, ಪರೀಕ್ಷಿಸಿ ನೋಡಿದಾಗ ಜನಪದ ಮಹಿಳೆಯ ಖವುದಿ ಹೊಲಿಯುವ ಕಲೆ ಸಾಧಾರಣವಲ್ಲ ಎನಿಸುತ್ತದೆ.


ಖವುದಿ ಹೊಲಿಯುವಾಗ ಸುತ್ತಲು ಹೊಲಿಯುತ್ತ, ಹೊಲಿಯುತ್ತ ಒಳಗೆ ನಡುವಿನ ತನಕ ಹೋಗುತ್ತಾರೆ. ತುಂಡು, ತುಂಡು ಬಟ್ಟೆಗಳು ಹಚ್ಚುತ್ತ ಹೊಲಿಯುತ್ತ ಚಿತ್ರ ತೆಗೆಯಬೇಕಾದರೆ ಮೊದಲು ಹಚ್ಚುವ ತುಣುಕು ಎಲ್ಲಿಹಚ್ಚಿ, ಹೇಗೆ ಹೊಲಿದರೆ ಮುಂದಿನ

ತುಣುಕು ಎಲ್ಲಿ ಕೂಡುತ್ತದೆಂಬುದು ಮನದಲ್ಲಿಯೇ ಕಲ್ಪಿಸಿಕೊಂಡು ಯಾವುದೇ ಆಧಾರವಿಲ್ಲದೆ ನೇರವಾಗಿ ಹೊಲಿಯುವುದು ಯಾವ ಕಲೆಗೂ ಕಡಿಮೆಯಿಲ್ಲ.

ಖವುದಿ ಹೊಲಿಯುವ ಕಲೆಯಲ್ಲಿ ಥೆರಚೀಲಾ, ಖಬ್ಬಿನ ಮಳು, ಗಂಗಿ-ಗೌರಿ, ಗುಬ್ಬಿಮನಿ, ರಾಜ-ರಾಣಿ, ಪಚೇಸಿಮನಿ, ಗುಬ್ಬಿ, ಕರಬನು, ದೀಪ, ಹಣತಿಗೆ, ಕಣ್ಣು ಭಾರಂಭಾಯಿ, ರಾಜರಮನಿ, ಶಿವಲಿಂಗ, ವಿವಿಧ ರೀತಿಯ 'ಓಂ' ಗಳು ಹೂಗಳು, ತುಳಸಿಕಟ್ಟೆ, ಸ್ವಸ್ತಿಕ, ಷಟ್‌ಕೋನ್ ಮೊದಲಾದವುಗಳಲ್ಲದೆ ಬರೆಯಲು ಬಂದವರು ಸುಸ್ವಾಗತ ಮುಂತಾಗಿ ಬರೆದುಕೊಟ್ಟರೆ ಅದರಂತೆಯೇ ಹೊಲಿಯುವುದು ಕಲಾತ್ಮಕವಾಗಿದೆ.

ಖವುದಿ ಹೊಲಿಯುವಾಗ ಮೂಲಿಯಿಂದ ಮೂಲಿಗೆ ಹೊಲಿಗೆ ತಿರುಗಿಸುವುದಕ್ಕೆ 'ಗುಬ್ಬಿಕಾಲು' ಎನ್ನುತ್ತಾರೆ. ಗುಬ್ಬಿ ಕಾಲಿನಂತೆ ಕೋನದ ರೀತಿಯಲ್ಲಿ ಹೊಲಿಗೆ ಹೊಲಿದು ಮತ್ತೆ ಮುಂದಿನ ಮೂಲಿತನಕ ನೇರವಾಗಿ ಹೊಲಿಯುತ್ತ ಹೋಗುತ್ತಾರೆ. ಹೀಗೆ ಹೊಲಿಯುವ ಹೊಲಿಗೆಗಳು ಸಣ್ಣದಾಗಿ ಹತ್ತಿರ-ಹತ್ತಿರ ಇದ್ದರೆ ಅದು 'ಬಾರೀಕ ಹೊಲ್ಗಿ' ದೂರ, ದೂರ ಇದ್ದರೆ 'ಧಮ್ ಧಮ್ ಹೊಲ್ಗಿ' ಎಂದು ಕರೆಯುತ್ತಾರೆ.

'ಬಾರೀಕ ಹೊಲ್ಗಿ' ಯಿಂದ ಹೊಲಿದ ಖವುದಿ ಬಹಳ ದಿನ ಬಾಳಿಕೆ ಬರುತ್ತದೆ. ಕೆಲವರು ಇನ್ನು ಹೆಚ್ಚಿನ ಬಾಳಿಕೆ ಬರಲಿ ಹಾಗೂ ಹೆಚ್ಚಿನ ಸುಂದರತೆ ಕಾಣಲಿ ಎಂದು ಬಾರೀಕ ಹೊಲ್ಗಿ ಜೊತೆಗೆ ನಡುನಡುವೆ ಚೌ ಚೌ ಕೋನವಾಗಿ ಗುಬ್ಬಿಕಾಲಿನ ಹೊಲಿಗೆಯಿಂದಲೇ ಹೊಲಿಯುತ್ತಾರೆ.



ಈ ಚಿತ್ರ ಖವುದಿಯ ಹಿಂಬದಿ ಭಾಗವಿದೆ. ಮುಂಭಾಗ ಇದೇ ಶೈಲಿಯ ಇದ್ದು ಬೇರೆ ಬಣ್ಣಗಳು ಹಾಗೂ ಆಕಾರದ ಚಿತ್ತಾರಗಳು ಇರುತ್ತವೆ.

ಗುಬ್ಬಿಕಾಲಿನ ಚೌಕಾಕಾರಗಳು ಮಾಡುತ್ತ ಹೊಲಿಯುವ ಕಲೆ ಅದ್ಭುತವಾಗಿದೆ. ಏಕೆಂದರೆ ಖವುದಿ ನೋಡಿ ಇದ್ದಕ್ಕಿದ್ದಂತೆ ಹಾಳೆಯ ಮೇಲೆ ಚಿತ್ತಾರ ಬಿಡಿಸುವುದೇ ಕಷ್ಟ ಇನ್ನು ಬಟ್ಟೆಯ ಮೇಲೆ ಯಾವುದೇ ರೇಖೆಗಳಿರದೆ, ಗುರುತುಗಳು ಮಾಡಿಕೊಳ್ಳದೆ ತುಂಡು ಬಟ್ಟೆಗಳಿಂದ ಚಿತ್ತಾರಗಳು ಬಿಡಿಸುತ್ತ ಹೊಲಿಗೆಯ ಒಂದೊಂದೇ ಸುತ್ತು ಹೊಲಿಯುತ್ತ, ಖವುದಿಯ ನಡುವಿನ ತನಕ ಹೋಗುತ್ತಾರೆ. ಖವುದಿಯ ನಡುವಿಗೆ 'ಹೊಟ್ಟೆ' ಎನ್ನುತ್ತಾರೆ. ಹೊಟ್ಟೆವರೆಗೆ ಹೊಲಿಯುತ್ತ ಹೋಗುವಾಗಲೇ ಮುಂದಿನ ಹೊಲಿಗೆ ಹಾಗೂ ಚಿತ್ತಾರ ಪೂರ್ಣಗೊಳಿಸುವ ತುಂಡು ಬಟ್ಟೆ ಎಲ್ಲಿ ಹೇಗೆ ಕೂಡಿಸಬೇಕೆಂಬುದು ಖವುದಿ ಹೊಲಿಯುವವಳ ಕೌಶಲ್ಯವಾಗಿದೆ.

ಖವುದಿಗಳು ಮೂರು ಮಳ (ಮೊಳ) ನಾಲ್ಕು ಮಳ, ಆರು ಮಳ ಮುಂತಾಗಿ ಮೊಳಕ್ಕೆ ಅಳತೆಯ ಮೇಲೆ ಚಿಕ್ಕವು, ದೊಡ್ಡವುಗಳಾಗಿ ಹೊಲಿದುಕೊಳ್ಳುತ್ತಾರೆ. ಚಿಕ್ಕಮಕ್ಕಳಿಗೆ ಸಾಕಾಗುವಷ್ಟು ಸಣ್ಣ-ಪುಟ್ಟ ಖವುದಿಗಳ ಜೊತೆಗೆ ಐದಾರು ಜನರು ಹಾಸಿಕೊಳ್ಳುವಷ್ಟು, ಹೊಚ್ಚಿಕೊಳ್ಳುವಷ್ಟು ದೊಡ್ಡ ದೊಡ್ಡ ಖವುದಿಗಳೂ ಇರುತ್ತವೆ.

ಇಷ್ಟೊಂದು ವೈವಿಧ್ಯಮಯವಾಗಿ ಹೊಲದ ಖವುದಿ ಜನಪದರಿಗೆ ರತ್ನಗಂಬಳಿ ಇದ್ದಂತೆ ಇರುತ್ತವೆ. ಹುಟ್ಟಿನಿಂದ ಖವುದಿಯಲ್ಲಿಯೇ ಬೆಳೆದು ಖವುದಿಯಲ್ಲಿಯೇ ಸಾವನ್ನಪ್ಪುತ್ತಾರೆ. ಅಂದರೆ ಹಾಸಲು, ಹೊದೆಯಲು ಜನಪದರಿಗೆ ಪ್ರಮುಖವಾದದ್ದೆಂದರೆ ಖವುದಿ. ಇಂತಹ ಖವುದಿ ಪರದೇಶದವರು ಕಂಡು ಎಷ್ಟೊಂದು ಸೂಕ್ಷ್ಮವಾದ ಡಿಜಾಯಿನ್‌ಗಳಿಂದ ಹೊಲಿದಿರುವರಲ್ಲ! ಎಂದು ಆಶ್ಚರ್ಯ ಪಟ್ಟ ಸಂಗತಿಗಳೂ ಹಲವಿವೆ. ಒಬ್ಬ ಪರದೇಶಿಗರಂತೂ ಇದನ್ನು ಕಂಡು ಮಾರು ಹೋಗಿ ತಾವೂ ಹೀಗೆ ತಯಾರಿಸಬೇಕೆಂದು ವಿವಿಧ ಬಣ್ಣದ ಹೊಸ ಬಟ್ಟೆಗಳನ್ನು ಖರೀದಿಸಿ ಕತ್ತರಿಸಿ ಖವುದಿ ಹೊಲಿಯಲು ಪ್ರಯತ್ನಿಸಿದರಂತೆ. ಆದರೆ ನಮ್ಮ ಸಂಸ್ಕೃತಿ ತುಂಡು, ತುಂಡಾಗಿರುವ ಹಾಗೂ ಕೆಲಸಕ್ಕೆ ಬಾರದ ಚಿಂದಿಗಳಿಗೆ ಪುನಃ ಜೀವ ತುಂಬಿ ಹಳೆಯದರಲ್ಲಿ ಹೊಸದನ್ನು ಸೇರಿಸಿ, ಎರಡೂ ಒಂದಾಗಿ ಹೊಲಿದು ಖಂಡವಾಗಿರುವುದನ್ನು ಅಖಂಡವಾಗಿಸುವುದಾಗಿದೆ. ಇಂತಹ ಒಂದು ವಿಶೇಷ ಕೌಶಲ್ಯ ಖವುದಿ ಹೊಲಿಗೆಯ ಕಲೆಯಾಗಿದೆ.

ಕುಂಚಿ : ಇದು ಕೂಡ ಹರಿದ ಹಾಗೂ ಹಳೆಯ ಸೀರೆ, ಧೋತರು ಮುಂತಾದ ಬಟ್ಟೆಗಳಿಂದಲೇ ಹೊಲಿಯುತ್ತಾರೆ. ಇದು ಜನಪದ ಮಹಿಳೆಯರಿಗೆ ಜೀವನ ಸಂಗಾತಿ! ಚಳಿಗಾಲ, ಮಳೆಗಾಲ ಅಲ್ಲದೆ ಮನೆಯಲ್ಲಿದ್ದರೂ ಸಹ ಸದಾ ಕುಂಚಿ ಹೊದ್ದುಕೊಂಡೆ ಕೆಲಸ ಮಾಡುತ್ತಿರುತ್ತಾರೆ. ಜನಪದ ನಾರಿಯರು ಹೊಲಕ್ಕೆ ಹೋದರೆ ಹುಲ್ಲು ಮುಂತಾಗಿ ಹಾಕಿಕೊಂಡು ತರುತ್ತಾರೆ. ಗಂಡಸರು ಸದಾ ಪೊಂಗಡಿ ಜೊತೆಗಿಟ್ಟುಕೊಳ್ಳುವಂತೆ ಹೆಂಗಸರು ಮಳೆ, ಗಾಳಿ, ಚಳಿ, ಬಿಸಿಲು ಮುಂತಾದವುಗಳನ್ನೆ ಕುಂಚಿಯಿಂದ ರಕ್ಷಿಸಿಕೊಳ್ಳುತ್ತಾರೆ.

ಕುಂಚಿ ಚೌಕಾಕಾರವಿದ್ದು ಎರಡು ಕಡೆಗೆ ಹೊಲಿದು ಉಳಿದೆರಡು ಕಡೆಗೆ ಹೊಲಿಯದೆ ತೆರೆದಿರುತ್ತದೆ. ಈ ತೆರೆದ ಭಾಗದಿಂದಲೇ ಹೊದೆದುಕೊಳ್ಳುತ್ತಾರೆ. ಹುಲ್ಲು ಮುಂತಾಗಿ ತುಂಬಿಕೊಂಡು ತಂದರೂ ಇದೇ ಭಾಗದಿಂದ ಹಾಕುತ್ತಾರೆ, ತೆಗೆಯುತ್ತಾರೆ. ಕುಂಚಿ ಖವುದಿಯಂತೆ ಮಧ್ಯದಲ್ಲೆಲ್ಲ ಹೊಲಿಗೆಗಳು ಇರದೆ ಕೊನೆಗೆ ಮಾತ್ರ ಹೊಲಿದಿರುತ್ತಾರೆ. ಜೊತೆಗೆ ವಿಶೇಷ ಚಿತ್ತಾರಗಳು ಮೊದಲಾಗಿ ಏನು ಇರದೆ ತೀರಾ ಸಾಧಾರಣವಾಗಿರುತ್ತದೆ. ಹೆಚ್ಚೆಂದರೆ ಕುಂಚಿಯ ಒಳಗೊಂದು ಬಣ್ಣ ಇದ್ದರೆ ಹೊರಗೊಂದು ಬಣ್ಣ ಇರುತ್ತದೆ. ಇದೂ ಸಹ ಎರಡು ಬಣ್ಣಗಳು ಮಾಡಬೇಕೆಂದು ಮಾಡದೆ ಒಂದು ತುಂಡು ಸೀರೆ ಇನ್ನೊಂದು ಧೋತರು ತೆಗೆದುಕೊಂಡು ಒಂದನ್ನೊಂದು ಹೊಲಿಯುವುದರಿಂದ ಎರಡು ಬಣ್ಣ ಕಾಣುತ್ತದಷ್ಟೇ.

ಇದರ ಇನ್ನೊಂದು ಪ್ರಮುಖ ಕಾರ್ಯವೆಂದರೆ ಸತ್ತವರ ಮಣ್ಣಿಗೆ ಹೋಗುವುದು. ಅಂದರೆ ಜನಪದ ಮಹಿಳೆಯರಿಗೆ ಯಾರದೇ ಸತ್ತಸುದ್ದಿ ಬಂದು ಮಣ್ಣಿಗೆ ಹೋಗಬೇಕಾದರೆ 'ಕೈಯಲ್ಲೊಂದು ಕುಂಚಿ ತಕೊಂಡು ನಡಿ' ಎಂದು ಹೇಳುತ್ತಾರೆ ಹಾಗೂ ಕುಂಚಿ ಹಿಡಿದುಕೊಂಡು ಹೋಗುತ್ತಾರೆ. ಹೀಗೆ ಕುಂಚಿ ಹಿಡಿದುಕೊಂಡು ಹೋಗುವಾಗ ನೋಡಿದವರಿಗೆ ತಕ್ಷಣ ಗೊತ್ತಾಗುತ್ತದೆ, ಇವರು ಮಣ್ಣು ಮಾಡಲು ಹೊರಟಿದ್ದಾರೆ ಎಂದು. ಹೀಗೆ ಕುಂಚಿಯ ಪಾತ್ರವೂ ವಿವಿಧ ಪ್ರಕಾರಗಳಲ್ಲೆಲ್ಲಾ ಕಾಣಬಹುದಾಗಿದೆ.

೩. **ಕುಂಚಿ ಕುಲಯಿ :** ಇದು ಮಕ್ಕಳಿಗಾಗಿ ವಿಶೇಷ ರೀತಿಯಲ್ಲಿ ಹೊಲಿದಿರುವಂಥದ್ದು. ತಲೆಗೆ ಕುಲಾಯಿಯಂತೆ ಕಟ್ಟಲು ಹೊಲಿದು ಅದಕ್ಕೆ ಹತ್ತಿಕೊಂಡೆ ಕೆಳಗೆ ಅಂದರೆ ಬೆನ್ನಿನ ಮೇಲೆ ಟೊಂಕದವರೆಗೆ ಹೊದಿಕೆಯಾಗಿರುತ್ತದೆ. ಇದಕ್ಕೆ ವಿವಿಧ ಬಣ್ಣದ ಮುತ್ತುಗಳು, ಗುಂಡಿಗಳು, ಹಾಗೂ ಕುಲಾಯಿ ಸುತ್ತ ರಿಬ್ಬನ್ನಿನ ಝೂಲರ ಮುಂತಾಗಿ ಹೊಲಿದು ಮಗುವಿಗೆ ಹೊಚ್ಚಿದಾಗ ಮುದ್ದಾದ ಮಗು ಇನ್ನು ಮುದ್ದಾಗಿ ಕಾಣುವಂತೆ ಅಲಂಕಾರಗೊಳಿಸಿರುತ್ತಾರೆ.

೪. **ಥೆರಚೀಲಾ :** ಇದು ಚೌಕಾಕಾರದ ತುಂಡು ತುಂಡು ಬಟ್ಟೆಗಳಿಂದ ಪಾಕೇಟುಗಳಂತೆ ಚಿಕ್ಕ ಚಿಕ್ಕ ಚೀಲಗಳನ್ನು ಮಾಡಿ ಮೇಲೆ ಏಳು ಅಥವಾ ಐದು ನಂತರ ಕೆಳಗೆ ಒಂದೊಂದು ಕಡಿಮೆಯಂತೆ ಪಾಕೇಟುಗಳನ್ನು ಹಚ್ಚುತ್ತಾ ಹೊಲಿಯುತ್ತಾರೆ. ಕೆಲವರು ಒಂದೊಂದು ಪಾಕೇಟುಗಳಲ್ಲಿ ಮತ್ತೆ ಎರಡು-ಮೂರು ಖಾನೆಗಳು ಮಾಡಿಕೊಂಡು, ಬಣ್ಣ ಬಣ್ಣದ ಬಟ್ಟೆಗಳಿಂದಲೂ ಹೊಲಿದಿರುತ್ತಾರೆ. ಕೆಲವರು ಚೌಕಾಕಾರದ ಬದಲಾಗಿ ದುಂಡಗೆ, ಹೂವಿನಂತೆಯೂ ಪಾಕೇಟುಗಳನ್ನು ಮಾಡಿ ಹೊಲಿಯುತ್ತಾರೆ. ಹೀಗೆ ಹೊಲಿದ ಥೆರಚೀಲ ಗೋಡೆಗೆ ತೂಗು ಹಾಕುತ್ತಾರೆ. ಇದು ಕಾಣಲು ಸುಂದರ ಕಲೆಯ ಜೊತೆಗೆ ದಿನನಿತ್ಯದ ಉಪಯೋಗಕ್ಕೆ ಬರುವಂಥದ್ದಾಗಿದೆ. ಉದಾ: ಅಡಕಿ, ಸೋಪು, ಚಿಲ್ಲರೆ ದುಡ್ಡು

ಮುಂತಾದ ಸಣ್ಣ-ಪುಟ್ಟ ವಸ್ತುಗಳು ಛೆರಚೀಲದಲ್ಲಿ ಇಡುತ್ತಾರೆ. ಬಹುಶಃ ಇಂದಿನ ಲೆಟರ್ ಬಾಕ್ಸ್ ಮೊದಲಾದವುಗಳಿಗೆ ಈ ಛೆರಚೀಲವೇ ಮೂಲ ಆಗಿರಬೇಕೆನಿಸುತ್ತದೆ.

೫. ಬಾಗಿಲ ಪರ್ದಾ : ಬಾಗಿಲಿಗೆ ಕಟ್ಟುವ ಸಲುವಾಗಿ ಕಮಾನಿನ ಆಕಾರದಲ್ಲಿ ಪರದೆಗಳನ್ನು ಹೊಲಿದಿರುತ್ತಾರೆ. ಇವುಗಳ ಮೇಲೆ ಶಿವಲಿಂಗ ಗೊಂಬೆ ಮೊದಲಾದ ಚಿತ್ರಗಳೂ ಬಿಡಿಸಿರುತ್ತಾರೆ. ಕಮಾನಿನಾಕಾರದ ಅರ್ಧ ಬಾಗಿಲ ಪರದೆಗಳ ಜೊತೆಗೆ ಪೂರ್ಣ ಬಾಗಿಲು ಮುಚ್ಚುವಷ್ಟು ಪರದೆಗಳನ್ನೂ ಹೊಲಿದಿರುತ್ತಾರೆ. ಇವುಗಳ ಮೇಲೆ ಬಸವಣ್ಣ ಲಕ್ಷ್ಮೀ, ಸರಸ್ವತಿ, ಗಣಪತಿ, ಶಿವ, ಪಾರ್ವತಿ, ಶಿಲಾಬಾಲಿಕೆ ವಿವಿಧ ರೀತಿಯ ಹೂಗಳು-ಗಿಡಗಳು ಮೊದಲಾದ ಚಿತ್ರಗಳನ್ನು ವಿವಿಧ ಬಣ್ಣಗಳ ದಾರದಿಂದ ಹೊಲಿದಿರುತ್ತಾರೆ. ಹೀಗೆ ವಿಶಿಷ್ಟರೀತಿಯಲ್ಲಿ ಚಿತ್ರಗಳು ಮೊದಲಾಗಿ ದಾರ- ಸೂಯಿಂದಲೇ ಹೆಣೆಯುವುದು, ಹೊಲಿಯುವುದು ಕಸೂತಿ ಕಲೆಯಾಗಿ ರೂಪ ತಾಳಿರುವುದು ಗಟ್ಟಿ ಆಧಾರವೆನಿಸುತ್ತದೆ.

೬. ಎಲಿಚೆಂಚಿ : ಇದರಲ್ಲಿ ಎಲೆ , ಅಡಿಕೆ, ಸುಣ್ಣ, ಕಾಚು, ತಂಬಾಕು ಮುಂತಾಗಿ ಇಟ್ಟುಕೊಳ್ಳಲು ತಯಾರಿಸುವ ಚೀಲದಂತಹ ಈ ಎಲಿಚೆಂಚಿಯ ಒಳಗೆ ಮತ್ತೆ ಮೂರು-ನಾಲ್ಕು ಭಾಗಗಳನ್ನಾಗಿ ಹೊಲಿದಿರುತ್ತಾರೆ. ಇದು ಜನಪದ ಹೆಣ್ಣುಮಕ್ಕಳಿಗೆ 'ಕ್ಯಾಶ್ ಬ್ಯಾಗ್', 'ಪರ್ಸ್' ಇದ್ದಂತೆ ಇರುತ್ತದೆ. ಇದರಲ್ಲಿ ರೂಪಾಯಿಗಳು ಮುಂತಾಗಿಯೂ ಇಟ್ಟುಕೊಂಡು ಟೊಂಕದಲ್ಲಿ ಸಿಗಿಸಿಟ್ಟುಕೊಳ್ಳುತ್ತಾರೆ. ಇಂದಿನ- ಪರ್ಸ್ , ಕ್ಯಾಶ್ ಬ್ಯಾಗ್ , ವ್ಯಾನಿಟಿ ಬ್ಯಾಗ್ ಮೊದಲಾದವುಗಳಿಗೆ ಇದು ಮಾದರಿಯಾಗಿರಬೇಕೆನಿಸುತ್ತದೆ.

೭.ಪಾವುಡು ಮುಂತಾದವು : ದೇವರಿಗೆ ನೈವೇದ್ಯ ತೆಗೆದುಕೊಂಡು ಗುಡಿಗೆ ಹೋಗುವಾಗ ಗಂಗಾಳದ ಮೇಲೆ ಸಾದಾ ಬಟ್ಟೆ ಮುಚ್ಚುವುದನ್ನೇ ಸುಂದರವಾಗಿ ಕಾಣಲು ಅದರ ಮೇಲೆ ಸ್ವಸ್ತಿಕ್, ಶಿವಲಿಂಗ, ಹೂ ಮುಂತಾದ ಚಿತ್ರಗಳು ಬಿಡಿಸುತ್ತಾರೆ. ಮಕ್ಕಳಿಗೆ ಎತ್ತಿಕೊಂಡು ಹೋಗುವಾಗ ಗಾಳಿ ಬಡಿಯದಿರಲೆಂದು ಮಗುವಿಗೆ ಹೊಚ್ಚುವ ಬಟ್ಟೆಯ ಮೇಲೆಯೂ ವಿವಿಧ ಚಿತ್ರಗಳನ್ನು ಬಿಡಿಸುವುದು ಕಾಣಬಹುದಾಗಿದೆ. ಇದೇ ರೀತಿ ಪೂಜೆಗೆ ಕೊಡುವ ಗದ್ದಿಗೆಯ ಮೇಲೆ, ಎತ್ತಿನ ಝೂಲುಗಳ ಮೇಲೆ, ತಲೆದಿಂಬಿನ ಹೊದಿಕೆ ಮೇಲೆ, ಕುರ್ಚಿ, ಟೇಬಲ್‌ಗಳ ಮೇಲೆ ಹಾಕುವ ಬಟ್ಟೆಗಳ ಮೇಲೆ ಸೂಜಿ- ದಾರಗಳಿಂದಲೇ ಸುಂದರವಾದ ಚಿತ್ರಗಳನ್ನು ತೆಗೆಯುವುದು ವಿಶಿಷ್ಟವಾಗಿದೆ.

ಜಾನಪದದಿಂದ ಅಭಿಜಾತ ಕಲೆಗಳಾಗಿ ಅನೇಕ ರೀತಿಯ ಸಾಮಗ್ರಿಗಳಿಂದ ಹೊಲಿಯುವುದು, ಹೆಣೆಯುವುದು, ನೇಯುವುದು ಮಾಡುವ ಈ ಕಲೆ ಇಂದು ಮಾರಾಟದವರೆಗೆ ಸಾಗಿದೆ. ಜೊತೆಗೆ ಇದೊಂದು ವೃತ್ತಿಯಾಗಿ ಬಣ್ಣ ಬಣ್ಣದ ಕಸೂತಿ ರೀತಿಯ ಕಲೆಗಳನ್ನು ತಯಾರಿಸುವ ಅನೇಕ ಮಾದರಿಗಳನ್ನು ಕಾಣುತ್ತೇವೆ.

ಜನಪದ ಮಹಿಳೆಯರು ನಿರಕ್ಷರಿಗಳಾದರೂ ಅಕ್ಷರಸ್ಥರು. ಬಟ್ಟೆಯ ಮೇಲೆ ಬರೆದುಕೊಟ್ಟಂತೆ ಹೊಲಿಯುತ್ತಾರೆ. ಜೊತೆಗೆ ಚಿತ್ರಕಲೆ ಬಲ್ಲವರು ಸುಣ್ಣ, ಜಾಜ, ಪೆನ್ಸಿಲ್ ಮುಂತಾದವುಗಳಿಂದ ಹೊರರೇಖೆ ಎಳೆದುಕೊಟ್ಟರೆ ಅದರಂತೇ ಬಣ್ಣದ ದಾರಗಳಿಂದ ಹೊಲಿಯುತ್ತಾರೆ. ಕೆಲವರು ಯಾವ ಆಧಾರವಿಲ್ಲದೆಯೂ ನೇರವಾಗಿಯೇ ಹೊಲಿಯುತ್ತಾರೆ.

ಹೊಲಿಗೆ ಮೊದಲು ಹರಿದವುಗಳನ್ನು ಹೊಲಿಯುವ ಅವಶ್ಯಕತೆಯಿಂದ ಹೊಲಿಯುತ್ತ ಹೊಲಿಯುತ್ತ ನಂತರ ಅದನ್ನೇ ಸುಂದರವಾಗಿ ಕಾಣಲೆಂದು ಹೊಲಿಗೆಯಲ್ಲಿ ವಿವಿಧ ವಸ್ತುಗಳನ್ನು ಬಳಸಿಕೊಂಡರು. ಉದಾ : ಮುತ್ತುಗಳು, ಗುಂಡಿಗಳು, ಧಾನ್ಯಗಳು, ವಿವಿಧ ಲೋಹಗಳು, ಜೊತೆಗೆ ಬೆಳ್ಳಿ, ಬಂಗಾರ, ರತ್ನ, ಗಾಜು, ಕನ್ನಡಿ , ದುಡ್ಡು, ರಿಬ್ಬನ್, ಚಮಕಿ ಮುಂತಾದವು. ಕೆಲವರು ಕೇವಲ ಮುತ್ತು ,ಗುಂಡಿ ಮೊದಲಾದ ವಸ್ತುಗಳನ್ನೇ ದಾರದಿಂದ ಒಂದನ್ನೊಂದು ಹೊಲಿದು ಪಕ್ಷಿ, ಆಕಳು, ಕೃಷ್ಣ ಮೊದಲಾದ ಚಿತ್ರಗಳನ್ನೂ ಬಿಡಿಸುತ್ತಾರೆ. ಬಣ್ಣದ ದಾರದಿಂದ ಗೋಪು ಹಾಕಿ ಚೆಂಡಿನಂತೆ ನೇಯಿದುಕೊಂಡು ಅದರಲ್ಲಿ ಹತ್ತಿಮೊದಲಾಗಿ ತುಂಬುತ್ತಾರೆ. ಇದನ್ನು ಒಂದು ಸಣ್ಣ ಬಾಯಿಯುಳ್ಳ ಸೀಸೆ ಒಳಗೆ ಒತ್ತಿದಾಗ ಕಾಣುವವರಿಗೆ ಇಷ್ಟೊಂದು ದಪ್ಪ ಚೆಂಡು ಸೀಸೆಯಲ್ಲಿ ಹೇಗೆ ಹಾಕಿರಬೇಕೆಂದು ಚಕಿತಗೊಳಿಸುವಂತಿರುತ್ತದೆ. ಹೀಗೆ ಹೊಲಿಗೆ ಕಲೆ ಇಂದು ಕಲ್ಪನೆಗೂ ಮೀರಿ ಬೆಳೆಯುತ್ತಿರುವುದಾಗಿದೆ.

ಕಸೂತಿ ಕಲೆಯ ಇತಿಹಾಸ ದೊರತದ್ದೆಂದರೆ ಕ್ರಿ.ಪೂ. ೩ನೆಂ . ಶತಮಾನದಲ್ಲಿ ಚೀನದಲ್ಲಿ. ಕ್ರಿ.ಪೂ ೧೬ನೆಯ ಶತಮಾನದಲ್ಲಿ ಈಜಿಪ್ಟ್‌ನಲ್ಲಿ ಕಸೂತಿಯ ತುಣುಕುಗಳು ದೊರೆತಿವೆ ಎಂದು ಜ್ಞಾನಗಂಗೋತ್ರಿ ಭಾಗ ೫ರಲ್ಲಿ ಉಲ್ಲೇಖಿಸಿರುವುದು ಕಾಣಬಹುದಾಗಿದೆ.(ಪು. ೧೭೨)

ಹೊಲಿಗೆ ಕಲೆಯಲ್ಲಿಸುಂದರ ಹಾಗೂ ಸೂಕ್ಷ್ಮ ಬಟ್ಟೆಗಳೆಂದರೆ ಲಂಬಾಣಿಗರಲ್ಲಿ ಕಾಣುತ್ತೇವೆ. ಕೆಂಪು ಬಣ್ಣದ ಬಟ್ಟೆಯಲ್ಲಿ ತೋಳಿನ ಸುತ್ತ , ಎದೆಯ ಸುತ್ತ, ಕೊರಳ ಹೊಲಿಗೆಯ ಸುತ್ತ ಕನ್ನಡಿಯ ತುಂಡುಗಳು, ದುಡ್ಡುಗಳು, ಗೆಜ್ಜೆಗಳು ಹೊಲಿದಿರುವುದು ವಿಶಿಷ್ಟವಾಗಿರುತ್ತದೆ. ಇವರು ತೊಡುವ ಲಂಗಕ್ಕೆ 'ಘಟಿಯಾ' ಎಂದು, ಎದೆಗೆ ಕಟ್ಟಿಕೊಳ್ಳುವ ಕುಪ್ಪಸಕ್ಕೆ 'ಕಾಂಚಳಿ' ಎಂದು, ತಲೆಯ ಮೇಲೆ ಹೊದ್ದುಕೊಳ್ಳುವುದಕ್ಕೆ (ಸೆರಗಿನಂತಿರುವುದು) 'ಚಾದರ' ಎಂದು ಕರೆಯುತ್ತಾರೆ. ಇವುಗಳಲ್ಲಿ ಒಂದು ಹೊಲಿಗೆ ಪೂರ್ಣಗೊಳಿಸಬೇಕಾದರೂ ಕನಿಷ್ಟ ೧೫ ದಿನಗಳ ಕಾಲ ಸಮಯ ಹಿಡಿಯುತ್ತದೆ. ಇವರು ಪ್ರತಿಯೊಂದು ಹೊಲಿಗೆಯನ್ನು ಕೈಮೇಲೆಯೇ ಹೊಲಿಯುವುದರಿಂದ ಸುಂದರತೆಯ ಜೊತೆಗೆ ಹೆಚ್ಚಿನ ಬಾಳಿಕೆ ಬರುವಂತೆ ಬಹು ಗಟ್ಟಿಯಾಗಿರುತ್ತವೆ.

ಅಂಗಾಂಗಗಳ ಮೇಲೆ : ಮೊದಲು ಶಸ್ತ್ರ ಚಿಕಿತ್ಸೆ ಮಾಡಲು ಯಾವುದೋ ಒಂದು ಸೂಜಿ ಬಳಸುತ್ತಿದ್ದರು. ನಂತರ ಬೆಳ್ಳಿ, ಬಂಗಾರ, ತಾಮ್ರ, ಕಂಚು ಮೊದಲಾದವುಗಳ ಸೂಜಿಗಳನ್ನು ಬಳಸಲು ಆರಂಭಿಸಿದರು. ನಂತರ ಉಕ್ಕಿನ ಸೂಜಿಯಿಂದ ಶಸ್ತ್ರ ಚಿಕಿತ್ಸೆ ಮಾಡುವುದು, ಹೊಲಿಯುವುದು ಪದ್ಧತಿ ಬೆಳೆದು ಬಂತು. ಇತ್ತೀಚೆಗೆ ಆಧುನಿಕ ರೀತಿಯ ಶಸ್ತ್ರಗಳು ಬಳಕೆಯಲ್ಲಿ ಬಂದವು ಎಂಬ ಉಲ್ಲೇಖ ಜ್ಞಾನಗಂಗೋತ್ರಿ ಭಾಗ ನಾಲ್ಕರಲ್ಲಿ ಅಂಗಾಂಗದ ಮೇಲಿನ ಹೊಲಿಗೆ ಕುರಿತು ಹೇಳಿರುವುದೇ ಆಗಿದೆ.

ಅಂಗಾಂಗದ ಮೇಲೆ ಹೊಲಿದು ಚಿಕಿತ್ಸೆ ಮಾಡುವುದಕ್ಕೆ ಆಪ್ರೇಷನ್ ಮಾಡುವುದು, ಟಾಕಿ ಹಾಕುವುದು, ಮೊದಲಾಗಿ ಮಾತನಾಡುವುದು ವಾಡಿಕೆ. ಟಾಕಿ ಹಾಕುವ ಕಲೆಯಲ್ಲಿ ವೈದ್ಯನು ತಪ್ಪಿದರೆ ಟಾಕಿ ಹಾಕಿದ ಸ್ಥಳದಲ್ಲಿ ಕೀವು ಮೊದಲಾಗಿ ತುಂಬಿ ಆರೋಗ್ಯದ ಜೊತೆಗೆ ಪ್ರಾಣಕ್ಕೂ ಭಯವಿರುವ ಸಂಗತಿಗಳಿವೆ. ಹೀಗಾಗಿ ಅಂಗಾಂಗದ ಮೇಲಿನ ಹೊಲಿಗೆಗೆ ಪಳಗಿದವರು ಹಾಗೂ ನಯ-ನಾಜೂಕಿನಿಂದ ಕಾರ್ಯ ನಿರ್ವಹಿಸುವವರು ಆಗಿರಬೇಕಾಗುತ್ತದೆ. ಒಟ್ಟಿನಲ್ಲಿ ಬಟ್ಟೆಯ ಮೇಲಿನ ಹೊಲಿಗೆ ಕಲೆಗಿಂತಲೂ ಇದು ಬಹು ನಾಜೂಕಿನ ಕಾರ್ಯವಾಗಿದೆ.

೪. ಹೊಲಿಗೆಯ ಸಾಮಗ್ರಿ ಹಾಗೂ ತಯಾರಿಸಿಕೊಳ್ಳುವಿಕೆ :

ಚರ್ಮದ ಮೇಲೆ ಹೊಲಿಯಬೇಕಾದರೆ ಚೆಂಬ್ಯಾ ಹಾಗೂ ರೋಚನಿ ತೀರಾ ಆವಶ್ಯವಾಗಿ ಬೇಕಾಗುವ ಸಾಮಗ್ರಿಗಳು. ಚೆಂಬ್ಯಾ ಚರ್ಮವನ್ನು ಕತ್ತರಿಸುವ ಸಲುವಾಗಿ ಬೇಕಾದರೆ ರೋಚನಿ ಚರ್ಮಕ್ಕೆ ತೂತು ಹಾಕುತ್ತ ಹೊಲಿಯಲು ಬೇಕಾಗುತ್ತದೆ. ಇದಕ್ಕೆ ದಾರ ಕೂಡ ವಿಶೇಷವಾಗಿಯೇ ತಯಾರಿಸಿಕೊಳ್ಳುತ್ತಾರೆ. ದಾರ ತೊಡೆಯ ಮೇಲೆ ಹೊಸೆದು ಗಟ್ಟಿಯಾಗಿರಲು ಮೇಣ ಮುಂತಾದವುಗಳನ್ನು ಹಚ್ಚುತ್ತಾರೆ.

ಎಲೆಗಳ ಮೇಲೆ ಹೊಲಿಯಬೇಕಾದರೆ ಹೆಚ್ಚಾಗಿ ಚಿಪಟಿಯ ಸಿಬುರು ಮುಂತಾಗಿ ಉಪಯೋಗಿಸುತ್ತಾರೆ. ಹಾಳೆಗಳ ಮೇಲಾದರೆ ತೂತು ಹಾಕಲು ಮೊಳೆ ಅಥವಾ ಡಬ್ಬಣ ಮೊದಲಾದವುಗಳನ್ನು ಬಳಸಿಕೊಂಡು ಯಾವುದೇ ಒಂದು ರೀತಿಯ ದಾರ ಬಳಸಿಕೊಳ್ಳುತ್ತಾರೆ.

ದಪ್ಪ ಇರುವ ಬಟ್ಟೆಗಳಾದರೆ, ಉದಾ: ಚೀಲ ಮೊದಲಾದವುಗಳನ್ನು ಹೊಲಿಯಲು ಡಬ್ಬಣ, ಪುಂಡಿ, ಸುತ್ತಳಿ ಮುಂತಾದವುಗಳನ್ನು ಬಳಸಿಕೊಳ್ಳುತ್ತಾರೆ. ಪುಂಡಿ ಹಿಂಜಿ ಪಡುಹಾಕುವ ಫಿರಕಿ ಮೂಲಕ ಕಚ್ಚಾವಾಗಿ ಹೊಸೆದುಕೊಳ್ಳುತ್ತಾರೆ. ಪಡು ಹಾಕಿದ ಪುಂಡಿಯಿಂದಲೇ ಛೆಪ್ಪರು, ಗುಡಿಸಲು ಹೊಚ್ಚುವಾಗ ಹೊಲಿಯುತ್ತಾರೆ. ಇವುಗಳನ್ನು ಹೊಲಿಯಲು ಸೂಜಿಕಟ್ಟಿಗೆ (ಸೂಜಿಕಟ್ಗಿ) ಎಂದೇ ವಿಶೇಷವಾಗಿ ತಯಾರಿಸಿಕೊಳ್ಳುತ್ತಾರೆ.

ಖವುದಿ ಮುಂತಾಗಿ ಹೊಲಿಯಬೇಕಾದರೆ ಹತ್ತಿಯಿಂದ ದಾರ ಸ್ವತಃ ತಾವೇ ತಯಾರಿಸಿಕೊಳ್ಳುತ್ತಾರೆ. ಹತ್ತಿಯನ್ನು ತೊಡೆಯ ಮೇಲೆ, ಕಾಲ ಮೇಲೆ ಅಥವಾ ಅಂಗೈಯಿಂದ ಹೊಸೆದುಕೊಂಡು ದಪ್ಪವಾದ ದಾರ ಮಾಡುತ್ತಾರೆ. ಕೆಲವರು ಫಿರಕಿಯಿಂದಲೂ ದಾರ ಹೊಸೆದುಕೊಳ್ಳುತ್ತಾರೆ. ಇದು ಆದಿಕಾಲದಿಂದಲೂ ದಾರ ತಯಾರಿಸಿಕೊಳ್ಳುವ ಒಂದು ರೀತಿ. ಕುರುಬರು ಘೊಂಗಡಿ ನೇಯಲು ಕೂಡ ಕುರಿಉನ್ನಿ (ಕುರಿಕೂದಲು)ದಿಂದ ಇದೇ ರೀತಿ ದಾರ ತಯಾರಿಸಿಕೊಳ್ಳುತ್ತಾರೆ. ಹದಿನಾಲ್ಕು , ಹದಿನೈದನೆಯ ಶತಮಾನದಲ್ಲಿ ಗಾಂಧಿ ಚರಕದಂಥ ಮಾದರಿಯ ಚರಕಗಳು ಜಾರಿಯಲ್ಲಿದ್ದ ವೆಂಬ ಹೇಳಿಕೆಗಳೂ ಇವೆ. ಇತ್ತೀಚೆಗೆ ಯಂತ್ರದ ಮೇಲೆ ತಯಾರಾದ ದಾರ ಅಂಗಡಿಯಿಂದ ಖರೀದಿಸಿ ಖವುದಿ ಹೊಲಿಯುವವರು ಹೆಚ್ಚಾಗಿರುವುದು ಕಾಣುತ್ತೇವೆ. ಸೂಜಿಗಳು ಸಹ ಇಂದು ಅಂಗಡಿಯಿಂದಲೇ ಖರೀದಿಸುವುದಾಗಿದೆ. ಆದರೆ- ಖವುದಿ ಹೊಲಿಯುವ ಸೂಜಿಗಳೆಂದೇ ಸ್ವಲ್ಪ ದಪ್ಪವಾಗಿರುತ್ತವೆ.

ಸೂಜಿಗಳು ಇರದ ಪೂರ್ವದಲ್ಲಿ ಮುಳ್ಳು, ಸಿಬುರು ಕಡ್ಡಿ, ಆನೆಯ ದಂತ, ಚೂಪಾದ ಕಟ್ಟಿಗೆ ಮೊದಲಾದವುಗಳಿಂದ ಹೊಲಿಯುತ್ತಿರುವ ಮಾನವ ಬರುಬರುತ್ತ ದಪ್ಪನೆಯ ಮೂಳೆ, ಮೊಳೆ, ಡಬ್ಬಣ ಮೊದಲಾಗಿ ತಯಾರಿಸಿಕೊಂಡು ನಂತರ ಸೂಜಿ ತಯಾರಿಸಿಕೊಂಡ ಎಂಬ ದಾಖಲೆಗಳನ್ನು ಕಾಣುತ್ತೇವೆ.

ಬಟ್ಟೆ ಮೊದಲಾಗಿ ಸರಿಯಾಗಿ ಕತ್ತರಿಸಲು ಈಗಲೂ ಕತ್ತರಿಯ ಬದಲಾಗಿ ಈಳಿಗೆ ಬಳಸಿಕೊಳ್ಳುತ್ತಾರೆ. ಜನಪದರು ಇದಕ್ಕೂ ಮೊದಲು ಕತ್ತಿ, ಚೆಂಬ್ಯಾ, ಬೇಟೆ ಆಡುವ ಆಯುಧ, ಚೂಪಾದ ಕಲ್ಲುಗಳನ್ನು ಬಳಸುತ್ತಿದ್ದರೆಂಬ ಹೇಳಿಕೆಗಳಿವೆ. ಇನ್ನು ಕೆಲವರು ಹಲ್ಲಿನಿಂದ ಮುಂದಿನ ತುದಿಯಿಂದ ಸ್ವಲ್ಪ ಹರಿದು ನಂತರ ಕೈಯಿಂದ ಹಿಡಿದೆಳೆದು ಹರಿಯುವುದೂ ಇದೆ. ಇವೆಲ್ಲವುಗಳ ಪ್ರಗತಿಯ ಕುರುಹೆಂಬಂತೆ ಹದಿನೆಂಟನೆಯ ಶತಮಾನದಿಂದ ಕತ್ತರಿ ಬೆಳಕಿಗೆ ಬಂದು ಈಗ ಕತ್ತರಿಯಿಂದ ಕತ್ತರಿಸುವುದು ಸಾಮಾನ್ಯವಾಗಿದೆ. ಆದರೆ ಖವುದಿ ಮೊದಲಾಗಿ ಹೊಲಿಯುವಾಗ ಜನಪದ ನಾರಿಯರು ಈಗಲೂ ಈಳಿಗೆ ಮೊದಲಾಗಿ ಚೂಪಾದ ವಸ್ತುಗಳಿಂದಲೇ ಬಟ್ಟೆ ಹರಿಯುವುದು, ಪುನಃ ಹೊಲಿಯುವುದು ವಿಶಿಷ್ಟವಾಗಿದೆ.

೫. ಹೊಲಿಗೆಯ ನಿಯಮ ಹಾಗೂ ನಂಬಿಕೆಗಳು :

ಹೊಲಿಗೆಯ ತಾಣಗಳಾದ ಚರ್ಮ, ಬಟ್ಟೆ, ಹುಲ್ಲು (ಛಪ್ಪರು ಹೊಚ್ಚುವುದು) ಮುಂತಾದವುಗಳಲೆಲ್ಲಾ ಹೊಲಿಯುವಾಗ ಪ್ರತ್ಯೇಕವಾದ ನಿಯಮ ಹಾಗೂ ನಂಬಿಕೆಗಳನ್ನು ಕಾಣುತ್ತೇವೆ. ಚರ್ಮದ ಮೇಲೆ ಹೊಲಿಯುವವರು ಹೆಚ್ಚಾಗಿ ಸಮಗಾರರು. ಇವರಲ್ಲಿ ಇಂತಹ ವಾರ , ಇಂತಹ ದಿವಸವೇ ಹೊಲಿಯಬೇಕೆಂಬ ಕಡ್ಡಾಯ ನಿಯಮವಿಲ್ಲ. ಆದರೂ ಕೆಲವರು ಅಮಾವಾಸಿ, ಹಬ್ಬ-ಹುಣ್ಣಿಮೆ ಹಾಗೂ ಪೂಜೆ ಮಾಡಿರುವ ದಿನಗಳಲ್ಲಿ ಹೊಲಿಯಲಾರರು.

ಬಟ್ಟೆಯ ಮೇಲಾದರೆ ಖವುದಿಯನ್ನು ಅಮಾವಾಸಿ ಹಾಗೂ ಹುಣ್ಣಿಮೆ ಜೊತೆಗೆ ಸೋಮವಾರ, ಗುರುವಾರ, ಮುಂತಾದ ದಿವಸಗಳಲ್ಲಿ ಹಾಗೂ ಹಬ್ಬ-ಹರಿದಿನಗಳಲ್ಲಿ ಹೊಲಿಯಬಾರದೆಂಬ ನಂಬಿಕೆ ಇದೆ. ಸೂನೆದಲ್ಲಿ, ಶರಣದಲ್ಲಿ ಹಾಗೂ ಬೊಬ್ಬಿಯಲ್ಲಿಯೂ ಸಹ ಹೊಲಿಯಲಾರರು.

ಹಬ್ಬ- ಹರಿದಿನಗಳಲ್ಲಾದರೆ ಹಬ್ಬದ ಕೆಲಸವೇ ಹೆಚ್ಚಾಗಿರುವುದರಿಂದ ಖವುದಿ ಹೊಲಿಯುತ್ತ ಕೂತರೆ ಕೆಲಸ ಆಗಲಾರದು. ಹಾಗೂ ಹಬ್ಬದ ಸಡಗರದಲ್ಲಿ ಒಬ್ಬರೇ ಕೂತು ಹೊಲಿಯುವುದು ಸರಿಯಲ್ಲ ಎಂದು ಇಂತಹ ಸಂದರ್ಭಗಳಲ್ಲಿ ಖವುದಿ ಹೊಲಿಯಬಾರದೆಂಬ ನಿಯಮ ಮಾಡಿಕೊಂಡಿರಬೇಕೆನಿಸುತ್ತದೆ. ಶರಣದಲ್ಲಾದರೆ ಊರಲ್ಲಿ- ಪುರಾಣ - ಪ್ರವಚನ ಮೊದಲಾಗಿ ಹಚ್ಚಿರುತ್ತಾರೆ. ಖವುದಿ ಹೊಲಿಯುತ್ತ ಕೂತರೆ ವರ್ಷಕ್ಕೊಮ್ಮೆ ನಡೆಯುವ ಪುರಾಣ ಪ್ರವಚನ ಯಾರು ಕೇಳಬೇಕು? ಹಾಗೂ ಇಂತಹ ಅವಕಾಶಗಳು ಸಿಗುವುದೇ ವರ್ಷದಲ್ಲಿ ಒಮ್ಮೆ. ಅದಕ್ಕಾಗಿ ಇಂತಹ ಅವಕಾಶಗಳು ತಪ್ಪಿಸಿಕೊಳ್ಳಬಾರದೆಂಬುದೇ ಖವುದಿ ಹೊಲಿಗೆಯ ನಿಯಮ ಹಾಗೂ ನಂಬಿಕೆಗಳಾಗಿ ಪರಿವರ್ತನೆಗೊಂಡಿರಬೇಕೆನಿಸುತ್ತದೆ.

ಖವುದಿಯ ಪಾಲಾ ಕಟ್ಟುವುದು ಕೂಡ ದಿನ- ವಾರ ನೋಡಿ ಪಾಲಾ ಕಟ್ಟುತ್ತಾರೆ. ಮನೆಯಲ್ಲಿ ಯಾರದೇ ಮದುವೆ ಆದರೆ, ಜಾವಳ ತೆಗೆದರೆ ಅಥವಾ ಯಾರಾದರೂ ತೀರಿಕೊಂಡರೆ ಆ ಮನೆಯಲ್ಲಿ ಒಂದು ವರ್ಷದೊಳಗಾಗಿ ಪಾಲಾ ಕಟ್ಟುತ್ತಾರೆ. ಏಕೆಂದರೆ ಪಾಲಾ ಕಟ್ಟುವ ಮೂಲಕ ಎರಡಾಗಿರುವ ಬಟ್ಟೆ ಒಂದಾಗಿಸಿದಂತೆ ಮನೆ ಕೂಡ ಒಂದೇ ಬಳ್ಳಿಯಂತೆ ಹರಡುತ್ತಿರುತ್ತದೆ ಎಂಬ ನಂಬಿಕೆ ಇದೆ. ಖವುದಿಯ ಪಾಲಾ ಕಟ್ಟಿದ ಮರು ದಿವಸವೇ ಕರಿ ಕಟ್ಟುತ್ತಾರೆ. ರವಿವಾರ ಪಾಲಾ ಹಾಕಿದರೆ ಸೋಮವಾರ ಕರಿ ಕಟ್ಟುವುದಿಲ್ಲ. ಒಂದೆರಡು ದಿವಸ ಬಿಟ್ಟು ಕರಿ ಕಟ್ಟುತ್ತಾರೆ. ಏಕೆಂದರೆ ಸೋಮವಾರ ಖವುದಿ ಹೊಲಿಯಬಾರದೆಂಬ ನಂಬಿಕೆ ಇರುವುದರಿಂದ . ಹೀಗಾಗಿ ಖವುದಿ ಯಾವ ದಿವಸ ಹೊಲಿಯಬಾರದೆಂಬ ನಂಬಿಕೆ ಇದೆಯೋ, ಅದರ ಒಂದು ದಿವಸ ಮುಂಚೆ ಪಾಲಾ ಹಾಕುವುದೇ ಕಡಿಮೆ.

ಖವುದಿಗೆ ಕರಿ ಕಟ್ಟುವಾಗ ಅದು ಪೂರ್ಣ ಮುಗಿಯುವವರೆಗೆ ಏಳಲೇಬಾರದೆಂಬ ನಂಬಿಕೆ ಇದೆ. ಮಧ್ಯದಲ್ಲಿ ಒಂದಕ್ಕೂ ಸಹ ಏಳಲಾರರು. ಆಕಸ್ಮಾತ್ ದೊಡ್ಡ ಖವುದಿ ಇದ್ದರೆ ಒಬ್ಬರಿಂದ ಬೇಗ ಮುಗಿಯಲಾರದೆಂದು ಒಟ್ಟಿಗೆ ಇಬ್ಬಿಬ್ಬರಾಗಿ ಕರಿಕಟ್ಟಿ ಮುಗಿಸುತ್ತಾರೆ.

ಖವುದಿ ಹೊಲಿಯುತ್ತ ಅದು ಪೂರ್ಣ ಮುಗಿಯಲು ಬಂದಾಗ ಖವುದಿ ಹೊಲಿಯುವವರು ತಾಯಿ ಉಳ್ಳವರಾಗಿದ್ದರೆ, ಅವರು ಖವುದಿ ಹೊಲಿಯುವುದು ಪೂರ್ಣಗೊಳಿಸುವುದಿಲ್ಲ. ಪೂರ್ಣಗೊಳಿಸಿದರೆ ತಾಯಿಯ ಹೊಟ್ಟೆ ಮುಚ್ಚಿ ದಂತಾಗುತ್ತದೆಂಬ ನಂಬಿಕೆ ಇದೆ. ಆದಕಾರಣ ಖವುದಿ ಯಾರೇ ಹೊಲಿದರು, ಮುಕ್ತಾಯದ ಹಂತದ ಹತ್ತಾರು ಸಾಲುಗಳು ಅಂದರೆ ಅರ್ಧಗೇಣಿನಷ್ಟಾದರೂ ಹೊಲಿಯುವುದಿರುವಾಗ

ಅದನ್ನು ಪೂರ್ಣಗೊಳಿಸುವವರು ಹಿರಿಯರು ಮಾತ್ರ. ಅಂದರೆ ತಾಯಿ ತೀರಿಕೊಂಡು ಅವರೇ ತಾಯಿಯ ಸ್ಥಾನದಲ್ಲಿರುವವರು.

ಪೂರ್ಣ ಮುಗಿಯದೆ ಇನ್ನೂ ಹೊಲಿಯುವುದರಲ್ಲಿರುವ ಖವುದಿ ಯಾವುದೇ ಸಂದರ್ಭದಲ್ಲಿಯೂ ಹಾಸಿಕೊಂಡು ಹೊಚ್ಚಿಕೊಂಡು ಮಲಗುವುದಿಲ್ಲ. ಅಷ್ಟೇ ಅಲ್ಲ ಖವುದಿ ಹೊಲಿಯುವಾಗ ಪುಟ್ಟ ಮಕ್ಕಳು ಆಡುತ್ತ ಬಂದು ಅದರ ಮೇಲೆ ಮಲಗಿದರೆ, ಉರುಳಾಡಿದರೆ ಹಾಗೆ ಮಾಡಲು ಬಿಡುವುದಿಲ್ಲ. ಏಕೆಂದರೆ ಖವುದಿ ಹಾಸಿಕೊಂಡು, ಹೊಚ್ಚಿಕೊಂಡು ಮಲಗಿದರೆ ಖವುದಿ ಹೊಲಿಯುವುದೂ ಬೇಗ ಮುಗಿಯದೆ ಹಾಗೇ ಮಲಗಿ ಕೊಂಡಿರುತ್ತದೆಂಬ ನಂಬಿಕೆ. ಬಹುಷಃ ಖವುದಿ ಹೊಲಿಯುವಾಗ ಹೊಲಿಯುವ ಸೂಜಿ - ದಾರ ಮೊದಲಾಗಿ ಅದರಲ್ಲಿಯೇ ಇರುವುದರಿಂದ ಆ ಸೂಜಿ ನಟ್ಟರೂ ನಡಬಹುದೆಂಬ ಎಚ್ಚರಿಕೆಯ ಮಾತೇ ಇಂತಹ ನಂಬಿಕೆಯಾಗಿ ಬೆಳೆದುಕೊಂಡಿರ ಬೇಕೆನಿಸುತ್ತದೆ.

ಹೊಲಿದು ಪೂರ್ಣಗೊಂಡ ಖವುದಿಯಲ್ಲಿ ಅನೇಕ ಹಳೆಯ ಅರಬಿಗಳೇ ಇರುತ್ತವೆ. ಆದರೂ ಅದು ಹೊಸ ಖವುದಿ ಎನಿಸುತ್ತದೆ. ಹೊಸ ಖವುದಿ ಒಗೆಯದೆ ಉಪಯೋಗಿಸ ಬಾರದೆಂಬ ನಂಬಿಕೆ, ಒಗೆಯಬೇಕಾದರೂ ಸಿಕ್ಕಾಗ ಒಗೆಯದೆ ಒಂದು ಒಳ್ಳೆಯ ದಿನ ನೋಡಿ ಒಗೆಯುತ್ತಾರೆ. ಒಟ್ಟಿನಲ್ಲಿ ಒಗೆದು, ಹಾಸಲು, ಹೊಚ್ಚಿಕೊಳ್ಳಲು, ಸಿದ್ಧವಾಗಿರುವ ಖವುದಿ ಹೊಚ್ಚಿಕೊಳ್ಳಬೇಕಾದರೂ ಅಲ್ಲೊಂದು ನಿಯಮ ಕಾಣುತ್ತೇವೆ. ಖವುದಿಗೆ ಕಣ್ಣುಗಳಿರುವ ಭಾಗ ಅಂದರೆ ತುಂಡು ಬಟ್ಟೆಗಳು ಹಚ್ಚಿ ಹೊಲಿದ ಭಾಗ ಮೇಲೆ ಮಾಡಿಯೇ ಹೊಚ್ಚಿಕೊಳ್ಳಬೇಕು ಎಂದು. ಏಕೆಂದರೆ ಈ ಭಾಗ ಮೇಲೆ ಮಾಡಿ ಹೊಚ್ಚಿಕೊಂಡು ಮಲಗಿದರೆ ದೆವ್ವ,, ಭೂತ ಹಿಡಿಯಲಾರವು ಎಂಬುದು. ಅಂದರೆ ದೆವ್ವ- ಭೂತಗಳು ಬಂದು ಈ ಕಣ್ಣುಗಳು ಎಣಿಸುವುದರೊಳಗಾಗಿಯೇ ಬೆಳಗಾಗುತ್ತದೆ. ಹೀಗಾಗಿ ಅವು ನಮಗೆ ತೊಂದರೆ ಮಾಡದೆ ಮೊದಲೇ ಹೊರಟು ಹೋಗುತ್ತವೆ ಎಂಬ ನಂಬಿಕೆ ಇದೆ. ಇನ್ನು ಕೆಲವರ ನಂಬಿಕೆ ಎಂದರೆ, ಇದೇ ಭಾಗ ಒಳಗೆ ಮಾಡಿ ಹೊಚ್ಚಿಕೊಳ್ಳಬೇಕು ಎಂಬುದು.

ಒಟ್ಟಿನಲ್ಲಿ ಅವರವರ ನಿಯಮ- ನಂಬಿಕೆಗಳು ಅವರವರಿಗಿವೆ. ಆದರೆ ಈ ನಿಯಮ- ನಂಬಿಕೆಗಳು ಕಡ್ಡಾಯವಾಗಿ ಪಾಲನೆ ಆಗಲೇ ಬೇಕೆಂದೇನಿಲ್ಲ. ಬಹುಶಃ ಒಂದೇ ಖವುದಿ ಹಾಸಿಕೊಳ್ಳುವುದು, ಹೊಚ್ಚಿಕೊಳ್ಳುವುದು ಎರಡೂ ಮಾಡುವುದರಿಂದ ಒಂದೊಂದು ಮಗ್ಗಲು ಒಂದೊಂದು ಕಡೆಗೆ ಉಪಯೋಗಿಸಿದರೆ ಒಳ್ಳೆಯದು ಎಂಬ ಕಾರಣಕ್ಕಾಗಿ ಈ ನಂಬಿಕೆ ಬೆಳೆದುಕೊಂಡಿದೆ ಎನಿಸುತ್ತದೆ.

ಖವುದಿಯಲ್ಲದೆ ಮೈ ಮೇಲೆ ತೊಡುವ ಯಾವುದೇ ಬಟ್ಟೆಗಳು ಸ್ವಲ್ಪ ಹರಿದಾಗ, ಅಥವಾ ಗುಂಡಿ ಕಡಿದಾಗ ಅವಸರವಿದ್ದು ಕೆಲವೊಮ್ಮೆ ಮೈ ಮೇಲೆಯೇ ಹೊಲಿದುಕೊಳ್ಳುವ ಸಂಭವವಿರುತ್ತದೆ. ಆದರೆ- ಹಾಗೇ ಮೈ ಮೇಲೆ ಬಟ್ಟೆ ಇಟ್ಟುಕೊಂಡು ಹೊಲಿದರೆ ಕೆಡುಕಾಗುತ್ತದೆಂಬ ನಂಬಿಕೆ ಸಹಜವಾಗಿದೆ. ಮೈ ಮೇಲೆ ಬಟ್ಟೆ ಇಟ್ಟುಕೊಂಡು

ಹೊಲಿಯುವಾಗ ಅಪ್ಪಿ-ತಪ್ಪಿ ಸೂಜಿ ಚುಚ್ಚಬಹುದು. ಆದಕ್ಕಾಗಿ ಮೈ ಮೇಲಿನ ಬಟ್ಟೆ ಕಳೆದು ಹೊಲಿಯಬೇಕೆಂಬ ಮುನ್ನೆಚ್ಚರಿಕೆಯೇ ನಂಬಿಕೆ ಆದದ್ದು ಸ್ಪಷ್ಟ ಕಾಣುತ್ತೇವೆ.

ಈ ಹಿಂದೆ ಹೇಳಿದಂತೆ ಸತ್ತಾಗ ಕೈಯಲ್ಲಿ ಒಂದು 'ಕುಂಚಿ' ಹಿಡಿದುಕೊಂಡು ಹೋಗುತ್ತಾರೆ ಎನ್ನುವಲ್ಲಿ ಅದು ಶೋಕದ ಸಂದರ್ಭ. ಹಾಗಾಗಿ ಅಲ್ಲಿ ಕಸೂತಿ ಮೊದಲಾಗಿ ಹೊಲಿದ ಸೌಂದರ್ಯಯುಕ್ತ ಬಟ್ಟೆಗಿಂತಲೂ ಸಾದಾ ಆಗಿರುವ ಕುಂಚಿಯೇ ಇರಬೇಕೆನ್ನುವಲ್ಲಿ ಒಂದು ವಿಶಿಷ್ಟ ಅರ್ಥವಿದೆ.

೬. ಹೊಲಿಗೆ ಕಲೆಗೆ ಸಂಬಂಧಿಸಿದ ಗಾದೆ, ಒಗಟು, ಪ್ರಾಸ ಮೊದಲಾದವುಗಳು

★ ಗಾದೆಗಳು :

- ಹೊಲೆಕಿನ ಕಣ್ಣು ತೇಜಂತ
  ಝುಗುಡ ಗಂಟೇಕಿನ ಬಾಯಿ ತೇಜಂತ
- ಸಿಂಪಗ್ಯಾ ಅರಬಿ ಕದೆಲ್ದಿ ಇರಲಂತ
  ಅಗಸಲ ಬಂಗಾರ ಕದೆಲ್ದಿ ಇರಲಂತ
- ಕೂಸಳ್ಳುತುರ ಕೂಸಿನ ಬಾಯಿ
  ಹೊಲಿಲ್ಯಾನಂದಿಳಂತ
- ಖಿವುಂದ್ಯಾಗ ಹೇತಿನ ಖಬುರಿಲ್ದೆ
  ಮನ್ಯಾಗ ಘಾಣ ಹೊಂಟುದಂದಿರಂತ
- ನಡುಮನ್ಯಾಗ ಹೊಲಿಲಾಕ ಕೂಡಭ್ಯಾಡದಂತ
  ಹೊರಸಿನ ಮ್ಯಾಗ ಹಡಿಲಾಕ ಕೂಡಭ್ಯಾಡದಂತ
- ಹಸಗೇಡಿಗಿ ತಂದು ಹಾಸಗ್ಯಾಗ ಹಾಕದುರೆ
  ಮಿಸಕ್ಯಾಡಿ ಮೂರು ಮೊಳ ಖಿವುಂದಿ ಹರಿದತಂತ

★ ವಗಟುಗಳು

ನಾಕ ಮೂಲಿಗಿ ನಾಕ ಗೊಂಡಿ
ಥೆಂಜಿಕಿ ಬರಮಾ ರಂಡಿ[೧]
ಸೊಕ್ಕಿನ ಕ್ವಾಣೆಗಿ
ಮೈಯಲ ಮುಗರಾಣಿ[೨]
ಮೈಯಲ ಬಣ್ಣ ಸಣ್, ಸಣ್ ಕಣ್ಣ
ರಾತ್ರಿಗಿ ಬರ್ತಾನ ಗುರಣ್ಣ[೩]

- ಚೋಟುದ್ದ ಹುಡುಗ
  ಮಾರುದ್ಧ ಜಟ್ಟಿ[೪]

- ಇಟೀಟೆ ಪಾರಾ
  ಕುಂಡ್ಯಾಗ ಧಾರಾ[೫]

- ಕಂಚಿನ ಕುದರಿಗಿ
  ಕುಂಡ್ಯಾಗ ಕಡಿವಾಣ[೬]

- ಕೈ ಅವ ಕಾಲಿಲ್ಲ
  ಧಂಡ ಅದ ಜೀವ ಇಲ್ಲ[೭]

★ **ಪ್ರಾಸ ಮೊದಲಾದವುಗಳು:**

- ವ್ವ್ಯಾರೆ ಗಬರು
  ಖವುಂದ್ಯಾಗ ನಿಗರು

- ಸೂಜಿಧಾರ
  ಬಲ್ಲ ಬಲ್ಲಿಬಾರ

- ಸೂಜಿ ನನ್ಹೇಲ ಪೂಜಿ

★ ★ ★

- ಕಡ್ಕ ಖಂವುದ್ಯಾಗ ಛಿಡ್, ಛಿಡ್ ಮೂಡತಾಳ
  ಬಿಲ್ಲಿಕಿ ಹೋದುರ ಧೂರ, ಧೂರ ಹಾರತಾಳ

- ಆಯಿದಾಗ ಆಯಿ
  ಯಾ ಆಯಿ[೮]

- ಕುಲಯಿದಾಗ ಕುಲಯಿ
  ಯಾ ಕುಲಯಿ[೯]

- ಅಂಗ್ಯಾಗಂಗಿ ಯಾ ಅಂಗಿ[೧೦]

೧,೨,೩ - ಖವುಂದಿ
೪,೫,೬ - ಸೂಜಿ
೭ - ಅಂಗಿ
೮ - ಕುಲಾಯಿ
೯ - ಕುಂಚಿಕುಲಯಿ
೧೦ - ಕ್ವಾಡಂಗಿ

೭. ಹೊಲಿಗೆ ಕಲೆಯ ವೈಶಿಷ್ಟ್ಯ

ಹೊಲಿಗೆ ಕಲೆಯ ವೈಶಿಷ್ಟ್ಯ ವಿಶೇಷವಾಗಿ ಖವುದಿಯಲ್ಲಿ ಕಾಣುತ್ತೇವೆ. ಹರಿದ ಹಾಗೂ ಹಳೆಯ, ಜೊತೆಗೆ ಕೆಲಸಕ್ಕೆ ಬಾರದ ಚಿಂದಿ ಬಟ್ಟೆಗಳನ್ನು ಒಂದನ್ನೊಂದು ಜೋಡಿಸಿ ಖವುದಿ ಹೊಲಿಯುವುದರಿಂದ ತಿಪ್ಪೆಗೆಸೆಯುವ ತುಂಡುಬಟ್ಟೆಗಳು ಪುನಃ ಜೀವ ಪಡೆದುಕೊಂಡು ಹೊಸ ಖವುದಿಯಾಗಿ ಮಾರ್ಪಾಡಾಗುತ್ತವೆ.

ಹೊಲಿಗೆ ಕಲೆ ಬಲ್ಲ ಹೆಣ್ಣು ಮಕ್ಕಳು ಕೆಲಸಕ್ಕೆ ಬಾರದ ಬಟ್ಟೆಗಳನ್ನು ಒಂದನ್ನೊಂದು ಹೊಲಿದು ಎಲಿಚಿಂಚಿ, ಕುಲಯಿ, ಕುಂಚಿ - ಕುಲಯಿ, ಹಡಪು, ಛೆರಚೀಲಾ ಮೊದಲಾಗಿ ತಯಾರಿಸುವುದರಿಂದ ಮರು ಹುಟ್ಟು ಪಡೆದಂತೆ ಬಳಕೆಯಲ್ಲಿ ಬರುತ್ತವೆ. ಕೆಲವರ ಹೊಲಿಗೆ ಕಲೆ ಹೊಲಿದ ಬಟ್ಟೆ ಹರಿದು ಹೋದರೂ ಬಿಚ್ಚದಂತೆ ಗಟ್ಟಿಯಾಗಿರುತ್ತವೆ.

ಹೊಲಿಯುವ ಬಟ್ಟೆ ಸಾದಾವಿದ್ದರೂ ಅದರ ಮೇಲೆ ಕಲಾತ್ಮಕವಾಗಿ ಹೊಲಿದಾಗ ಆ ಬಟ್ಟೆ ಬೆಲೆ ಕಟ್ಟಲು ಬಾರದಂತೆ ಅಮೂಲ್ಯವಾಗುತ್ತದೆ. ಇದರಂತೆ ಯಾವುದೋ ಒಂದು ಹರಿದ ಚೀಲ ಹಾಸಿಕೊಂಡು ಕೂಡುವಾಗ ಇದೇನು ಚೀಲ? ಎಂದು ಮೂಗು ಮುರಿಯುವಂತೆನಿಸುತ್ತದೆ. ಅದನ್ನೇ ಬಣ್ಣದ ದಾರದಿಂದ ನಾಲ್ಕು ಎಳೆಗಳು ಹಾಕಿ ವಿನ್ಯಾಸಗಳು ಬಿಡಿಸಿದರೆ ಭಟರ ಚೀಲವಾದರೂ ಅದು ವಿಶೇಷವಾದ ಗದ್ದಿಗೆ ಎನಿಸಿಕೊಳ್ಳುತ್ತದೆ.

ಚರ್ಮದ ಮೇಲೆ, ಹುಲ್ಲುಕಡ್ಡಿ ಮೊದಲಾದವುಗಳ ಮೇಲೆ, ಹಾಳೆಗಳ ಮೇಲೆ, ಎಲೆಗಳ ಮೇಲೆ, ಎಲ್ಲಿಯೇ ಹೊಲಿದರು ಹೊಲಿಗೆ ಕಲೆ ಬಿಡಿ, ಬಿಡಿಯಾಗಿರುವುದನ್ನು ಕೂಡಿಸುವ ಹಾಗೂ ನಿರ್ಜೀವಕ್ಕೂ ಜೀವ ತುಂಬುವ ವೆಶಿಷ್ಟ್ಯತೆ ಉಳ್ಳದಾಗಿದೆ. ಇಂದು ಮೊದಲಿನಂತೆ ತಿಂಗಳುಗಟ್ಟಲೆ ಹೊಲಿಯುವುದು ಕಡಿಮೆ ಆಗಿ ,ಖವುದಿ ಅಂತಹ ಹೊಲಿಗೆಗಳು ಕೂಡಾ ಯಂತ್ರದ ಮೇಲೆ ಹೊಲಿಯುವುದಾಗಿದೆ. ಹಾಗೂ ಕಸೂತಿ ಮೊದಲಾದ ಚಿತ್ತಾರಗಳಿರುವ ಹೊಲಿಗೆಗಳಂತೂ ಜನ- ಮನವನ್ನಾಕರ್ಷಿಸುವುದರಿಂದ, ಇದೊಂದು ವೃತ್ತಿಕಲೆಯಾಗಿ ಇಂದು ವ್ಯಾಪಾರಕ್ಕೆ ತಿರುಗಿ ಉಪಜೀವನಕ್ಕೂ ದಾರಿ ಮಾಡಿಕೊಟ್ಟಿರುವುದು ಇದರ ವಿಶೇಷತೆಗಳಲ್ಲೊಂದಾಗಿದೆ.

ಒಟ್ಟಿನಲ್ಲಿ ಹಾಳಾಗುವ ಚಿಂದಿಗಳನ್ನೆಲ್ಲ ಸೇರಿಸಿ ಹೆಚ್ಚಿನ ಬಂಡವಾಳವಿಲ್ಲದೆ ಹೊಸದನ್ನುತಯಾರಿಸುವ ಹಾಗೂ ಚಿಂದಿಗಳಿಂದಲೇ ಡಿಜೈನ್ ಮಾಡಿ ಹೊಸ ಫ್ಯಾಶನ್ನೆಂದು ಹೆಸರಿಸುವುದು ಇದರ ಹೊಸತನವಾಗಿದೆ. ಇದಕ್ಕೆ ಸಾಕಷ್ಟು ಮಹತ್ವ ನೀಡಿ ಬೆಳೆಸದೇ ಇದ್ದರೂ, ಜೀವನದ ತೀರಾ ಅವಶ್ಯಕ ಅಂಗವಾದ ಇದು, ದಿನನಿತ್ಯ ಬೇರೆ ಬೇರೆ ರೂಪ ಹಾಗೂ ಪ್ರಕಾರಗಳನ್ನು ಧಾರಣ ಮಾಡುತ್ತ ತನ್ನ ನಿರಂತರತೆ ಹಾಗೂ ಹೊಸತನವನ್ನು ಮೆರೆಯುತ್ತಿದೆ.

★★★

೨. ಚಿತ್ರಕಲೆ

೧. ಉಗಮ

ಪರಂಪರೆಯ ತಳವನ್ನೇ ಕಾಣದಷ್ಟು ಆಳವಾದ ಚಿತ್ರಕಲೆಯ ಉಗಮ ಕುರಿತು ಹೇಳುವುದು ಕೇವಲ ಊಹೆ ಮತ್ತು ದಂತ ಕಥೆಗಳನ್ನು ಮಾತ್ರ ಆಶ್ರಯಿಸಬೇಕಾಗುತ್ತದೆ. ಮಗು ಪ್ರಾರಂಭಾವಸ್ಥೆಯಲ್ಲಿ ಮಾಂಸದ ಮುದ್ದೆಯಿದ್ದು ನಂತರ ಕೈ, ಕಾಲು, ಮೂಡಿ ಪ್ರಾರಂಭದಲ್ಲಿ ಹೇಗಿದ್ದೆ? ಎಂದು ತನ್ನ ಮೂಲ ತಾನೇ ಹುಡುಕಲು ಹೊರಟು ಪುನಃ ಮಾಂಸದ ಮುದ್ದೆ ಆಗಿ ತಿಳಿಯಲು ಸಾಧ್ಯವೆ? ಇನ್ನೊಂದನ್ನೇ ಕಂಡು ತಿಳಿಯಬೇಕಾಗುತ್ತದೆ. ಹಾಗೆಯೇ ಜನಪದ ಚಿತ್ರಕಲೆ ಅಭಿಜಾತಕಲೆಯಾಗಿ ಬೆಳೆದದ್ದೇ ತಿಳಿಯದ ಸಂದರ್ಭದಲ್ಲಿ ಅದರ ಉಗಮ ಕುರಿತು ಹೇಳುವುದು ಇನ್ನೂ ಪ್ರಯಾಸ.

ಅಭ್ಯಾಸದ ದೃಷ್ಟಿಯಿಂದ ನೋಡಬೇಕೆಂದರು ಇಂದಿಗೂ ಜನಪದರಲ್ಲಿ ಕಲೆ ಯಾವ ರೀತಿ ಹುಟ್ಟುತ್ತದೆ, ಬೆಳೆಯುತ್ತದೆ ಎಂಬುದು ಗೊತ್ತಾಗದಂತೆಯೇ ''ಜೀವನದ ವಿವಿಧ ಘಟ್ಟಗಳಲ್ಲೂ ಕಾಣಿಸಿಕೊಳ್ಳುತ್ತದೆ. ಮದುವೆ, ಮುಂಜಿವೆ, ಮರಣ, ಶ್ರಾದ್ಧಗಳಲ್ಲೂ, ಸುಗ್ಗಿ-ಸಂಭ್ರಮಗಳಲ್ಲೂ, ಕುಟ್ಟುವಾಗ, ಬೀಸುವಾಗ, ಹೊಲ ಹಸನು ಮಾಡುವಾಗ. ಹೀಗೆ ಅದು ವಿವಿಧ ಪ್ರಸಂಗಗಳಲ್ಲಿ ಮೈದೋರುತ್ತದೆ.'' ಎಂದು ಡಾ. ಮ.ಶೀ. ಲಠ್ಠೆ ಅವರು ಹೇಳುವಲ್ಲಿ ಸತ್ಯಾಂಶವಿದೆ. (ಜಾ.ಸಂ.ಪ್ರ. ಪು. ೫). ಹೀಗೆ ದಿನ ನಿತ್ಯದ ಆಗುಹೋಗುಗಳಲ್ಲೂ ಒಂದು ರೀತಿಯ ಕಲೆ ಹುದುಗಿಕೊಂಡಿರುತ್ತದೆ. ಜೀವನದ ಒಂದಂಶವೇ ಎನ್ನುವ ರೀತಿಯಲ್ಲಿ ಶ್ರೀ ಸಾಮಾನ್ಯರ ಬದುಕಿನಲ್ಲಿ ಕಲೆ ಬೆರೆತುಕೊಂಡು ಬಂದಿದೆ ಎಂದು ಜಾನಪದ ಸಂಶೋಧನಾತ್ಮಕ ಪ್ರಬಂಧಗಳ ಪುಸ್ತಕದಲ್ಲಿ ಡಾ। ಲಠ್ಠೆ ಅವರು ಹೇಳುತ್ತಾರೆ.

ಜಗತ್ತಿನಲ್ಲಿ ರಚಿತವಾದ ಮೊದಲ ಚಿತ್ರದ ಬಗ್ಗೆ ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ (ಭಾಗ-೫) ದಲ್ಲಿ ಒಂದು ದಂತಕತೆ ಇದೆ: ಇಬ್ಬರು ಮಿತ್ರರು ನಡೆದು ಹೋಗುತ್ತಿದ್ದರಂತೆ. ತಮ್ಮ ನೆರಳುಗಳಲ್ಲಿ ತಮ್ಮದೇ ರೂಪಗಳನ್ನು ಕಂಡು ಚಕಿತರಾದರಂತೆ. ಅವರನ್ನೇ ಹಿಂಬಾಲಿಸುವ ರೂಪಗಳು ಓಡಿದರೆ ಅವೂ ಓಡುತ್ತಿದ್ದವು. ಹಿಡಿದು ನಿಲ್ಲಿಸುವುದು ಹೇಗೆ? ಒಬ್ಬನಿಗೆ ಉಪಾಯ ಹೊಳೆಯಿತು. ತನ್ನ ಮಿತ್ರನಿಗೆ ಹಾಗೇ ನಿಂತುಕೊ ಎಂದ. ಚೂಪಾದ ಕಲ್ಲನ್ನೆತ್ತಿಕೊಂಡು ಮಿತ್ರನ ನೆರಳನ್ನು ತಲೆಯಿಂದ ಪಾದದವರೆಗೆ ಗುರುತಿಸಿದ, ಪೂರ್ತಿಯಾದಾಗ ನೆರಳಿನ ಚಿತ್ರ ದೊರೆಯಿತು.

ಹೀಗೆ ಕಲ್ಪನೆ ಬಂದದ್ದು ಇತ್ತೀಚೆಗೆ ಎಂದು ಹೇಳಲಿಕ್ಕಾಗದು. ಮಾನವನಿಗೆ ಮಾತು ಬರದೆ, ಬಟ್ಟೆತೊಡದೆ ಇದ್ದ ಸಂದರ್ಭದಲ್ಲಿಯೇ ಈ ಕಲ್ಪನೆ ಬಂದಿರಬಹುದೆನಿಸುತ್ತದೆ.

ಇದೇ ರೀತಿ ಡಾ। ಎಚ್. ತಿಪ್ಪೇರುದ್ರಸ್ವಾಮಿಯವರು ಕರ್ನಾಟಕ ಸಂಸ್ಕೃತಿ ಸಮೀಕ್ಷೆಯಲ್ಲಿ ಎರಡು ಕಥೆಗಳನ್ನು ಹೇಳುತ್ತಾರೆ. ಅದರಲ್ಲಿ ಮೊದಲನೆ ಕಥೆ ಬೀದರ ಜಿಲ್ಲೆಯಲ್ಲಿಯೂ ಹೇಳುವುದನ್ನು ಕೇಳಬಹುದಾಗಿದೆ.

ಹಿಂದೆ ಒಬ್ಬ ರಾಜಾ ಇದ್ದಂತ. ಅಂವಾ ಭಾರಿ ಬಲವಾನಿದ್ದಂತ. ಅದೇ ಊರಾಗ ಒಬ್ಬ ಶ್ಯಾಣ್ಯಾ ಬ್ರಾಹ್ಮಣ ಸತ್ತಿನಂತ. ಆಗ ಹಿಂತಾ ಶ್ಯಾಣ್ಯಾ ಬ್ರಾಹ್ಮಣ ಸತ್ತಂತ್ಹೇಳಿ ರಾಜಾಗ ಯಮುನ ಮ್ಯಾಲ ಸಿಟ್ಟುಬಂದು ಯುದ್ಧಮಾಡಿ ಅವ್ನಿಗಿ ಸೋಲ್ಸದಂತ. ಆಗ ಬ್ರಮ್ ಬಂದು ಯಮುಂದ್ಯಾನಬಿ ತಪ್ಪಿಲ್ಲಾಂತ ಸಮಜ್ಯಾಸಿ, ನಿಮ್ಮ ಶ್ಯಾಣೆ ಬ್ರಾಹ್ಮಣನ ಚಿತ್ತುರ್ ಇಳಸ್ರಿ. ನಾ ಅದರಾಗ ಜೀವಾ ತುಂಬಿ ಜೀವಂತ ಮಾಡ್ತಾ ಅಂದ್ನಂತ. ಆವತ್ತಿನ ಹಿಡಿದು ಮಂದಿಯೆಲ್ಲ ಚಿತ್ತುರ ಇಳ್ಸಲಾಕ ಸುರುಮಾಡ್ದುರಂತ.

ಇನ್ನೊಂದು ಕಥೆ ಹೀಗಿದೆ: ನರನಾರಾಯಣ ಋಷಿಗಳು, ಬದರಿಕಾಶ್ರಮದಲ್ಲಿ ತಪಸ್ಸು ಮಾಡುತ್ತಿದ್ದರು. ಅವರ ತಪೋಭಂಗ ಮಾಡಲು ಇಂದ್ರ ಅಪ್ಸರೆ ಸ್ತ್ರೀಯರನ್ನು ಕಳುಹಿಸಿದ. ನಾರಾಯಣ ಋಷಿ ಅವರಿಗೆ ಮರುಳಾಗದೆ, ಅವರ ಸೌಂದರ್ಯದ ಹೆಮ್ಮೆಯನ್ನು ಭಂಗ ಮಾಡಲು ಉದ್ದೇಶಿಸಿದ. ಭೂಮಿಯ ಮೇಲೆ ಆಮ್ರರಸದಿಂದ ಸ್ತ್ರೀ ಚಿತ್ರವೊಂದನ್ನು ಬರೆದು ಆದಕ್ಕೆ ಜೀವಕಳೆಯನ್ನು ಕೊಟ್ಟ, ಅವಳ ಸೌಂದರ್ಯದ ಮುಂದೆ ಅಪ್ಸರೆಯರ ಸೌಂದರ್ಯ ಕಳೆಗುಂದಿತು. ಅವಳೇ ಊರ್ವಸಿಯೆಂದೂ, ಅನಂತರ ಆ ಚಿತ್ರಕಲೆಯನ್ನು ಬೋಧಿಸುವುದಕ್ಕಾಗಿ ಚಿತ್ರ ಸೂತ್ರಗಳನ್ನು ಬರೆದು, ವಿಶ್ವಕರ್ಮನಿಗೆ ಆ ಕಲೆಯನ್ನು ಕೊಟ್ಟನೆಂದೂ ಪುರಾಣಗಳಲ್ಲಿ ಕಥೆ ಬರುತ್ತದೆ.

ಈ ಕಥೆಗಳಿಗಿಂತಲೂ ಪೂರ್ವದಲ್ಲಿ ಚಿತ್ರಕಲೆ ಇದ್ದಿರಬೇಕೆನಿಸುತ್ತದೆ. ಏಕೆಂದರೆ: ಮೊದಲಿನ ಕಥೆಯಲ್ಲಿ ರಾಜಾ, ಬ್ರಾಹ್ಮಣ, ಯುವರಾಜ ಮುಂತಾದವರೆಲ್ಲರು ಬರುತ್ತಾರೆ. ಅಲ್ಲಿ ಒಂದು ಸಂಸ್ಕೃತಿ ಕಾಣುತ್ತೇವೆ. ಹಾಗಾಗಿ ಕಲೆ ಇನ್ನೂ ಮೊದಲಿರಬೇಕೆನಿಸುತ್ತದೆ. ನಂತರದ ಕಥೆಯಲ್ಲಿ ನಾರಾಯಣ, ಋಷಿಗಳ ಆಶ್ರಮದ ಸಂಸ್ಕೃತಿ ಕಾಣುತ್ತೇವೆ. ಆದರೆ ತಿಪ್ಪೇರುದ್ರ, ಸ್ವಾಮಿಯವರು ಹೇಳುವಂತೆ ಈ ಚಿತ್ರಗಳು ರಚಿಸುವಾಗ ಯಾವುದೇ ಪುಸ್ತಕವನ್ನು ಎದುರಿಗಿಟ್ಟುಕೊಂಡು ಅದನ್ನು ಮಾದರಿಯಾಗಿ ಅನುಸರಿಸಲಿಲ್ಲ, ಸ್ಮೃತಿಪಟಲದಲ್ಲಿ ಕಲ್ಪಿಸಿಕೊಂಡು, ಅದರ ಬಲದಿಂದಲೇ ಚಿತ್ರಿಕರಿಸಿದವುಗಳು ಎಂದು. ಆದರೂ ಇದು ಒಂದು ಊಹೆ ಆಗುತ್ತದೆ.

ಮಾನವನಿಗೆ ಮಾತು ಬರದ ಮುಂಚೆಯೇ ಚಿತ್ರಕಲೆ ಇತ್ತೆಂಬ ವಾದಕ್ಕೆ ಆದಿ ಕಾಲದ ಪ್ರಾಣಿ, ಮೂಳೆಗಳು, ಹಿಮಯುಗದ ಮಾನವ, ಗುಹೆ, ಬಂಡೆಗಲ್ಲಿನ ಮೇಲಿನ ಚಿತ್ರಗಳಿಂದ ತಿಳಿದು ಬರುತ್ತದೆ. ಆವಾಗಲೆ ಮಾನವನು ತಾನು ಹೊಟ್ಟೆತುಂಬಿಕೊಳ್ಳಲು ಬೇಟೆ ಆಡಿದ ಪ್ರಾಣಿಗಳು, ಕಂಡ ಪ್ರಕೃತಿ, ಗುಹೆ ಮೊದಲಾದವು ಸಹಜವಾಗಿ ಗೆರೆ ಕೊರೆದಿರಬೇಕು. ನಂತರ

ಸ್ವಲ್ಪ ತಿಳುವಳಿಕೆಯಿಂದ ತಾನು ಇಂತಿಂತಹ ಪ್ರಾಣಿಗಳನ್ನು ಬೇಟೆ ಆಡುತ್ತೇನೆ. ತಾನು ಹೀಗೆ, ತನ್ನ ಊಟ-ತಿಂಡಿ ಹೀಗೆ ಎಂಬ ಕಲ್ಪನೆ ಹೊಳೆದು ಅದರ ಅಭಿವ್ಯಕ್ತಿ ಸಂಜ್ಞೆಗಳ ಮೂಲಕ ತನ್ನ ಸಂಗಾತಿಗಳಿಗೆ ಹೇಳುವುದು ಅವರಿಗೆ ತಿಳಿಯದಾದಾಗ, ಗೆರೆಕೊರೆದು ಚಿತ್ರರೂಪದಲ್ಲಿ ಬಿಡಿಸಲು ಪ್ರಯತ್ನಿಸಿರಬೇಕು ಎನಿಸುತ್ತದೆ. ಹೀಗೆ ಚಿತ್ರಕಲೆ ಜೀವನದ ಅವಶ್ಯಕತೆಗಾಗಿ ಹುಟ್ಟಿಕೊಂಡು, ಕಲಾರೂಪ ತಾಳುತ್ತ ಇಂದಿನ ಅಭಿಜಾತ ಕಲೆಯವರೆಗೆ ವಿಕಾಸಗೊಂಡಿರ ಬೇಕೆನಿಸುತ್ತದೆ.

೨. ಪರಂಪರೆ:

ಸ್ಪೇನ್ ದೇಶದ ಸಾತಿಲಾನಾ-ಡೆಲ್‌ಮಾರ್‌ನಲ್ಲಿರುತ್ತಿದ್ದ ಶ್ರೀಮಂತ ಡಾನ್ ಮರ್ಸಲಿನೋ-ಡಿ-ಸಾತುಓಲಾನನು ೧೮೬೮ ರಲ್ಲಿ ಅಲ್ತಮೀರ್ ಗುಹೆಯೊಂದನ್ನು ಕಂಡಿದ್ದ, ಮತ್ತೆ ೧೮೭೯ ರಲ್ಲಿ ಒಂದು ದಿನ ''ಅಲ್ತಮೀರ್ ಗುಹೆಯ ಹತ್ತಿರ ಬಂದಾಗ ಅವನ ಐದು ವರ್ಷದ ಮಗಳು ಮಾರಿಯಾ ಕೂಡಾ ಅವನೊಂದಿಗಿದ್ದಳು. ತಂದೆ ಗುಹೆಯ ಪಕ್ಕದಲ್ಲಿ ಏನನ್ನೋ ಅಗೆದು ಹುಡುಕಾಡುತ್ತಿದ್ದಾಗ, ಹುಡುಗಿ ಆಟವಾಡುತ್ತ ಅಲ್ಲಿದ್ದ ಗುಹೆಯೊಂದರ ಒಳಗೆ ನುಗ್ಗಿದಳು. ಮೇಣದ ಬತ್ತಿಯೊಂದನ್ನು ಕೈಯಲ್ಲಿ ಹಿಡಿದು ಅವಳು ಒಳಗೆ ಹೋಗಿ ಸುತ್ತಮುತ್ತ ನೋಡುತ್ತಿದ್ದಾಗ ಇದ್ದಕ್ಕಿದ್ದಂತೆ 'ದನ, ದನ' ಎಂದು ಕೂಗಿಕೊಂಡಳು. ಗುಹೆಯೊಳಗಿಂದ ಬಂದ ಈ ಕೂಗನ್ನು ಕೇಳಿ ತಂದೆ ಗುಹೆಯೊಳಗೆ ಹೋದ. ಮಗಳು ಕತ್ತಲೆ ಮೂಲೆಯೊಂದರ ಕಡೆ ಕೈ ತೋರಿಸಿ, 'ಅದೋ ದನಗಳು ಅಲ್ಲಿವೆ!' ಎಂದು ಸಂಭ್ರಮದಿಂದ ಹೇಳಿದಳು. ತಂದೆ ದೀಪಗಳನ್ನು ತರಿಸಿ ನೋಡಿದಾಗ ಗೋಡೆಗಳ ಮೇಲೆ ಕೆಂಪು ಬಣ್ಣದ ದನಗಳು ಅಲೆದಾಡುತ್ತಿರುವ ಚಿತ್ರವಿದ್ದುದು ಕಂಡು ಬಂದಿತು. ಹಾಗೆಯೇ ನೋಡಲು ಗುಹೆಯೊಳಗೆ ಹೋದಾಗ ಗೋಡೆಗಳ ಮೇಲೆಲ್ಲಾ ತುಂಬಾ ಸ್ವಾರಸ್ಯವಾದ ಚಿತ್ರಗಳಿದ್ದವು'' ಎಂದು ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರು ಕರ್ನಾಟಕದ ಕಲೆಗಳು ಪುಸ್ತಕದ ಭೂಮಿಕೆಯಲ್ಲಿ (ಪು. ೩೩-೩೪: ಕ.ಸಾ.ಪ.) ವಿವರಿಸಿದ್ದಾರೆ. ಇವು ಹಿಮಯುಗದ ಚಿತ್ರಗಳೆಂದು ಡಾನನ ಮನಸ್ಸಿಗೆ ಖಚಿತವಾಯಿತು ಎಂದರೆ ಮೂವತ್ತು ಸಾವಿರ ವರ್ಷಗಳಷ್ಟು ಹಿಂದೆ ಮೂಡಿಕೊಂಡ ಚಿತ್ರಗಳು ಇರಬೇಕು. (ಹೆಚ್ಚಿನ ವಿವರಕ್ಕೆ ಕ.ಕ. ಭೂಮಿಕೆ ಕಾಣಬಹುದು)

ಈ ಚಿತ್ರಗಳು '೩೦೦ ಶತಮಾನಗಳಷ್ಟು ಹಿಂದಿನವಲ್ಲ, ಡಾನನು ತಾನೇ ಚಿತ್ರಿಸಿ ಮೋಸಮಾಡಿದ್ದಾನೆ ಮುಂತಾಗಿ ವಾದ ವಿವಾದಗಳಾಗಿ ಇವನಿಗೆ ಮೊದಲಿಸಿದ' ಎಮಿಲ್ ಕಾರ್ತೆಲ್‌ಹಾಕ್ ೧೯೦೩ ರಲ್ಲಿ ಮತ್ತೆ ಅಲ್ತಮೀರ್ ಗುಹೆ ಪರೀಕ್ಷಿಸಿ ಚಿತ್ರಕಲೆಯ ಇತಿಹಾಸ ೩೦೦ ಶತಮಾನಗಳಷ್ಟು ಹಳೆಯದೆಂದು ಒಪ್ಪಿಕೊಂಡ' ಎಂಬ ವಿಚಾರವು ಅದೇ ಗ್ರಂಥದಲ್ಲಿದ್ದದ್ದು ಕಾಣುತ್ತೇವೆ.

ಇಷ್ಟೊಂದು ಹಿಂದಿನ ಕಾಲದ ಚಿತ್ರಗಳೇ ಸುಂದರವಾಗಿರಬೇಕಾದರೆ ಸಹಜ ಚಿತ್ರಕಲೆಯ ಪರಂಪರೆ ಅದಕ್ಕಿಂತಲೂ ಅದೆಷ್ಟೋ ಶತಮಾನಗಳ ಹಿಂದೆ ಇದ್ದಿರಬೇಕೆಂಬ ವಿಚಾರ ಬರುವುದು ಸಹಜವಾಗಿದೆ. ಇದಕ್ಕೆ ವ್ಹಿ.ಟಿ. ಕಾಳೆಯವರು ಮೊದಲ ಮಾನವನು ೫೦,೦೦೦ ವರ್ಷಗಳ ಹಿಂದೆ ಚಿತ್ರ ಬರೆದದ್ದು ತಿಳಿದು ಬರುತ್ತದೆ ಎಂದು ೫೦೦ ಶತಮಾನಗಳ ಡಾನನ ಶೋಧಕ್ಕಿಂತಲೂ ಹಿಂದಿನ ಆಧಾರಗಳನ್ನು ತಿಳಿಸುತ್ತಾರೆ.

ಭಾರತ ಹಾಗೂ ಕನ್ನಡ ನಾಡಿನಲ್ಲಿ ಇಷ್ಟು ಪ್ರಾಚೀನವೆನಿಸುವ ಗುಹಾಚಿತ್ರಗಳು ಕಾಣುವುದಿಲ್ಲವಾದರೂ ಸುಮಾರಾಗಿ ಹಳೆಯ ಕೆಲವು ನಿದರ್ಶನಗಳು ದೊರೆಯುತ್ತವೆ. ಮಡಕೆಯ ಮೇಲೆ ಕೊಕ್ಕರೆಯ ನೆರಳು ಚಿತ್ರ ಬಿಡಿಸಿರುವುದು ಸುಮಾರು ಹತ್ತು ಸಾವಿರ ವರ್ಷಗಳಷ್ಟು ಹಳೆಯದು (ಕ.ಕ.ಭೂ.ಪು. ೪೫) ಎಂಬ ಉಲ್ಲೇಖ ಕಾಣುತ್ತೇವೆ. ಕ್ರಿ.ಶ. ಪೂರ್ವ ೨ನೆಯ ಶತಮಾನದ ಬ್ರಾಹ್ಮಿ ಲಿಪಿಯ ಶಾಸನ ಅಜಂತೆಯ ಎರಡನೆಯ ಗುಹೆಯಲ್ಲಿದೆ. ಪುರಾತನ ಗ್ರಂಥಗಳಾದ ರಾಮಾಯಣ, ಮಹಾಭಾರತ ಮೊದಲಾದ ಗ್ರಂಥಗಳಲ್ಲಿಯೂ ಚಿತ್ರಕಲೆಯ ಕುರಿತು ಉಲ್ಲೇಖಗಳಿರುವುದು ಸರ್ವವಿದಿತ. ಬಾದಾಮಿಯ ಮೂರನೆ ಗುಹೆ ಎರಡನೆ ಶತಮಾನದ್ದೆಂದು ತಿಳಿದು ಬಂದಿದೆ. ಇಲ್ಲಿಯೂ ಚಿತ್ರಕಲೆ ಕಾಣುತ್ತೇವೆ. ಜೊತೆಗೆ ಮಾರವಾರದಿಂದ ಗುಜರಾತಿನವರೆಗೂ ಚಿತ್ರಕಲೆಯ ಪರಂಪರೆಯು ಬೆಳೆದು ಬಂದಿರುವುದಾಗಿದೆ. ಮೊಗಲರ ಕಾಲದಲ್ಲಿಯೂ ವಿಶೇಷವಾದ ಚಿತ್ರಕಲೆಗಳಿದ್ದುವೆಂಬುದು ತಿಳಿದು ಬರುತ್ತದೆ. ಭಾಸನ ನಾಟಕಗಳಲ್ಲಿ, ಕಾಳಿದಾಸನ ಗ್ರಂಥಗಳಲ್ಲಿ, ಭಿತ್ತಿಚಿತ್ರ ಹಾಗೂ ರಾಜಾಶ್ರಯಗಳಲ್ಲಿ ಚಿತ್ರಶಾಲೆಗಳಿದ್ದುವೆಂಬುದು ಕಾಣಬಹುದಾಗಿದೆ. ವಾತ್ಸಾಯನ ಕಾಮಸೂತ್ರದಲ್ಲಿ ಷಡಂಗಗಳ ಕುರಿತು ಸೂತ್ರ ಮುಂತಾಗಿ ದೊರೆಯುತ್ತವೆ. ಶ್ರೀರಂಗಪಟ್ಟಣ, ನಿಪ್ಪಾಣಿ, ವಾಡೆ, ಹಂಪಿ, ಬೇಲೂರು, ಹಳೆಬೀಡು ಮೊದಲಾದ ಕಡೆಗಳಲ್ಲೆಲ್ಲ ಚಿತ್ರಕಲೆಗಳನ್ನು ಕಾಣುತ್ತೇವೆ.

ಬೀದರ ಜಿಲ್ಲೆಯಲ್ಲಿ ೧೦೦೦ ವರ್ಷಗಳಿಗೂ ಹಿಂದಿನಿಂದ ಚಿತ್ರಕಲೆಗಳಿದ್ದುವೆಂಬುದಕ್ಕೆ ಆಧಾರಗಳಿವೆ. ''ಒಂದು ಐತಿಹ್ಯದ ಪ್ರಕಾರ ಇಡೀ ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ಜೇಡಿಮಣ್ಣಿನ ರಂಗು ರಂಗಿನ ಚಿತ್ರಗಳನ್ನು ಕೊರೆದ ಟೈಲ್ಸ್‌ಗಳ ಬಳಕೆಯನ್ನು ತಂದವರು ಬಹುಮನಿ ರಾಜಮನೆತನದವರು. ನಂತರ ಈ ಕಲೆ ಭಾರತದ ಎಲ್ಲೆಡೆ ಹರಡಿತು'' ಎಂದು ಹೇಳಲಾಗುತ್ತದೆ. (ಪ್ರ.ವಾ. ೮.೧೧.೯೦) ಅಂತಹ ರಂಗು ರಂಗಿನ ಚಿತ್ರಗಳು ಬೀದರ ಕೋಟೆಯಲ್ಲಿನ 'ರಂಗೀನ್ ಮಹಲ್'ದಲ್ಲಿ ಇಂದಿಗೂ ಸುಂದರವಾಗಿದ್ದು, ಪ್ರವಾಸಿಗರನ್ನು ಕೈ ಮಾಡಿ ಕರೆಯುವಂತಿವೆ. ಒಂದು ಕಾಲಕ್ಕೆ ವಿಶ್ವದಲ್ಲಿಯೇ ಪ್ರಸಿದ್ಧವಾಗಿದ್ದ ಬೀದರಿನ 'ಮಹಮದ್ ಗವಾನ ಮದರಸಾ' ವಿಶ್ವವಿದ್ಯಾಲಯದಲ್ಲಿ ಪರ್ಶಿಯನ್ ಭಾಷೆಯಲ್ಲಿ ಬರೆದ ಅಕ್ಷರಗಳು ವಿವಿಧ ಬಣ್ಣಗಳಿಂದ

ಕೂಡಿದ್ದು ಇಂದಿಗೂ ಥಳ, ಥಳ ಹೊಳೆಯುವುದನ್ನು ಕಾಣಬಹುದಾಗಿದೆ. ೮೦೦ ಕ್ಕೂ ಹಿಂದೆ ಕಟ್ಟಲ್ಪಟ್ಟ ಹುಮನಾಬಾದ್ ವೀರಭದ್ರೇಶ್ವರ ಮಂದಿರದ ಮೇಲಿರುವ ಗೊಂಬೆಗಳು ಇಂದಿಗೂ ಸುಂದರವಾಗಿವೆ. ೧೨ನೇ ಶತಮಾನದಲ್ಲಿ ಬಸವಕಲ್ಯಾಣದ ಬಿಜ್ಜಳನ ಆಸ್ಥಾನದಲ್ಲಿ ಚಿತ್ರಗಳಿದ್ದವೆಂಬುದಕ್ಕೆ ಆಧಾರಗಳಿವೆ. ಹಾಗೂ ಬಸವಣ್ಣನವರ ಮಂದಿರದಲ್ಲಿ ಕಲ್ಲಿನಲ್ಲಿ ಕಟೆದ ಚಿತ್ರಗಳನ್ನು ಕಾಣಬಹುದಾಗಿದೆ. ಇವುಗಳ ಜೊತೆಗೆ ಪುರಾತನ ಮಾನವ (ಇಂದಿಗೂ ಸಹ) ಮೈ ಮೇಲೆ ಹಚ್ಚೆ ಚುಚ್ಚಿಕೊಳ್ಳುವುದರ ಮೂಲಕ ಚಿತ್ರಗಳನ್ನು ಬಿಡಿಸುತ್ತಿದ್ದ ಎಂಬುದು ಕಾಣುತ್ತೇವೆ. ಇತ್ತೀಚೆಗೆ ಕೇಂದ್ರ ಹಾಗೂ ರಾಜ್ಯ ಲಲಿತಕಲಾ ಅಕಾಡೆಮಿಗಳು ಚಿತ್ರಕಲೆಗೆ ಪುಟಕೊಟ್ಟದ್ದು ಕಾಣುತ್ತೇವೆ. ನವ್ಯ ಕಲಾವಿದರು ಮುಂಬಯಿ, ಚೆನ್ನೈ ಮೊದಲಾದ ಕಡೆಗಳಲ್ಲಿ ಚಿತ್ರಕಲೆಯ ಅಭ್ಯಾಸಮಾಡಿ, ಬೆಂಗಳೂರು, ದಾವಣಗೆರೆ, ಗುಲಬರ್ಗಾ, ಬೀದರ, ಮುಂತಾದ ಕಡೆಗಳಲ್ಲಿ ಅಧ್ಯಾಪಕರಾಗಿ ಚಿತ್ರಕಲೆಯಲ್ಲಿ ನಿರತರಾದುದನ್ನು ಇಂದು ಕಾಣುತ್ತೇವೆ. ಒಟ್ಟಿನಲ್ಲಿ ಜನಪದದಿಂದ ಸೃಷ್ಟಿಯಾದ ಚಿತ್ರಕಲೆ ಬೆಳೆಯುತ್ತ, ಬೆಳೆಯುತ್ತ ಶಿಷ್ಟಕಲೆಯ ಲಲಿತಕಲೆಗಳಲ್ಲೊಂದಾಗಿದೆ.

೩. ಚಿತ್ರಕಲೆಯ ತಾಣ ಹಾಗೂ ಚಿತ್ರಗಳು :

ಮಾನವ ಮೊಟ್ಟ ಮೊದಲು ಚಿತ್ರ ಯಾವುದರ ಮೇಲೆ ಬಿಡಿಸಿದ ಎಂಬುದು ಖಚಿತವಾಗಿ ಹೇಳಲಿಕ್ಕಾಗದು. ಬಹುಶಃ ಮೊದಲು ನೆಲದ ಮೇಲೆ ಬಿಡಿಸಿರಬೇಕು. ನಂತರ ಬಂಡೆ, ಗುಹೆ, ಭಿತ್ತಿ ಚಿತ್ರ ಮೊದಲಾಗಿ ತೆಗೆದಿರಬೇಕು. ಆಮೇಲೆ ತಾನು ಬಳಸಿಕೊಳ್ಳುವ ಮಡಕೆ ಮೊದಲಾದವುಗಳ ಮೇಲೆ ಚಿತ್ರಿಸಿರಬೇಕು. ನಂತರ ವಾಸವಾಗಿರಲು ಮನೆ, ಬೇಸಾಯಕ್ಕಾಗಿ ಹೊಲ ಕಂಡುಕೊಂಡ ಮೇಲೆ ಗೋಡೆ, ಕಟ್ಟಿಗೆ, ಲೋಹ, ಬಟ್ಟೆ ತಾಡೋಲೆ, ಹಾಳೆ ಮುಂತಾದವುಗಳ ಮೇಲೆ ಚಿತ್ರ ಬಿಡಿಸಿರಬಹುದು.

ಒಟ್ಟಿನಲ್ಲಿ ಚಿತ್ರಕಲೆಯ ತಾಣ ಗುರುತಿಸಬೇಕೆಂದರೆ: ನೆಲದ ಮೇಲೆ, ಕಲ್ಲುಗಳ ಮೇಲೆ, ಅಂಗಾಂಗಗಳ ಮೇಲೆ, ಚರ್ಮದ ಮೇಲೆ, ಮಡಕೆ-ಕುಡಿಕೆಗಳ ಮೇಲೆ, ಗೋಡೆಗಳ ಮೇಲೆ, ಕಟ್ಟಿಗೆಗಳ ಮೇಲೆ, ಲೋಹಗಳ ಮೇಲೆ, ಬಟ್ಟೆಗಳ ಮೇಲೆ, ಎಲೆಗಳ ಮೇಲೆ, ಹಾಳೆಗಳ ಮೇಲೆ, ಊಟದ ಪದಾರ್ಥಗಳ ಮೇಲೆ, ದವಸಧಾನ್ಯಗಳ ಮೇಲೆ, ಜನಪದ ಚಿತ್ರಕಲೆಗಳನ್ನು ಕಾಣಬಹುದಾಗಿದೆ.

೧. ನೆಲದ ಮೇಲೆ:

ನೆಲದ ಮೇಲೆ ಕಾಣುವ ಚಿತ್ರಗಳಲ್ಲಿ ದಿನನಿತ್ಯ ಹೊಸಹೊಸದಾಗಿ ಕಾಣುವ ಚಿತ್ರವೆಂದರೆ, 'ರಂಗೋಲಿ'. ರಂಗೋಲಿಯ ಚಿತ್ರಗಳು ಹೀಗ್ಗೀಗೆ ಎಂಬ ಸೀಮಿತತೆ ಇಲ್ಲ, ಚಿತ್ರ ಬಿಡಿಸಲು ಬಲ್ಲವರು ನೂರಾರು ರೀತಿಯಲ್ಲಿ ರಂಗೋಲಿಗಳನ್ನು ಹಾಕುತ್ತಾರೆ. ಕಮಲ, ಶಂಖ, ಚಕ್ರ, ಹೂವು, ಸ್ವಸ್ತಿಕ, ಓಂ, ಷಟ್‌ಕೋನ, ಪಕ್ಷಿ, ಶಿವಲಿಂಗ ಮುಂತಾಗಿ.

ಸಮಯ ಕಳೆಯಲು ಅಥವಾ ಆಟಕ್ಕಾಗಿ ಆಡುವ ಜನಪದ ಆಟಗಳಾದ ಹುಲಿ-ಕುರಿ, ಮುಗುಲ್ ಪಠಾಣ, ಅಟ್ಟಚೆಮ್ಮ, ಪಚೇಸಿ, ಚೆಕಾರ್ ಮೊದಲಾದ ಆಟದ ಮನೆಗಳ ಚಿತ್ರಗಳನ್ನು ಸಹ ನೆಲದ ಮೇಲೆಯೇ ಇಳಿಸುವುದು ಕಾಣುತ್ತೇವೆ. ಇವುಗಳ ಪ್ರಮುಖ ತಾಣಗಳೆಂದರೆ; ಪರಖಾನಿ,(ಬಂಕು), ಪಡಸಾಲಿ, ಮನೆಯ ಮುಂದಿನ ಕಟ್ಟೆ, ಗುಡಿಯ ಕಟ್ಟೆ, ಚಪ್ಪಟೆಯ ಕಲ್ಲು ಮೊದಲಾದವುಗಳು. ಹಾವಗಾರ ಆಟದವರು ನೆಲದ ಮೇಲೆ ಮಣ್ಣಿನಲ್ಲಿ ತಮ್ಮ ಆಟಕ್ಕೆ ತಕ್ಕಂತೆ ಚಿತ್ರಗಳನ್ನು ಬಿಡಿಸುತ್ತಾರೆ. ಮಂತ್ರ ಮಾಟದವರು ಕೂಡಾ ಮಣ್ಣಿನಲ್ಲಿ ಗೆರೆಕೊರೆದು ಅಥವಾ ಸಾರಿಸಿದ ನೆಲದ ಮೇಲೆ ಸುಣ್ಣ-ಜಾಜ, ಕುಂಕುಮ-ಅರಿಸಿಣ ಮೊದಲಾದವುಗಳಿಂದ ಚಿತ್ರ ಬಿಡಿಸಿಕೊಳ್ಳುವುದು ಕಾಣುತ್ತೇವೆ. ಪೂಜೆ ಪುನಸ್ಕಾರ ಮೊದಲಾದ ಸಂದರ್ಭಗಳಲ್ಲಿಯೂ ಪುರೋಹಿತರು ಮೊದಲಾದವರು ಮಂಡಲ ಮೊದಲಾಗಿ ಚಿತ್ರಬಿಡಿಸುವುದಾಗಿದೆ. ಹೊಲದಲ್ಲಿ ಖಳ(ಕಣ) ಹಾಕಿದಾಗ ಅದರಲ್ಲಿ ಓಂ, ಸೂರ್ಯ, ಚಂದ್ರ, ಮೊದಲಾದವರ ಚಿತ್ರಗಳನ್ನು ಬೆರಳಿನಿಂದ ಅಥವಾ ಚಿಕ್ಕ ಕಟ್ಟಿಗೆಯಿಂದ ಇಳಿಸುವುದನ್ನು ಕಾಣಬಹುದು. ಚಿಕ್ಕಮಕ್ಕಳು ತಮ್ಮ ನೆರಳಿನಂತೆ ಅಥವಾ ಯಾವುದೇ ಗಿಡ, ಕಟ್ಟಡ ಮೊದಲಾದವುಗಳ ನೆರಳಿಗನುಗುಣವಾಗಿ ನೆಲದ ಮೇಲೆ ಚಿತ್ರ ಬಿಡಿಸುವುದು ಮೊದಲಾಗಿ ಹಲವಾರು ರೀತಿಯ ಚಿತ್ರಗಳನ್ನು ನೆಲದ ಮೇಲೆ ಬಿಡಿಸುವುದು ಚಾಲನೆಯಲ್ಲಿರುವುದಾಗಿದೆ.

೨. ಕಲ್ಲುಗಳ ಮೇಲೆ:

ಕಲ್ಲುಗಳ ಮೇಲೆ ಸಾಮಾನ್ಯವಾಗಿ ಕಾಣುವ ಚಿತ್ರಗಳೆಂದರೆ: ಪ್ರಾಣಿ, ಮಾನವ, ಪಶು-ಪಕ್ಷಿ, ಸ್ತ್ರೀ ನೃತ್ಯಭಂಗಿ, ಶಿವ,ಲಿಂಗ, ದೇವ-ದೇವತೆಗಳು, ಗುಡಿ, ಗಿಡ, ಹೂ, ಕುದುರೆ ಮೊದಲಾದವುಗಳು. ಇಂತಹ ಚಿತ್ರಗಳು ಬಿಡಿಸಿದ ಕಲ್ಲುಗಳು, ಗುಡಿಗಳ ಗೋಡೆಯಲ್ಲಿ, ಕಂಬಗಳಲ್ಲಿ, ಕಟ್ಟೆಗಳಲ್ಲಿ ಮೊದಲಾಗಿ ಸಾಮಾನ್ಯವಾಗಿರುತ್ತವೆ.

ಕಲ್ಲಿನಿಂದ ಮಾಡಿರುವ ಒಳ್ಳು, ಬಿಸೆಕಲ್ಲು(ಬೀಸುವ ಕಲ್ಲು) ಮುಂತಾದವುಗಳ ಮೇಲೆ ಸುಂದರವಾಗಿ ಕಾಣಲು ಹೂಗಳು ಹಾಗೂ ಕೊನೆಗೆ ಸುತ್ತಲೂ ಅಂಚಿನ ರೀತಿಯಲ್ಲಿ ಬಳ್ಳಿಯಂತಹ ಚಿತ್ರಗಳು ಮೊದಲಾಗಿಯೂ ಕೆತ್ತಿರುತ್ತಾರೆ. ಕಲ್ಲಿನಿಂದ ಮಾಡಿರುವ ಮೂರ್ತಿ ಮೊದಲಾದವುಗಳ ಕೊರಳಲ್ಲಿ, ಕೈ ರಟ್ಟೆಯಲ್ಲಿ, ಟೊಂಕದ ಸುತ್ತ ಮೊದಲಾಗಿ ಆಭರಣಗಳಂತೆ ಚಿತ್ರ ಕೆತ್ತಿರುತ್ತಾರೆ.

ಕೆಲವು ವಿಶಿಷ್ಟ, ರೀತಿಯ ಗುಡ್ಡ-ಗಾಡು ಪ್ರೇಕ್ಷಣೀಯ ಸ್ಥಳ, ವಿಶಿಷ್ಟ ಗುಡಿ-ಗುಂಡಾರಗಳಲ್ಲಿರುವ ಬಂಡೆಗಲ್ಲುಗಳ ಮೇಲೆ ಅಲ್ಲಿಗೆ ಹೋದವರು ತಮ್ಮ ಹಾಗೂ ತಮ್ಮ ಪ್ರೇಮಿಗಳ ಹೆಸರು, ಚಿತ್ರ ಮೊದಲಾಗಿಯೂ ಇನ್ನೊಂದು ಚೂಪಾದ ಕಲ್ಲಿನಿಂದ ಕೆತ್ತುವುದು ಕಾಣುತ್ತೇವೆ.

ಗುಡಿಯ ಬಾಗಿಲುಗಳ ಮೇಲೆ, ಮೆಟ್ಟಿಲುಗಳ ಮೇಲೆ ಹಾಗೂ ವಿವಿಧ ಸ್ಥಳಗಳಲ್ಲಿಯ ವಿವಿಧ ಕಲ್ಲುಗಳ ಮೇಲೆ ವಿವಿಧ ಚಿತ್ರಗಳನ್ನು ವಿವಿಧ ಪ್ರಕಾರಗಳಲ್ಲಿ ಕೆತ್ತುವುದನ್ನು ಕಾಣಬಹುದಾಗಿದೆ.

೩. ಮೈ ಮೇಲೆ:

ಮನುಷ್ಯನ ಮೈ ಮೇಲೆ ಸಾಯುವವರೆಗೆ ಶಾಶ್ವತವಾಗಿ ಇರುವ ಚಿತ್ರವೆಂದರೆ: ಹಚ್ಚೆಕಲೆ. ಇದು ಹಣೆಯ ಮೇಲೆ, ಅಂಗೈ-ಮುಂಗೈ ಮೇಲೆ, ತೋಳುಗಳ ಮೇಲೆ, ಎದೆಯ ಮೇಲೆ ಮೊದಲಾಗಿ ಎಲ್ಲೆಂದರಲ್ಲಿ ಚಿತ್ರಿಸಿಕೊಳ್ಳುವವರೂ ಇದ್ದಾರೆ.

ಹಚ್ಚೆ ಕಲೆಯಂತೆ ಮೈಮೇಲೆ ಕಂಡು ಬರುವ ಇನ್ನಿತರ ಕೆಲವು ಚಿತ್ರಗಳೆಂದರೆ: ಮೊಹರಂ ಮೊದಲಾದ ಸಂದರ್ಭಗಳಲ್ಲಿ ಹುಲಿವೇಷ ಮೊದಲಾಗಿ ಹಾಕಿ ಕುಣಿಯುವವರ ಮೈ ಮೇಲೆ, ಬಯಲಾಟ ಮೊದಲಾದ ಪಾತ್ರಗಳ ಮುಖದ ಮೇಲೆ, ದೆವ್ವ-ಭೂತ ಮುಂತಾಗಿ ಪಾತ್ರ ಹಾಕಿ ಕುಣಿಯುವವರ ಮೈ ಮೇಲೆ, ವಿಶಿಷ್ಟವಾಗಿ ಬರೆದಿರುವ ಚಿತ್ರಗಳಿರುತ್ತವೆ. ಇವುಗಳಂತೆ ಕೋಲಾಟ ಮೊದಲಾದವುಗಳ ಸಂದರ್ಭದಲ್ಲಿ ಹನುಮಂತ, ಕೃಷ್ಣ ರಾಮ-ಲಕ್ಷ್ಮಣ, ಶಿವ-ಪರಮೇಶ್ವರ, ಮುಂತಾದ ಹಲವು ಪಾತ್ರಧಾರಿಗಳ ಮೈ ಮೇಲೆಲ್ಲ ಚಿತ್ರಗಳು ಬರೆದದ್ದು ಕಾಣುತ್ತೇವೆ.

ಜಾತಗಾರರು, ಕಾನಕಪಡೆಯವರು, ಭಡಂಗ್ಯಾ ಮುಂತಾದವರು ಕೂಡ ತಮ್ಮ ಮೈ ಮೇಲೆ ಬಳಿದುಕೊಳ್ಳುವ ಬಣ್ಣ ಒಂದು ರೀತಿಯ ಚಿತ್ರಕಲೆಯೇ ಆಗಿದೆ. ಇನ್ನು ಕೈ, ಕಾಲು ಮುಂತಾದವುಗಳ ಮೇಲೆ ಸ್ತ್ರೀ-ಪುರುಷರು ಮೇಂದಿ(ಮೆಹಂದಿ/ಮದರಂಗಿ) ಯಿಂದ ಹೂ, ಗಿಡ, ಎಲೆ, ಬಳ್ಳಿ, ಚಕ್ರ, ಹೆಸರು ಮುಂತಾಗಿ ಬರೆದುಕೊಳ್ಳುವ ಚಿತ್ರಗಳೂ ಬಹು ಸುಂದರವಾಗಿರುತ್ತವೆ.

ಮೈನೆರೆದಾಗ ಮೈನೆರೆದವಳ ಕೈ-ಕಾಲು ಮುಖ ಮೊದಲಾದಲೆಲ್ಲ ಸೋಸಿದ ಗಂಧದಿಂದ ಚಿತ್ರ ಬಿಡಿಸುವುದೂ ಇದೆ. ಇಲ್ಲಿ ಚಿತ್ರ ಬಿಡಿಸಲು ವಿಶೇಷವಾಗಿ ಕುಸುರಿನಿಂದ ಮಾಡಿರುವ ಸಿಂಪಿ ಮೊದಲಾದವುಗಳನ್ನು ಬಳಸಿಕೊಳ್ಳುತ್ತಾರೆ. ಇದಕ್ಕೆ 'ಗಂಧ ಬರೆಯುವ ಸಿಂಪಿ' ಎಂದೇ ಕರೆಯುವರು. ಕೆಲವರು ಹಣೆಯ ಮೇಲೆ ವಿವಿಧ ರೀತಿಯಲ್ಲಿ ನಾಮ ಮೊದಲಾಗಿಯೂ ಬಳಿದುಕೊಳ್ಳುವುದಾಗಿದೆ. ಚಿಕ್ಕಮಕ್ಕಳಿಗೆ ಹಾಸ್ಯಕ್ಕಾಗಿ ಮುದ್ದಿನಿಂದ ಗಡ್ಡ-ಮೀಸೆ ಮೊದಲಾಗಿ ವಿಭೂತಿ, ಚಾಕ್‌ಪೀಸ್, ಶಾಯಿ, ಪೆನ್ನು ಮೊದಲಾದವುಗಳಿಂದ ಚಿತ್ರಬಿಡಿಸುವುದೂ ಕಾಣುತ್ತೇವೆ.

ಮಾನವನ ಮೈ ಮೇಲೆ ಚಿತ್ರ ಬಿಡಿಸುವಂತೆ ಎತ್ತು, ಆಕಳು, ಹೋರಿ, ಎಮ್ಮೆ, ಮೊದಲಾದವುಗಳ ಮೈಮೇಲೆಯೂ ಚಿತ್ರಗಳನ್ನು ಬಿಡಿಸುವುದು ಕಾಣುತ್ತೇವೆ. ಕಾರ

ಹುಣ್ಣಿಮೆ ಹ್ವಾಳಾ ಮೊದಲಾದ ಹಬ್ಬಗಳಲ್ಲಿ ದನಗಳ ಮೈ ತೊಳೆದು ವಿವಿಧ ರಂಗುಗಳಿಂದ ಅಂಗೈಮುದ್ರೆ ಹಾಕಿದಂತೆ ಹಾಗೂ ಬಟ್ಟಲು ಮೊದಲಾದವುಗಳಿಂದ ಮುದ್ರೆ ಒತ್ತಿದಂತೆ ಅವುಗಳ ಮೈ ತುಂಬೆಲ್ಲ ಚಿತ್ತಾರಗಳನ್ನು ಬಿಡಿಸುತ್ತಾರೆ. ಕೊಂಬುಗಳಿಗೆ ವಿವಿಧಬಣ್ಣದ ವಾರನಿಸ್ ಮೊದಲಾದವುಗಳಿಂದ ಚಿತ್ರೀಕರಿಸುತ್ತಾರೆ. ಹೀಗೆ ಚಿತ್ರ ಬರೆದ ಎತ್ತು ಹೋರಿ ಮೊದಲಾದವುಗಳಿಗೆ ಝೂಲು ಮೊದಲಾಗಿ ಹಾಕಿ, ಹಣೆಗೆ ಬಾಸಿಂಗ ಕಟ್ಟಿ, ಕೊಂಬುಗಳಿಗೆ ಬೆಳ್ಳಿ ಮೊದಲಾದ ಕಿರೀಟಗಳು ಕೂಡಿಸಿ ಮೆರೆಸುವುದು ನೋಡುಗರಿಗೆ ಆಕರ್ಷಿಸುವಂತೆ ಮಾಡುವುದು ಜನಪದ ಚಿತ್ರಕಲೆಯ ವಿಶೇಷತೆ ಆಗಿದೆ.

೪. ಚರ್ಮದ ಮೇಲೆ:

ಜಿಂಕೆ ಚರ್ಮದಿಂದ ಮಾಡುವ ತೊಗಲುಗೊಂಬೆಗಳ ಮೇಲೆ ವಿವಿಧ ಬಣ್ಣಗಳಿಂದ, ರಂಗುಗಳಿಂದ ಬಿಡಿಸುವ ಚಿತ್ರಗಳು ಚಿತ್ರಕಲಾಕಾರನ ಕಲೆಯನ್ನು ಮೆರೆಯುವಂತಿರುತ್ತವೆ. ಇದರಂತೆ ಹಲಗಿ, ಡೋಳು, ಮೊದಲಾದವುಗಳ ಕೊನೆಗೆ ಅಂಚಿನಿಂದ ಬರೆಯುವ ಚಿತ್ರಗಳು ಹಾಗೂ ತಬಲಾ, ದಮಡಿ ಮುಂತಾದವುಗಳ ಮೇಲೆ ದುಂಡಗೆ ಮತ್ತೆ ಸ್ವಲ್ಪ ಕುಸುರಿನಂತೆ ಶಾಯಿ ಮೊದಲಾಗಿ ಹಚ್ಚುವುದೂ ಒಂದು ಕಲೆಯೇ ಆಗಿದೆ.

ಕುದುರೆ ಮೇಲೆ ಹಾಕಿ ಕೂಡುವ ಖೋಗಿಲು, ನೀರೆಳೆಯುವ ಮಟ್ಟ, ಹಣದ ಚೀಲ, ಕಂಬರಪಟ್ಟಾ ಬೂಟು, ಚಪ್ಪಲಿ ಮೊದಲಾದವುಗಳ ಮೇಲೆಲ್ಲ ಇಳಿಸುವ ಚಿತ್ರಗಳೂ ಜನಪದ ಚಿತ್ರಕಲಾಕೌಶಲ್ಯಗಳೇ ಆಗಿವೆ.

೫. ಮಡಕೆ ಮೊದಲಾದವುಗಳ ಮೇಲೆ:

ಮದುವೆಯಲ್ಲಿ ಐರಾಣಿ ಗಡಗಿಗಳ ಸುತ್ತ ವಿಭೂತಿ ಹಾಗೂ ಸುಣ್ಣದಿಂದ ಚಿತ್ರಬರೆಯುವುದು ಕಂಡರೆ, ಮನೆಯಲ್ಲಿ 'ಥಾಳಿ' ಯ ಮೇಲೆ ಹಾಲುಕಾಯಿಸಲು ಇಟ್ಟ ಗಡಿಗೆಗೆ ಅಲ್ಲಿಯದೆ ಒಂದು ಬೂದಿಯ 'ಕರಣೆ' ತೆಗೆದುಕೊಂಡು ಸುತ್ತಲು ಗೋಲಾಕಾರವಾಗಿ ಬರೆಯುವುದನ್ನು ಕಾಣುತ್ತೇವೆ. ಇದಕ್ಕೆ 'ಹುಲಿ' ಬರೆಯುವುದು ಎಂದು ಕರೆಯುತ್ತಾರೆ. ಕರಬನ ಪೇಣಿಸುವ ಗಡಿಗೆಗಳಲ್ಲಿ ಕೆಲವು ಗಡಿಗೆಗಳನ್ನು ಬಣ್ಣದಿಂದ ಚಿತ್ರಿಸಿದರೆ ಮತ್ತೆ ಕೆಲವು ಮಣ್ಣಿನಲ್ಲಿಯೇ ಕುಸುರಿನಿಂದ ಚಿತ್ರ ಬಿಡಿಸಿರುತ್ತಾರೆ. ಇವುಗಳಂತೆ ನೀರು ತುಂಬುವ ದೊಡ್ಡ ದೊಡ್ಡ ರಂಜುಣಗಿಯ ಕೊರಳ ಸುತ್ತ ಮಣ್ಣಿನ ಕೊಡಗಳ ಬಾಯಿಸುತ್ತ, ಹಣತಿಗೆ, ಮುಚ್ಚಳ, ಹೂವಿನ ಕುಂಡ, ಇವುಗಳ ಮೇಲೆಲ್ಲಾ ಕುಸುರಿನ ಚಿತ್ರಗಳು ಬಿಡಿಸಿರುವುದು ಕಾಣಬಹುದಾಗಿದೆ. ಬೇಸಿಗೆಯಲ್ಲಿ ನೀರು ತಂಪಾಗಿರಲು ಮಾಡಿರುವ ಸುರಯಿ, ಹರವಿ ಇವುಗಳ ಮೇಲೆ ಬಿಡಿಸಿದ ಚಿತ್ರಗಳೂ ಸುಂದರವಾಗಿರುತ್ತವೆ.

೬. ಗೋಡೆಗಳ ಮೇಲೆ:

ಗೋಡೆಗಳ ಮೇಲಿನ ಚಿತ್ರಗಳೆಂದರೆ ಭಿತ್ತಿ ಚಿತ್ರ ಹಾಗೂ ಕಲ್ಲಿನಲ್ಲಿ ಕೆತ್ತಿರುವ ಚಿತ್ರಗಳೆ ಎಂದು ಹೊಳೆಯುವುದು ಸಹಜ. ಈ ನಿಟ್ಟಿನಲ್ಲಿ ಬೀದರಿನ ಕೋಟೆಯ ರಂಗೀನ ಮಹಲ್ ಹಾಗೂ ಮಹಮದ್ ಗವಾನ ಮದರಸಾದಲ್ಲಿ ಭಿತ್ತಿ ಚಿತ್ರಗಳಿರುವ ಕುರಿತು ಈ ಹಿಂದೆ ಉಲ್ಲೇಖಿಸಲಾಗಿದೆ. ಕಲ್ಲಿನಿಂದ ಕೊರೆದ ಚಿತ್ರಗಳೆಂದರೆ: ಜಲಸಂಗಿಯ ಮಂದಿರದಲ್ಲಿ, ಮಾಣಿಕನಗರದ ಮಾಣಿಕ ಪ್ರಭು ಮಂದಿರದಲ್ಲಿ, ಕಲಬುರ್ಗಿಯ ಶರಣಬಸವೇಶ್ವರ ಮಂದಿರದಲ್ಲಿ ಕಾಣಬಹುದಾಗಿದೆ.

ಜನಸಾಮಾನ್ಯರು ಗೋಡೆಯ ಮೇಲೆ ಚಿತ್ರಗಳನ್ನು ಬರೆಯುವುದೆಂದರೆ: ಶೀಗಿ ಹುಣ್ಣಿಮೆಯ ಸಂದರ್ಭದಲ್ಲಿ ಮನೆಯ ಹೊರಬಾಗಿಲ ಪಕ್ಕದಲ್ಲಿ ಗಂಗಿ, ಗೌರಿ, ಕರಬನು, ಭೆರಚೀಲಾ, ಖಿಬ್ಬಿನಮಳು, ಬಾಳೆಗಿಡ, ಕಮಲದ ಹೂ, ಭಾರಂಭಾಯಿ ಮೊದಲಾದ ಚಿತ್ರಗಳು. ಶೀಗಿ ಹುಣ್ಣಿಮೆಯ ಆರೇಳು ದಿವಸ ಆಕಳ ಸಗಣಿಯಿಂದ ಚಿತ್ರಬಿಡಿಸಿ ಶೀಗಿ ಆಚರಣೆಯ ನಂತರ ಕೆಡಿಸಿ, ಕೊನೆಯ ದಿವಸ ವಿವಿಧ ರಂಗುಗಳಿಂದ ಇವೇ ಚಿತ್ರಗಳನ್ನು ಬಿಡಿಸುತ್ತಾರೆ. (ಈ ಕುರಿತು ನನ್ನ 'ಶೀಗಿ ಹಾಡುಗಳು' ಗ್ರಂಥದಲ್ಲಿ ವಿವರವಾದ ಮಾಹಿತಿ ನೋಡಬಹುದಾಗಿದೆ.)

ಮದುವೆಯ ಸಂದರ್ಭದಲ್ಲಿ ಹಂದರುಗಳಲ್ಲಿ ಭಾಸಿಂಗ, ಬಸವಣ್ಣ, ಹೂಗಳು, ಬಳ್ಳಿಗಳು, ಕುಸುರಿನಂತಹ ಚಿತ್ರಗಳನ್ನು ಸುಂದರವಾಗಿ ಚಿತ್ರಿಸಿರುತ್ತಾರೆ. ಮನೆಯಲ್ಲಿ ಸುಣ್ಣದ ಗೋಡೆಯ ಕೆಳಗೆ ಜಾಜ ಹಾಗೂ ಕೆಂಪು ಮಣ್ಣಿನ ಪಟ್ಟೆಗಳನ್ನು ಎಳೆದಿರುತ್ತಾರೆ. ಇವುಗಳ ಮೇಲೆ ಸೇಡಿಯಿಂದ, ರಂಗುಗಳಿಂದ ಚುಕ್ಕೆ, ಚುಕ್ಕೆಗಳಾಗಿ ಹಾಗೂ ರೇಖೆ ಮೊದಲಾಗಿ ಚಿತ್ರ ಬಿಡಿಸುತ್ತಾರೆ. ಕೆಲವರು ನಂದಿ, ಶಿವಲಿಂಗ ಮೊದಲಾದ ಚಿತ್ರಗಳನ್ನೂ ಬರೆಯುತ್ತಾರೆ. ಇವುಗಳಂತೆ ಮಾಡಗಳ ಸುತ್ತ, ಬಾಗಿಲು, ಕಿಡಕಿಗಳ ಸುತ್ತಲೂ ಬಳ್ಳಿಯಂತೆ, ಅಂಚುಗಳು ಇಳಿಸುತ್ತಾರೆ. ಜಗಲಿ, ಒಲೆ ಮುಂತಾದಲ್ಲಿ ಮುಗ್ಗ ಹಾಕುವ ಮೂಲಕ ಚಿತ್ರಿಸುತ್ತಾರೆ.

ಮಾಳಿಗೆ ಮನೆಯ ಗೋಡೆ ಮುಂತಾದ ಕಡೆಗಳಲ್ಲಿ ಮಣ್ಣಿನಿಂದಲೇ (ಕೆಸರಿನಿಂದ) ಕಂಬಗಳಂತೆ, ಕಮಾನಿನಂತೆ, ಚಕ್ರಗಳಂತೆ ಸುಂದರ ವಿನ್ಯಾಸಗಳನ್ನು ಮಾಡಿರುತ್ತಾರೆ. ಇನ್ನು ಕೆಲವರು ಗೊಂಬೆ, ಗಿಳಿ, ಗಣಪತಿ ಮೊದಲಾದ ಚಿತ್ರಗಳನ್ನು ತೆಗೆದಿರುತ್ತಾರೆ. ಇವೇ ಮಾದರಿಗಳಿಂದ ಇಂದು ಸಿಮೆಂಟಿನಲ್ಲಿಯೂ ಬಾರ್ಡರ್ ಮೊದಲಾಗಿ ಚಿತ್ರ ಬಿಡಿಸುವುದು ಕಾಣಬಹುದಾಗಿದೆ.

೭. ಕಟ್ಟಿಗೆಯ ಮೇಲೆ :

ಕಟ್ಟಿಗೆಯಿಂದ ಗೊಂಬೆ, ಮೂರ್ತಿ ಮೊದಲಾದವುಗಳು ಮಾಡುವುದು ಒಂದಾದರೆ,

ಬಾಗಿಲುಗಳ ಮೇಲೆ, ಚೌಕಟ್ಟುಗಳ ಮೇಲೆ ಕೆತ್ತುವುದು ಚಿತ್ರ ಬಿಡಿಸುವುದೇ ಆಗಿದೆ. ಚೌಕಟ್ಟುಗಳ ಮೇಲೆ ಗಣಪತಿ, ಆನೆ, ಸರಪಳಿ ಮೊದಲಾದ ಚಿತ್ರಗಳು ಕಂಡರೆ ಬಾಗಿಲುಗಳ ಮೇಲೆ ಶಿಲಾಬಾಲಿಕೆ, ಕಮಲದ ಹೂ, ಮೊದಲಾದ ಚಿತ್ರಗಳನ್ನು ಕಾಣುತ್ತೇವೆ.

ಮಾಳಿಗೆ ಹಾಕಿದ ಸರ, ಜಂತಿ, ಚಿಲಕ, ಕಡಿ ಇವುಗಳ ಮೇಲೆಯೂ ಸರಪಳಿಯಂತೆ, ಹೂವಿನಂತೆ, ಚಿತ್ರಗಳನ್ನು ಬಿಡಿಸಿರುವುದು ಕಾಣುತ್ತೇವೆ. ಇವುಗಳಂತೆ ತೊಟ್ಟಿಲುಗಳ ಮೇಲೆ , ರೊಟ್ಟಿಮಾಡುವ ತೊಗರಿಯ ಮಗ್ಗಲುಗಳಿಗೆ, ದೇವರ ಜಗಲಿಯ ಮೇಲೆ, ಮಕ್ಕಳ ಆಟಿಕೆಗಳ ಮೇಲೆ, ಒಣಕಿಯ ಮೇಲೆ, ಅವುಗಳಿಗೆ ತಕ್ಕಂತಹ ಚಿತ್ರಗಳನ್ನು ಕೆತ್ತಿರುತ್ತಾರೆ.

ಬಯಲಾಟದ ಪಾತ್ರಧಾರಿಗಳ ಕಿರೀಟ, ಮುಖವಾಡ, ಭುಜ ಕಿರೀಟ, ಆಸನ, ಮಂಚ, ಕೈಯಲ್ಲಿ ಹಿಡಿಯುವ ಕೋಲುಗಳು ಮೊದಲಾದವುಗಳ ಮೇಲೆಲ್ಲಾ ವಿಶಿಷ್ಟವಾದ ಕುಸುರಿನ ಚಿತ್ರಗಳನ್ನು ಕಾಣುತ್ತೇವೆ. ಜೊತೆಗೆ ಈ ಚಿತ್ರಗಳಿಗೆ ಬಣ್ಣದ ಚಮಕಿ, ಬ್ಯಾಂಗಡಿ, ಬಣ್ಣ ಮೊದಲಾಗಿ ಹಚ್ಚಿ ಇನ್ನೂ ಸುಂದರಗೊಳಿಸುತ್ತಾರೆ.

ಒಕ್ಕಲುತನದ ಸಾಮಾನುಗಳಾದ ನೇಗಿಲು, ಪಲಗ ಮೊದಲಾದವುಗಳ ಮೇಲೆ ಹೂ ಕೆತ್ತಿದರೆ ನೊಗ, ಬಂಡಿಯ, ಸಾಟಾ, ಇವುಗಳ ಮೇಲೆ ಹೂ , ಎತ್ತು ಮೊದಲಾದ ಚಿತ್ರಗಳನ್ನು ಬಿಡಿಸಿರುತ್ತಾರೆ.

ಊಟಕ್ಕೆ ಕೂಡುವ ಮಣೆ, ಬುಗರಿ, ಬೀಜಬಿತ್ತುವ ಚಿಡ್ಡಿ, ಗೋಡೆಗೆ ತೂಗುಹಾಕುವ ವಿಶೇಷ ಸೌಂದರ್ಯದ ವಸ್ತುಗಳು ಮೊದಲಾಗಿ ಕಟ್ಟಿಗೆಯಿಂದ ಮಾಡುವ ವಿವಿಧ ವಸ್ತುಗಳ ಮೇಲೆಲ್ಲಾ ವಿವಿಧ ರೀತಿಯ ಚಿತ್ತಾರಗಳನ್ನು ಕಾಣುತ್ತೇವೆ.

೮. ಲೋಹಗಳ ಮೇಲೆ:

ಬಂಗಾರದಿಂದ ಮಾಡುವ ದೇವರು, ಮಂಗಲಸೂತ್ರ, ಬೆರಳುಂಗುರ, ಬೆಂಡೋಲೆ, ಝುಬ್ಬೆ, ಡಾಬು ಮೊದಲಾದ ಆಭರಣಗಳ ಮೇಲೆ ಇಳಿಸುವ ಚಿತ್ರಗಳು ನಯ-ನಾಜೂಕಿನಿಂದ ಕೂಡಿರುವುದು ಕಾಣಬಹುದು. ಬೆಳ್ಳಿಯಿಂದ ತಯಾರಿಸುವ ನಾಗಣ್ಣ, ಬಸವಣ್ಣ, ಚೌಕ ಪಾಟ್ಲಿ, ಕಣ್ಣುಬಟ್ಟು, ಮೊದಲಾದವುಗಳ ಮೇಲೂ ವಿಶಿಷ್ಟ ಚಿತ್ರಗಳನ್ನು ಕಾಣುತ್ತೇವೆ. ಜಿಂಕ್ ಹಾಗೂ ತಾಮ್ರದಿಂದ ತಯಾರಿಸುವ ಬೀದರಿನ ಬಿದ್ರಿಕಲೆಗಳಾದ ಶಿಲಾಬಾಲಿಕೆ, ಲಮಾಣಿ, ನಟರಾಜ, ಸುರಯಿ, ಗಣೇಶ, ವಿವಿಧ ಆಭರಣ ಗಳು, ಕುಂಡಗಳು, ಗುಲ್ದಾನಗಳು, ಅಂಗಿಯ ಗುಂಡಿಗಳು, ಮೊದಲಾದವುಗಳ ಮೇಲೆಲ್ಲಾ ಚಿತ್ರಕೆತ್ತಿ ಬೆಳ್ಳಿ ಕೂಡಿಸಿರುವ ಚಿತ್ರಗಳು, ಕಲಾಕೃತಿಗಳು ಎಂಥವರಿಗೂ ಮನಸೆಳೆಯುವಂತಿವೆ. ಈ ಕುರಿತು ಗು. ವಿ. ಗು ಪ್ರಸಾರಾಂಗದಿಂದ ಪ್ರಕಟಗೊಂಡಿರುವ ನನ್ನ ''ವಿಶ್ವ ವಿಖ್ಯಾತ ಬಿದ್ರಿ ಕಲೆ'' ಪುಸ್ತಕದಲ್ಲಿ ವಿವರವಾಗಿ ವಿವರಿಸಲಾಗಿದೆ.

ತಾಮ್ರದಿಂದ ತಯಾರಿಸುವ ಕೊಡಗಳು, ದೇವರುಗಳು, ಮೊದಲಾದವುಗಳ ಮೇಲೆ ಕುಸುರಿನ ಚಿತ್ರಗಳನ್ನು ಕಾಣುತ್ತೇವೆ. ತಾಯಿತಗಳಲ್ಲಿ ಹನುಮಂತ, ಹೂ, ಮೊದಲಾದ ಚಿತ್ರಗಳನ್ನು ಮುದ್ರೆ ಒತ್ತಿರುವುದು ಕಾಣುತ್ತೇವೆ. ಇವುಗಳಂತೆ, ತಂಬಿಗೆ, ಹಂಡೆ ಮೊದಲಾದವುಗಳ ಮೇಲೆಯೂ ವಿವಿಧ ರೀತಿಯ ಚಿತ್ರಗಳನ್ನು ಕಾಣುತ್ತೇವೆ. ಹಿತ್ತಾಳಿಯಿಂದ ತಯಾರಿಸುವ ಜಾಗಟೆ, ಗಂಟೆ, ತಟ್ಟೆ, ತಂಬಿಗೆ ಮೊದಲಾದವುಗಳ ಮೇಲೆಯೂ ಚಿತ್ರಗಳನ್ನು ತೆಗೆದಿರುತ್ತಾರೆ. ಕಬ್ಬಿಣದಿಂದ ತಯಾರಿಸುವ ಖುರಪಿ, ಕುಡಗೋಲು, ಕೊಡ್ಲಿ, ಖಡ್ಗ, ಕಮ್ಮಾಕತ್ತಿ, ಫಾವಡಿ, ಬುಡ್ಡಿ, ಸೇರು ಮೊದಲಾದವುಗಳ ಮೇಲೆಯೂ ಚಿತ್ರಗಳನ್ನು ಕಾಣಬಹುದಾಗಿದೆ.

೯. ಬಟ್ಟೆಗಳ ಮೇಲೆ:

ಈಗಾಗಲೇ ಈ ಹಿಂದೆ 'ಹೊಲಿಗೆ ಕಲೆಯಲ್ಲಿ' ಕಂಡಿರುವಂತೆ, ಖವ್ವದಿ, ಕುಂಚಿ, ಕುಂಚಿಕುಲಾಯಿ, ಎಲಿಚೆಂಚಿ, ಛೆರಚೀಲಾ, ಬಾಗಿಲಪಟ್ಟಾ, ಕಂಬಳಿ, ತಟ್ಟು ಮೊದಲಾದವುಗಳ ಕರಿ ಕಟ್ಟುವಲ್ಲಿ ಚಿತ್ರಕಲೆ ಕಾಣುತ್ತೇವೆ.

ಸ್ತ್ರೀಯರ ಉಡುಪುಗಳು, ಲಂಬಾಣಿಗರ ಹೆಣ್ಣುಮಕ್ಕಳ ಉಡುಪುಗಳು, ನಾಟಕ, ಬಯಲಾಟಗಳ ಪಾತ್ರಧಾರಿಗಳ ಉಡುಪುಗಳು, ರುಮಾಲುಗಳು, ಮಕ್ಕಳ ಬಟ್ಟೆಗಳು, ಪಾವುಡುಗಳು ಮೊದಲಾದಲೆಲ್ಲಾ ವಿವಿಧ ರೀತಿಯ ಚಿತ್ತಾರಗಳನ್ನು ಬಿಡಿಸಿರುವುದನ್ನು ಕಾಣುತ್ತೇವೆ.

೧೦. ಎಲೆಗಳ ಮೇಲೆ :

ಸುಮಾರು ಹನ್ನೆರಡನೆಯ ಶತಮಾನದ ಪೂರ್ವದಿಂದಲೇ ತಾಡೋಲೆಗಳ ಮೇಲೆ ಬರೆಯುವುದು ರೂಢಿಯಲ್ಲಿದ್ದದ್ದು ಕಾಣುತ್ತೇವೆ. ತಾಡೋಲೆಗಳ ಪ್ರಾರಂಭಕ್ಕೆ ಓಂ (ॐ), ಸ್ವಸ್ತಿಕ (卐) ನಂದಿ ಚಿತ್ರ ಮೊದಲಾಗಿ ಚಿತ್ರಿಸಿರುವುದು ಕಾಣುತ್ತೇವೆ.

ವಿಳ್ಳೆದೆಲೆಯ ಮೇಲೆ ಪೂಜೆ-ಪುನಸ್ಕಾರ ಸಂದರ್ಭಗಳಲ್ಲಿ ವಿಭೂತಿ, ಕುಂಕುಮ-ಅರಿಸಿಣ ಮೊದಲಾದವುಗಳಿಂದ ಷಟಕೋನ, ಶಂಖ, ಪಾದಗಳು ಮೊದಲಾಗಿ ಚಿತ್ರ ಬಿಡಿಸುವುದಾಗಿದೆ. ಊಟಕ್ಕಾಗಿ ತಯಾರಿಸುವ ಮುತ್ತಿನೆಲೆಯ ಪತ್ರೋಳಿ, ಡೊಪ್ಪಿಗಳ ಮೇಲೆ ಕೆಲವರು ಚಿಪಟಿಯ ಸಿಬುರುಗಳು ಚುಚ್ಚುವುದನ್ನೆ ಎದುರು-ಬದುರು, ಸಾಲು-ಸಾಲಾಗಿ ಚುಚ್ಚಿ ಚಿತ್ತಾಕಾರ ಮಾಡುತ್ತಾರೆ. ಹೀಗೆ ಎಲೆಗಳ ಮೇಲಿನ ಚಿತ್ರಗಳು ಪೂರ್ಣ ಚಿತ್ರರೂಪ ಇರದೇ ಇದ್ದರು ಆ ನಿಟ್ಟಿನಲ್ಲಿ ಕಾಣಿಸಲು ಪ್ರಯತ್ನಿಸುವುದಾಗಿದೆ.

೧೧.ಹಾಳೆಗಳ ಮೇಲೆ :

ಖಿಲ್ಜಿ ಅರಸರು ಭಾರತಕ್ಕೆ ಬರುವಾಗ ಪರ್ಶಿಯಾದೇಶದ ಜನರು ಬಂದರು. ಅವರು ಬರುವಾಗ ಕಾಗದ ತಂದರು. ಜೊತೆಗೆ ತಮ್ಮದೇ ಆದ ಚಿತ್ರಕಲೆಯನ್ನೂ ತಂದರು ಎಂಬ ಉಲ್ಲೇಖಗಳನ್ನು ಕಾಣುತ್ತೇವೆ. ಈ ರೀತಿಯಾಗಿ ತಾಡೋಲೆಗಳ ಮೇಲೆ ಬರೆಯುವುದನ್ನು ಹಾಳೆಗಳ ಮೇಲೆ ಬರೆಯಲು ಆರಂಭವಾಗಿ- ಖಾತೆ, ಕಿರ್ದಿ, ಮುಂತಾದಲ್ಲಿ ವೀರಶೈವರು ಓಂ, ಷಟಕೋನ, ಮೊದಲಾದ ಚಿತ್ರರೂಪಗಳನ್ನು ಬಿಡಿಸಿದರೆ, ಮುಸ್ಲಿಮರಲ್ಲಿ ಕೆಲವರು ಚುಕ್ಕಿ-ಚಂದ್ರ ಬಿಡಿಸುವುದು ಕಾಣುತ್ತೇವೆ. ಕ್ರೈಸ್ತರು ಶಿಲುಬೆಯ ಚಿತ್ರ ಮೊದಲಾಗಿ ಬರೆಯುವುದೂ ಇದೆ. ಪಂಚಾಂಗಗಳಲ್ಲಿ ವಿವಿಧ ರೀತಿಯ ಕೋನಗಳು ಮೊದಲಾಗಿ ಚಿತ್ರಿಸುವುದೂ ಕಾಣಬಹುದಾಗಿದೆ. ಒಟ್ಟಿನಲ್ಲಿ ಇಂದು ವಿವಿಧ ಪ್ರಕಾರದ ಹಾಳೆಯ ಮೇಲೆ ವಿವಿಧ ಪ್ರಕಾರದ ಚಿತ್ರಗಳನ್ನು ಬಿಡಿಸುವುದರ ಜೊತೆಗೆ ಚಿತ್ರಕಲೆಯ ಪ್ರಮುಖ ಸ್ಥಾನವೇ ಹಾಳೆ ಎಂಬಂತಾಗಿದೆ.

೧೨. ಊಟದ ಪದಾರ್ಥಗಳ ಮೇಲೆ :

ಹಬ್ಬದೂಟಗಳ ವಿಶಿಷ್ಟ ಪದಾರ್ಥಗಳಾದ ಹಪ್ಪಳ, ಸಂಡಿಗೆ, ಕುರುಡಗಿ ಮೊದಲಾದವುಗಳನ್ನು ಕುಸುರಿನಿಂದ ಚಿತ್ರಮಯವಾಗಿ ಹಾಕುವುದಲ್ಲದೆ, ಕರಜಿಕಾಯಿ, ಕಡಕುಣಿ ಮುಂತಾದವುಗಳನ್ನು ಕುಸುರಿನಂತೆ ಕೊರೆದು ಚಿತ್ರ ಬಿಡಿಸುವುದನ್ನು ಕಾಣಬಹುದು. ಇತ್ತೀಚೆಗೆ ಇವೇ ಮಾದರಿಗಳಿಂದ ಕೇಕ್ ಮೊದಲಾದವುಗಳ ಮೇಲೆ ಚಿತ್ರಗಳನ್ನು ಬಿಡಿಸುವುದು ಕಾಣಬಹುದಾಗಿದೆ.

೧೩. ದವಸಧಾನ್ಯಗಳ ಮೇಲೆ:

ಇಂದು ಅಕ್ಕಿ, ಜೋಳ ಮೊದಲಾದವುಗಳ ಮೇಲೆ ಅತಿ ಚಿಕ್ಕಅಕ್ಷರಗಳಿಂದ ಹೆಸರುಗಳು, ಮೊದಲಾಗಿ ಬರೆದು ಗಿನ್ನಿಸ್ ದಾಖಲೆ ಮಾಡಿದವರೂ ಇದ್ದಾರೆ. ಆದರೆ ಜನಪದರು ಈ ರೀತಿಯಾಗಿ ದವಸ ಧಾನ್ಯದ ಒಂದು ಕಾಳಿನ ಮೇಲೆ ಬರೆಯದೆ ಇಡೀ ಕಾಳುಗಳಲ್ಲಿ ಚಿತ್ರಗಳನ್ನು ಬಿಡಿಸುವುದು ಕಾಣುತ್ತೇವೆ.

ಜನಪದರು ದವಸಧಾನ್ಯಗಳು ತುಂಬಿಡುವುದು ಕರಸಿ, ಗುಮ್ಮಿ, ಕರಬನ ಗಡಗಿ ಮುಂತಾದವುಗಳಲ್ಲಿ . ಕೀಲಿ ಮೊದಲಾಗಿ ಹಾಕಿ ಮುಚ್ಚಿಡಲು ಬರಲಾರದಂಥ ಸಂದರ್ಭಗಳಲ್ಲಿ ಜನಪದರಿಗೆ ತಮ್ಮ ಚಿತ್ರವೆ ಕಳ್ಳರನ್ನು ಗುರುತಿಸುವ ಒಂದು ಪರಿ. ಉದಾ: ಮನೆಯಲ್ಲಿಟ್ಟಿರುವ ಧಾನ್ಯಗಳು ಯಾರಾದರು ತೆಗೆದದ್ದು ಗೊತ್ತಾಗಬೇಕೆಂದು, ದವಸಧಾನ್ಯಗಳಲ್ಲಿ ಪಕ್ಷಿ, ಗಿಡ ಮೊದಲಾಗಿ ಯಾವುದೋ ಚಿತ್ರ ಬಿಡಿಸಿ ಗುರುತು ಮಾಡಿಟ್ಟುಕೊಳ್ಳುತ್ತಾರೆ. ಆದರೆ ತೆಗೆದುಕೊಳ್ಳುವವರೂ ಬಹು ಜಾಣರು. ದವಸಧಾನ್ಯ

ತೆಗೆದುಕೊಂಡ ಮೇಲೆ ಮೊದಲಿನ ರೀತಿಯಲ್ಲಿಯೇ ಚಿತ್ರ ಬಿಡಿಸುವವರೂ ಇದ್ದಾರೆ. ಇನ್ನು ಕೆಲವರು ಕಣದಲ್ಲಿ ರಾಸಿ ಮಾಡಿದ ಕಾಳುಗಳಲ್ಲಿ ಶುಭ-ಲಾಭ ಮೊದಲಾಗಿಯೂ ಬರೆಯುತ್ತಾರೆ. ಮತ್ತೆ ಕೆಲವರು ತಮ್ಮ ಆರಾಧ್ಯ ದೈವರ ಚಿತ್ರ ಬಿಡಿಸುತ್ತಾರೆ. ಹೀಗೆ ಮಾಡುವುದರಿಂದ ರಾಶಿ ಹೆಚ್ಚಾಗುತ್ತದೆಂಬ ನಂಬಿಕೆ ಉಳ್ಳವರಾಗಿರುತ್ತಾರೆ.

೪. ಚಿತ್ರಕಲೆಯ ಬಣ್ಣ-ಸಾಮಗ್ರಿ ಹಾಗೂ ತಯಾರಿಸಿಕೊಳ್ಳುವಿಕೆ:

ಹಲವಾರು ಗುಹೆಗಳಲ್ಲಿ ಕಲಾಕಾರರು ಬಣ್ಣಗಳನ್ನು ಕಲೆಸಿಕೊಂಡ ಉಪಕರಣಗಳನ್ನು ಅಲ್ಲಲ್ಲೇ ಬಿಟ್ಟಿದ್ದಾರೆ. ನಮ್ಮ ಕಾಲದವರೆಗೂ ಇಪ್ಪತ್ತು, ಮೂವತ್ತು ಸಾವಿರ ವರ್ಷಗಳನ್ನು ದಾಟಿ ಅವು ಅಲ್ಲೇ ಉಳಿದಿವೆ. ಕಾಡೆಮ್ಮೆಯ ಹೆಗಲ ಮೂಳೆಗಳು ಇಲ್ಲಿ ವಿಶೇಷವಾಗಿ ಕಾಣಸಿಗುತ್ತವೆ. ಇವುಗಳ ಮೇಲೆ ಬಣ್ಣದ ಉಳಿಕೆಗಳೂ ಇವೆ. ಕೆಲವೆಡೆ ಕಲ್ಲಿನಿಂದ ಕಡೆದಿಟ್ಟುಕೊಂಡ ಅಗಲ ಬಾಯಿಯ ಬಟ್ಟಲುಗಳೂ ದೊರೆತಿವೆ. ಕಾಡೆಮ್ಮೆಯ ಬಾಲದ ಕೂದಲಿನ ಕಟ್ಟುಗಳನ್ನು ಅಲ್ಲಲ್ಲಿ ಕಾಣಬಹುದು. ಇವನ್ನೇ ಕುಂಚವಾಗಿ ಬಳಸುತ್ತಿದ್ದರೆನ್ನಬಹುದು. ಭೂಮಿಯನ್ನು ಅಗೆದು ಬೇರೆ, ಬೇರೆ ಬಣ್ಣದಪುಡಿಯನ್ನೂ, ಗಿಡ-ಮರಗಳ, ಎಲೆಗಳ, ತೊಗಟೆಗಳ ರಸವನ್ನೂ, ಪ್ರಾಣಿಗಳ ಕೊಬ್ಬನ್ನೂ ಬೆರೆಸಿ ಬಣ್ಣಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಂತೆ ತೋರುತ್ತದೆ. ಕೆಂಪು, ಹಳದಿ, ಕಪ್ಪು, ಹಸಿರು, ಕಾವಿ ಈ ಬಣ್ಣಗಳನ್ನು ಗುಹಾ ಚಿತ್ರಗಳಲ್ಲಿ ಹೆಚ್ಚಿಗೆ ಬಳಸಿದ್ದಾರೆ, ಎಂಬ ಉಲ್ಲೇಖ ಕರ್ನಾಟಕದ ಕಲೆಗಳು ಪುಸ್ತಕದಲ್ಲಿ ಕಾಣುತ್ತೇವೆ.(ಭೂಮಿಕೆ ಪು. ೪೦).

ಪ್ರಾಚೀನ ಕಾಲದಿಂದಲೂ ದೊರೆತ ಬಣ್ಣಗಳೆಂದರೆ: ಬಿಳಿ, ಹಸಿರು, ಕೆಂಪು, ಹಳದಿ, ಕಪ್ಪು, ನೀಲಿ, ಕಂದು ಏಳು ರೀತಿಯಲ್ಲಿ. ಬರುಬರುತ್ತ ಈ ಬಣ್ಣಗಳು ಒಂದರಲ್ಲಿ ಒಂದು ಕಲೆಸಿ ಹಲವು ರೀತಿಯ ಬಣ್ಣಗಳನ್ನು ತಯಾರಿಸಿಕೊಂಡು ಚಿತ್ರ ಬಿಡಿಸಿದ್ದನ್ನು ಕಾಣುತ್ತೇವೆ. ಇಂತಹ ಎಷ್ಟೋ ಬಣ್ಣಗಳು ಪ್ರಕೃತಿಯಿಂದಲೇ ದೊರೆಯುವಂಥವು. ಕೆಲವು ಮಾತ್ರ ತಮ್ಮ ಮತಿಯಿಂದ ತಯಾರಿಸಿಕೊಳ್ಳುತ್ತಾರೆ.

ಜಾಜಿ, ಸೇಡಿ, ಮುಲ್ತಾನಿ, ಪೆವುಡಿ, ಕೆಂಪುಮಣ್ಣು, ಮುಂತಾದವುಗಳೆಲ್ಲ ನೆಲದಲ್ಲಿಯೇ ದೊರೆಯುವಂಥವು. ಇವುಗಳಲ್ಲದೆ ಮತ್ತೆ ಕೆಲವು ಬಣ್ಣಗಳು ಗಿಡದ ತಪ್ಪಲಿನಿಂದ ರಸ ತೆಗೆದು ತಯಾರಿಸಿಕೊಳ್ಳುತ್ತಾರೆ. ಕಪ್ಪು ಬಣ್ಣಕ್ಕೆ ದೀಪದ ಕಾಡಿಗೆ ಅಥವಾ ಕೋಳಸಿ ಕುಟ್ಟಿ ತಯಾರಿಸಿಕೊಳ್ಳುತ್ತಾರೆ. ಕೆಂಪು ಹಾಗೂ ಬಿಳಿ ಬಣ್ಣದ ಕುಸುಬಿಯ ಹೂಗಳನ್ನೂ ಒಣಗಿಸಿಕೊಂಡು ಬಣ್ಣವಾಗಿ ಬಳಸಿಕೊಳ್ಳುತ್ತಾರೆ. ಈ ಎರಡೂ ಬಣ್ಣದ ಕುಸುಬಿ ಹೂಗಳನ್ನು ಕೂಡಿಸಿ 'ಕುಸುಮ' ಬಣ್ಣವಾಗಿ ತಯಾರಿಸಿಕೊಳ್ಳುತ್ತಾರೆ. ಕಿರಮಿಂಜಿ ಬಣ್ಣದಲ್ಲಿ ಅವರಿ ಹೂವು, ನೆಂಕಿ ಹಿಟ್ಟು ಕಲೆಸಿ ಕುಂಕುಮ ಮಾಡಿಕೊಳ್ಳುತ್ತಾರೆ. 'ಗುಲಾಲು' ತಯಾರಿಸಿಕೊಳ್ಳಲು ಕೆಂಪು ಬಣ್ಣದಲ್ಲಿ ಡೇಕಿನಂತಹ ಗಡ್ಡಿ ಗುಲಮಾಸೆನ ಗಡ್ಡಿ, ಮಾವಿನ ಲೇಪಾ ಮುಂತಾಗಿ ಕುದಿಸಿ ಸಿದ್ಧಪಡಿಸಿಕೊಳ್ಳುತ್ತಾರೆ. ಮಾವಿನ ಲೇಪಾ, , ನಾಗರ ಮೇತಾ, ಢೇಕು, ಸುವಾಸನೆಯಾಗಿರುವ

ಲಾವಂಚಾ, ಮೊದಲಾದವುಗಳು ಸೇರಿಸಿ 'ಬುಕ್ಕಿಟು' ತಯಾರಿಸಿಕೊಳ್ಳುತ್ತಾರೆ. ಕುಂಕುಮ ಹಾಗೂ ಅರಸಿಣ ಬೆರೆಸಿಕೊಂಡು 'ಮದರಾ' ಎನ್ನುವ ಬಣ್ಣ ಮಾಡಿಕೊಳ್ಳುತ್ತಾರೆ. ಬಿಳಿಯ ಬಣ್ಣ ಬಳಸಿಕೊಳ್ಳುವ ಕಡೆಗೆ ಸೇಡಿ, ವಿಭೂತಿ ಮೊದಲಾದವುಗಳನ್ನು ಉಪಯೋಗಿಸಿ ಕೊಳ್ಳುತ್ತಾರೆ. ಸೇಡಿ ನೆಲದಿಂದ ತೆಗೆದರೆ ವಿಭೂತಿ ಬೂದಿಯಿಂದ ತಯಾರಿಸಿರುತ್ತಾರೆ. ಅರದಳ (ಹರಿತಾಳ) ಎಂಬ ಖನಿಜದಿಂದ ಹಳದಿ ಬಣ್ಣ ತಯಾರಿಸಿಕೊಳ್ಳುತ್ತಾರೆ.

ಜೋಳ, ಭಜ್ಜಿಕ, ಗೋಧಿ, ಹೆಸರು ಮೊದಲಾದವುಗಳನ್ನು ಕರಕಾಗುವಂತೆ ಚೆನ್ನಾಗಿ ಹುರಿದು ತೆಳುವಾದ ಬಟ್ಟೆಯಲ್ಲಿ ಸೋಸಿ ಅದರಲ್ಲಿ ನೀರು ಕಲೆಸಿ 'ಶಾಯಿ' ಆಗಿ ತಯಾರಿಸಿಕೊಳ್ಳುತ್ತಿದ್ದರು. ಇದೇ ಜನಪದರ ಶಾಯಿ ಆಗಿದ್ದು 'ದೌತಿ' ಯಲ್ಲಿ ತುಂಬಿಟ್ಟುಕೊಂಡು 'ಬರು' ಎಂಬ ಕಟ್ಟಿಗೆ ಪೆನ್ಸಿಲ್‌ದಂತೆ ಕೆತ್ತಿ ಶಾಯಿಯಲ್ಲಿ ಅದ್ದಿ ಖಾತೆ, ಕೀರ್ತಿ ಮೊದಲಾದವುಗಳನ್ನು ಬರೆಯುತ್ತಿದ್ದದ್ದು ಕಾಣುತ್ತೇವೆ.

ಜನಪದರು ತಾವು ತಯಾರಿಸಿಕೊಂಡ ಬಣ್ಣ ಬಹಳ ದಿವಸದವರೆಗೆ ಇರುವುದರ ಸಲುವಾಗಿ ಅವುಗಳಲ್ಲಿ ಗಿಡದಿಂದ ತೆಗೆದ ಅಂಟು, ಮೇಣ, ಜೇನುತುಪ್ಪ, ಕೆಲವರು ಕೋಳಿ ತತ್ತಿಯೊಳಗಿನ ಲೋಳೆಯಂತಹ ಭಾಗ ಮತ್ತೆ ಕೆಲವರು ಗಂಜಿ, ಹಾಲು ಮೊದಲಾದವುಗಳನ್ನು ತಮ್ಮ ತಮ್ಮ ಅನುಭವಗಳಂತೆ ಮಿಶ್ರ ಮಾಡಿಕೊಳ್ಳುತ್ತಿದ್ದರು. ಈ ರೀತಿಯಾಗಿ ಬಹಳ ದಿವಸಗಳ ವರೆಗೆ ಬಾಳಿಕೆ ಬರುವಂತಹ ಬಣ್ಣ ಸಿದ್ಧಪಡಿಸಿಕೊಂಡು, ಆ ಬಣ್ಣಕ್ಕೆ ಹೊಳಪು ಬರುವ ಸಲುವಾಗಿ 'ಸಿಂಗ್ರುಪ್' ಮೊದಲಾಗಿ ಕಲೆಸಿಕೊಳ್ಳುವರು. ಸಿಂಗ್ರುಪ್‌ದಲ್ಲಿ ಔಷದಕ್ಕಾಗಿ ಬಳಸಿಕೊಳ್ಳುವ ಸಿಂಗ್ರುಪ್ ಹಾಗೂ ಬಣ್ಣಕ್ಕಾಗಿ ಬಳಸಿಕೊಳ್ಳುವ ಸಿಂಗ್ರುಪ್ ಎಂದು ಎರಡು ವಿಧಗಳು. ಇವು ನೆಲದಿಂದ ದೊರೆಯುವಂಥವು. ಸಿಂಗ್ರುಪ್‌ದಂತೆ ಕೆಲವರು 'ರಾಳ' ಕಲೆಸಿಕೊಂಡರೆ ಮತ್ತೆ ಕೆಲವರು ಸಂಗಜೀರಗಿ, ತವಕ್‌ಸೀರಿ ಮೊದಲಾಗಿ ಕಲೆಸಿಕೊಳ್ಳುವರು. ಇವುಗಳು ಸಹ ಭೂಮಿಯಲ್ಲಿಯೇ ದೊರೆಯುವಂಥವು. ಹೀಗೆ ತಯಾರಿಸಿಕೊಂಡ ಬಣ್ಣದಲ್ಲಿ ನೀರಿನಲ್ಲಿ ನೆನೆಸಿ ಕುದಿಸಿದ 'ಸಿರಸು' ಕೂಡಿಸಿದರೆ ಆ ಬಣ್ಣದಿಂದ ಬಿಡಿಸಿದ ಚಿತ್ರ ಎಂದೂ ಅಳಿಸಲಾರದು. ಹಾಗೂ ಎಷ್ಟೇ ಮಳೆ- ಬಿಸಿಲು- ಗಾಳಿ ಮೊದಲಾದವುಗಳಿಗೂ ತನ್ನ ಹೊಳಪಿನ ಸೌಂದರ್ಯದಲ್ಲಿ ಕಡಿಮೆ ಆಗಲಾರದು, ಎಂಬ ಹೇಳಿಕೆ ಜನಪದರದು.

ತಯಾರಿಸಿಕೊಂಡ ಬಣ್ಣದ ಚಿತ್ರ ತೆಗೆಯುವ ಸಲುವಾಗಿ ಬಳಸಿಕೊಳ್ಳುವ ಸಾಮಗ್ರಿಗಳೆಂದರೆ: ಈ ಮೊದಲು ತಿಳಿಸಿರುವಂತೆ ಗುಹೆಗಳಲ್ಲಿ ದೊರೆತ ವಿವಿಧ ರೀತಿಯ ಕಲ್ಲು, ಮೊಳೆ ಮೊದಲಾದವುಗಳ ಜೊತೆ ಮಡಕೆ ಕುಡಿಕೆಗಳು, ಒಣಗಿದ ಸೋರೆಕಾಯಿ, ಕುಂಬಳಕಾಯಿಗಳ ತೊಗಟೆ, ಒಡೆದ ಗಡಗಿ- ಮುಚ್ಚಳ, ತೆಂಗಿನಕಾಯಿಯ ಖಪ್ಪರು, ಕೆಲವು ಬಣ್ಣಗಳನ್ನಿಟ್ಟುಕೊಳ್ಳುವ ಸಲುವಾಗಿಯೇ ಕಟೆದ ಕಲ್ಲು ಮೊದಲಾದವುಗಳು. ಇವುಗಳಲ್ಲಿ

ತುಂಬಿಟ್ಟುಕೊಂಡ ಬಣ್ಣ ಕೈ ಬೆರಳುಗಳಿಂದ , ಘುಂಡಿಕಟ್ಟಿಗೆಯಿಂದ ಬ್ರಶ್‌ನಂತೆ ತಯಾರಿಸಿಕೊಂಡ ಕುದುರೆಯ ಕೂದಲುಗಳಿಂದ, ಅಳಿಲಿನ ಕೂದಲಿನಿಂದ, ಫುಂಟಿ ಹಾಗೂ ದಾರಗಳ ಕಟ್ಟಿನಿಂದ ಚಿತ್ರ ಬಿಡಿಸುವುದು ವಿಶೇಷವಾಗಿದೆ.

೫. ಚಿತ್ರಕಾರರು ಹಾಗೂ ಚಿತ್ರಿಸುವಿಕೆ:

ಜನಪದ ಚಿತ್ರಕಾರರು ಇಂಥವರೇ ಎಂದು ಗುರುತಿಸುವುದು ಕಷ್ಟ. ಏಕೆಂದರೆ ಚಿತ್ರಕಲೆಯೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡು ಇರುವವರು ಬಹಳ ಅಪರೂಪ. ಸಾಮಾನ್ಯವಾಗಿ ಜನಪದರೆಲ್ಲರು ಒಂದಿಲ್ಲ ಒಂದು ರೀತಿಯಲ್ಲಿ ಕಲಾಕಾರರೇ ಆಗಿರುತ್ತಾರೆ. ಕೆಲವರು ಬಯಲಾಟ, ಸೋಗು ಮೊದಲಾದ ಸಂದರ್ಭಗಳಲ್ಲಿ ಬಣ್ಣ ಬಡಿಯುವಲ್ಲಿ ಪ್ರಸಿದ್ಧರಿದ್ದರೂ, ಇವರ ಗೈರು ಹಾಜರಿಯಲ್ಲಿಯೂ ಉಳಿದವರು ಬಣ್ಣ ಬಡಿಯುವರು.

ಕಂಬಾರ, ಕುಂಬಾರ, ಬಡಿಗ, ಸಮಗಾರ ಮೊದಲಾದವರೆಲ್ಲ ತಮ್ಮ ಕಾಯಕದಲ್ಲಿ ಚಿತ್ರಕಲೆಯ ಛಾಪು ಹಾಕಲು ಪಳಗಿದವರೇ ಆಗಿರುತ್ತಾರೆ. ಇವರ ಜೊತೆಗೆ ಇವರಿಂದ ನೋಡಿ ಕಲಿತವರೂ ಈ ಕಲೆಯಲ್ಲಿ ತೊಡಗಿರುತ್ತಾರೆ.

ನೆಲದ ಮೇಲಿನ ಚಿತ್ರಕಲೆಗಳಾದ ರಂಗೋಲಿ, ಮೊದಲಾದ ಚಿತ್ರಗಳನ್ನು ಅಕ್ಕಿಯ ಹಿಟ್ಟಿನಿಂದ, ಕಲ್ಲುಪುಡಿಯಿಂದ (ಹೆಚ್ಚಿನ ವಿವರಕ್ಕೆ ನನ್ನ ''ರಂಗೋಲಿ ಹಾಗೂ ಹಣಚೆ ಬಟ್ಟು'' ಪುಸ್ತಕ ನೋಡಬಹುದು) ಗೃಹಿಣಿಯರು ಬಿಡಿಸುವರು. ಅಟ್ಟಚೆಮ್ಮ, ಹುಲಿ - ಕುರಿ ಮೊದಲಾಗಿ ಆಡುವವರು ಸೇಡಿ, ಸುಣ್ಣ, ಬಳಪ, ಕರಕು, ಕೊಳಸಿ ಮುಂತಾದವುಗಳಿಂದ ಬರೆಯುವರು. ಈ ಆಟ ಆಡುವವರು ಇಂಥವರೇ ಎಂಬ ನಿಯಮವಿಲ್ಲ. ಆಡುವ ಮನಸ್ಸಿದ್ದವರು ಯಾರಾದರು ಇರತ್ತಾರೆ. ಹಾವಗಾರಾಟ ಮೊದಲಾದವರಿಗೆ ಯಾವುದೇ ಸಾಧನಗಳು ಬೇಕಾಗಿಲ್ಲ. ಕಟ್ಟಿಗೆಯ ತುಂಡು ಮೊದಲಾದವುಗಳಿಂದ ನೆಲದ ಮೇಲೆ ಗೆರೆಎಳೆದಂತೆ ಚಿತ್ರ ಬಿಡಿಸುವರು.

ಕಲ್ಲುಗಳ ಮೇಲಾದರೆ ಚಿತ್ರ ಬಿಡಿಸುವವರು ಉಪ್ಪಾರರು. ಇವರು ಟಾಕಿ, ಛಾನಾ, ಹತೋಡಿ, ಮೆಟ್ನಾ ಮುಂತಾದವುಗಳ ಸಹಾಯದಿಂದ ಚಿತ್ರ ಬಿಡಿಸುತ್ತಾರೆ. ಚಿತ್ರದ ಹೊರರೇಖೆ ಹಾಕಿಕೊಳ್ಳಬೇಕಾದರೆ ಇನ್ನೊಂದು ಕಲ್ಲಿನ ಚಿಂಪಿನಿಂದ ಗೆರೆ ಬರೆದುಕೊಳ್ಳುತ್ತಾರೆ. ಮೈ ಮೇಲೆ ಬಿಡಿಸುವ ಚಿತ್ರಗಳಿಗೆ ಇಂಥವರೇ ಎಂಬಂತಿಲ್ಲ. ದೆವ್ವಿನ ಬಣ್ಣ ಬಡಿಯಬೇಕಾದರೆ ಮೊದಲು ಮೈ ತುಂಬ ವಿಭೂತಿ ಅಥವಾ ಸೇಡಿ ಬಳಿದು ನಂತರ ಅದರ ಮೇಲೆ ಕರಕು ಮುಂತಾದ ಕಪ್ಪು ಬಣ್ಣಗಳಿಂದ ಅಸ್ಥಿಪಂಜರದಂತೆ ಬಿಳಿ- ಕಪ್ಪುಬಣ್ಣ ಕಾಣುವಂತೆ ಚಿತ್ರಿಸುತ್ತಾರೆ. ಹುಲಿಯ ಬಣ್ಣ ಬಡಿಯಬೇಕಾದರೂ ಮೊದಲು ಬಿಳಿ ಬಣ್ಣ ಬಳಿದು ನಂತರ ಪೆವುಡಿಯಿಂದ ಹಳದಿಯ ಪಟ್ಟೆಗಳು ಬರೆಯುತ್ತಾರೆ. ಅಲ್ಲಲ್ಲಿ ಕಪ್ಪು ಬಣ್ಣವೂ ಸೇರಿಸುತ್ತಾರೆ. ಬಾಯಿ ಸುತ್ತ ಹಾಗೂ ತುಟಿಗಳಿಗೆ ಕೆಂಪು ಕಾಣಲೆಂದು ಸಿಂಗ್ರುಪ್ ಹಚ್ಚುತ್ತಾರೆ.

ಬಯಲಾಟ ಮೊದಲಾದವುಗಳಲ್ಲಿಯೂ ಇದೇ ಪದ್ಧತಿಯನ್ನು ಅನುಸರಿಸುವುದು ಕಾಣುತ್ತೇವೆ.

ಮೈಮೇಲೆ ಹಚ್ಚುವ ಬಣ್ಣಗಳಲ್ಲಿ ಸಾಮಾನ್ಯವಾಗಿ ಕೊಬ್ಬರಿ ಎಣ್ಣೆ ಕಲೆಸಿರುತ್ತಾರೆ. ಮಿಂಚುವ ಸಲುವಾಗಿ ಅಲ್ಲಲ್ಲಿ ಚಮಕಿ ಹಚ್ಚುತ್ತಾರೆ. ಸಾಮಾನ್ಯವಾಗಿ ಮೈ ಮೇಲಿನ ಬಣ್ಣವನ್ನು ಬೆರಳುಗಳಿಂದಲೇ ಹಚ್ಚುತ್ತಾರೆ. ಚಿಕ್ಕ ರೇಖೆ ಮೊದಲಾಗಿ ಎಳೆಯಬೇಕಾದಲ್ಲಿ ಕಡ್ಡಿ ಮೊದಲಾಗಿ ಉಪಯೋಗಿಸುವುದನ್ನು ಕಾಣಬಹುದು. ಮುಖದ ಮೇಲೆ ಬಿಳಿಯ ಬಣ್ಣ ಬಳಿಯಬೇಕಾದಲ್ಲಿ ಸೇಡಿ ಬಳಸದೆ ಸಫೇದಾ ಬಳಸುತ್ತಾರೆ. ಬಣ್ಣ ಬಳಿದುಕೊಂಡು ಚಿತ್ರಿತಗೊಂಡ ಪಾತ್ರಗಳು ಅಟ್ಟದಲ್ಲಿ ತಮ್ಮ ಅಭಿನಯ ಪ್ರದರ್ಶಿಸುವಾಗ ಹೆಚ್ಚಿನ ಹೊಳಪು ಕಾಣಲೆಂದು ದೀವಟಿಗೆಗಳ ಮೇಲೆ 'ಅಬ್ರಕ್' ಹಾರಿಸುತ್ತಾರೆ. ಆಕಳು, ಎತ್ತು, ಹೋರಿ, ಎಮ್ಮೆ ಮೊದಲಾದವುಗಳ ಮೇಲೆ ಚಿತ್ರಿಸಬೇಕಾದರೂ ಮೇಲಿನ ರೀತಿಯೇ ಅನುಸರಿಸುತ್ತಾರೆ. ಆದರೆ ಎಣ್ಣೆ ಮೊದಲಾಗಿ ಸೇರಿಸದೆ ಕೇವಲ ನೀರಿನಲ್ಲಿ ಬಣ್ಣ ಕಲೆಸಿ ಹಚ್ಚುತ್ತಾರೆ.

ಹಚ್ಚೆ ಕಲೆಯೂ ಮೈಮೇಲೆ ಚಿತ್ರ ಬಿಡಿಸುವುದೇ ಆಗಿದೆ. ಇದನ್ನು ಕೊರವಂಜಿ ಮೊದಲಾದ ಜನರು ಹಾಕುತ್ತಾರೆ. ಮೊದಲು ಮುಳ್ಳುಗಳಿಂದ , ಬಿದಿರುಕಡ್ಡಿಗಳಿಂದ ಚುಚ್ಚುವ ಹಚ್ಚೆ ಇಂದು ಸೂಜಿಯ ಕಟ್ಟುಗಳಿಂದ ಚುಚ್ಚುತ್ತಾರೆ. ಇದು ಶಾಶ್ವತವಾಗಿರಲು 'ತೊಂಡೆ' ರಸ ಹಾಗೂ ಚಿಮಣಿಯ ಇದ್ದಿಲು (ಇಂಗಾಲದ ಪುಡಿ) ಬೆರೆಸಿ, ಹಚ್ಚೆ ಚುಚ್ಚುವ ಮೊದಲು ಹಾಗೂ ನಂತರ ಹಚ್ಚುತ್ತಾರೆ. ಇದರಿಂದ ಹಚ್ಚೆ ಚುಚ್ಚಿಸಿಕೊಂಡವರ ಮೈಮೇಲೆ ಚಿತ್ರ ಸಾಯುವವರೆಗೆ ಇರುತ್ತದೆ.

ಮೆಹಂದಿ (ಮದರಂಗಿ) ಕೂಡ ಮೆಹಂದಿ ತಪ್ಪಲು ಕುಟ್ಟಿ ಅದರಲ್ಲಿ ಕಾಚು ಮೊದಲಾಗಿ ಬೆರೆಸಿಕೊಂಡು ಚಿತ್ರ ಬಿಡಿಸುವವರ ಚಾಣಾಕ್ಷ್ಯತೆಗನುಗುಣವಾಗಿ ಕಡ್ಡಿ, ಮೊಳೆ ಮೊದಲಾದವುಗಳಿಂದ ಅಂಗೈ, ಅಂಗಾಲು ಮೊದಲಾದ ಅಂಗಾಂಗಗಳ ಮೇಲೆ ಚಿತ್ರ ಬರೆಯುತ್ತಾರೆ.

ಚರ್ಮದ ಕಲಾಕೃತಿಗಳ ಮೇಲೆ ಚಿತ್ರಿಸುವವರೆಂದರೆ ಸಮಗಾರರು. ಚೈನಿನಂತಹ ಸಲಕರಣೆಗಳು, ಹೂವು ಮೊದಲಾದ ಚಿತ್ರಗಳ 'ಡೈ' ರೀತಿಯ ಆಕಾರಗಳು ಚರ್ಮದ ಮೇಲೆ ಇಟ್ಟು ಗುದ್ದುತ್ತಾರೆ. ಇದರಿಂದ ಚರ್ಮದ ಮೇಲೆ ಗುದ್ದಿದ ಚಿತ್ರ ಮೂಡುತ್ತದೆ.

ಮಡಕೆ-ಕುಡಿಕೆ ಮೊದಲಾದವುಗಳ ಮೇಲೆ ಚಿತ್ರಿಸುವವರೆಂದರೆ ಕುಂಬಾರರು. ಮಡಕೆ ಮೊದಲಾದವುಗಳ ಮೇಲೆ ಬಿಡಿಸುವ ಚಿತ್ರ ಕೆಸರಿರುವಾಗಲೇ ಬಿಡಿಸಿ ನಂತರ ಸುಡುತ್ತಾರೆ. ಇದರಿಂದ ಬಿಡಿಸಿದ ಚಿತ್ರ , ಮಡಕೆ, ಮೊದಲಾದವುಗಳ ಮೇಲೆ ಹಾಗೆಯೇ ಉಳಿಯುತ್ತದೆ. ಮತ್ತೆ ಕೆಲವು ಗಡಿಗೆ ಮೊದಲಾದವುಗಳಿಗೆ ಬಣ್ಣಗಳಿಂದಲೂ ಚಿತ್ರಿಸುತ್ತಾರೆ.

ಗೋಡೆಗಳ ಮೇಲೆ ಚಿತ್ರ ಚಿತ್ರಿಸುವುದೆಂದರೆ, ಮೊದಲಿಗೆ ಝಾಡು, ಪತಡಿ ಮೊದಲಾದವುಗಳಿಂದ ಸುಣ್ಣ-ಬಣ್ಣ ಮಾಡಿಕೊಳ್ಳುತ್ತಾರೆ. ನಂತರ ಫುಂಡಿಯಿಂದ ಬ್ರಸ್‌ನಂತೆ ಮಾಡಿಕೊಂಡು ಚಿತ್ರ ಬಿಡಿಸುತ್ತಾರೆ. ಕೆಲವರು ಆಕಳ ಜಿವಿಯ ಚಿಕ್ಕ ಚಿಕ್ಕ ಕಟ್ಟು, ಕಡ್ಡಿ ಮೊದಲಾದವುಗಳಿಂದ ಚಿತ್ರ ಬರೆಯುತ್ತಾರೆ. ಇದಕ್ಕೆ ಇಂಥವರೇ ಚಿತ್ರಕಾರರೆಂಬ ನಿಯಮವೇ ಇಲ್ಲ, ಚಿತ್ರ ಬಿಡಿಸಲು ಬರುವವರ್‍ಯಾರಾದರೂ ಆಗಿರುತ್ತಾರೆ.

ಕಟ್ಟಿಗೆಯ ಮೇಲಾದರೆ ಚಿತ್ರ ಬಿಡಿಸುವವರು ಬಡಿಗರು. ಇವರು ಮೊದಲು ಕಟ್ಟಿಗೆಯ ಮೇಲೆ ಜಾಜ, ಸೇಡಿ, ಪೆನ್ಸಿಲ್ ಮೊದಲಾದವುಗಳಿಂದ ಹೊರ ರೇಖೆಗಳನ್ನು ಬರೆದುಕೊಂಡು ನಂತರ ಉಳಿ, ಪಟಾಸಿ, ಕೊಡ್ತಿಗಳ ಸಹಾಯದಿಂದ ಚಿತ್ರ ಕೆತ್ತುತ್ತಾರೆ. ಚಿತ್ರಕೆತ್ತುವ ಮೊದಲು ಕಟ್ಟಿಗೆಗೆ ರಂದಾ ಹೊಡೆದು ನುಣ್ಣಗೆ ಮಾಡಿಟ್ಟುಕೊಳ್ಳುತ್ತಾರೆ. ಕಟ್ಟಿಗೆಯ ಮೇಲೆ ಚಿತ್ರ ಕೆತ್ತುವ ಇನ್ನು ಕೆಲವು ಉಪಕರಣಗಳೆಂದರೆ:

೧. ಕರಬತ್: ಇದು ಕಟ್ಟಿಗೆ ಕತ್ತರಿಸುವ ಸಲುವಾಗಿ,

೨. ರಂದಾ: ಇದು ಕಟ್ಟಿಗೆಯನ್ನು ನುಣ್ಣಗೆ ಮಾಡುವ ಸಲುವಾಗಿ.

೩. ಕಚರಾ: ಇದು ಕಟ್ಟಿಗೆಯ ಮೇಲೆ ಗೆರೆ ಎಳೆಯುವ ಸಲುವಾಗಿ.

೪. ಹತೋಡಿ: ಕಟ್ಟಿಗೆಯಲ್ಲಿ ಮೊಳೆ ಮೊದಲಾಗಿ ಹೊಡೆಯಲು, ಉಳಿ, ಪಟಾಸಿ ಮೊದಲಾದವುಗಳಿಂದ ಕಟ್ಟಿಗೆ ಕೆತ್ತುವಾಗ ಹೊಡೆಯಲು , ಉಪಯೋಗಿಸುವಂಥದ್ದು.

೫. ಅಂಬುರ: ಕಟ್ಟಿಗೆಯಲ್ಲಿರುವ ಮೊಳೆಗಳು ಕಿತ್ತು ತೆಗೆಯುವ ಸಲುವಾಗಿ.

೬. ಕೊಡ್ತಿ: ಇದು ಸಹ ಹತೋಡಿಯಂತೆ ಹೊಡೆಯುವುದು. ಹತೋಡಿಯಿಂದ ಹೊಡೆದರೆ ಕೆಲವೊಮ್ಮೆ ಕಟ್ಟಿಗೆಗಳು ಸೀಳುತ್ತವೆ. ಕೊಡ್ತಿಯಿಂದ ಹೊಡೆದರೆ ಕಟ್ಟಿಗೆ ಸೀಳಲಾರವು. ಇದನ್ನು ಹಣಚಿ ಗಿಡದ ಗಾಬಿಯಿಂದ ಬಬಲೆಗಿಡದ ಗಾಬಿಯಿಂದ ಮಾಡಿರುತ್ತಾರೆ.

೭. ಪಟಾಸಿ: ಕಟ್ಟಿಗೆಯನ್ನು ಸಿಪ್ಪೆಯಂತೆ ಸ್ವಲ್ಪ, ಸ್ವಲ್ಪವಾಗಿ ಕೆತ್ತಲು ಬಳಸುವುದಾಗಿದೆ.

೮. ಗಿರಮಿಟ: ಕಟ್ಟಿಗೆಗೆ ತೂತು ಹಾಕುವ ಸಲುವಾಗಿ.

೯. ಬಳ್ಚಿ: ಕಟ್ಟಿಗೆಯನ್ನು ಕೆತ್ತುವ ಸಲುವಾಗಿ.

೧೦. ಉಳಿ: ಕಟ್ಟಿಗೆಯಲ್ಲಿ ಆಳವಾಗಿ ಕೆತ್ತುವುದು.

೧೧. ಮೆಟ್ಟಾ: ಇದು ಕೋನಗಳು ಅಳತೆಗೆ ತಕ್ಕಂತೆ ಒಂದು ಹಂತ ರೂಪಿಸಿಕೊಳ್ಳಲು ಬಳಸುವ ಉಪಕರಣವಾಗಿದೆ. ಇಂತಹ ಹಲವಾರು ಉಪಕರಣಗಳನ್ನು ಚಿತ್ರ ಬಿಡಿಸುವವರು ತಮ್ಮ ಕಲೆಗನುಗುಣವಾಗಿ ಹೆಚ್ಚು-ಕಮ್ಮಿ ಬಳಸಿಕೊಳ್ಳುತ್ತಾರೆ.

ಕಟ್ಟಿಗೆಯ ಮೇಲೆ ಯಾವುದೇ ಚಿತ್ರ ಕೆತ್ತಿದ ನಂತರ ಮೊದಲು ಮುಲ್ತಾನಿ ಮಣ್ಣು ನೀರಿನಲ್ಲಿ ಕಲೆಸಿಕೊಂಡು ಹಚ್ಚುತ್ತಾರೆ. ನಂತರ ಅಗಸಿ ಎಣ್ಣೆ ಫ್ರೆಂಚ್ ಪಾಲೀಸ್ ಮೊದಲಾಗಿ ತಮಗೆ ಬೇಕಾದ ಬಣ್ಣಗಳನ್ನು ಹಚ್ಚುತ್ತಾರೆ.

ಬೆಳ್ಳಿ-ಬಂಗಾರ ಮೊದಲಾದವುಗಳ ಮೇಲೆ ಚಿತ್ರ ಬಿಡಿಸುವ ಚಿತ್ರಕಾರನೆಂದರೆ ಅಗಸಲ(ಚಿನಿವಾರ), ಬಟ್ಟೆಗಳ ಮೇಲಾದರೆ ಸಿಂಪಿಗ ಎಂದು ಹೇಳಬಹುದಾದರೂ ಜನಸಾಮಾನ್ಯರೂ ಚಿತ್ರ ಬಿಡಿಸುತ್ತಾರೆ. ಮೊದಲು ಸುಣ್ಣ, ಜಾಜ, ಪೆನ್ಸಿಲ್, ಪೆನ್ನು ಮೊದಲಾದವುಗಳಿಂದ ಹೊರರೇಖೆಗಳನ್ನು ಎಳೆದುಕೊಂಡು ನಂತರ ಸೂಜಿದಾರಗಳಿಂದ ಚಿತ್ರರೂಪದಂತೆ ಹೊಲಿಗೆಗಳನ್ನು ಹಾಕುತ್ತಾರೆ.

ತಾಡೋಲೆಗಳ ಮೇಲಾದರೆ ಕಬ್ಬಿಣ ಮೊಳೆಗಳಂತಹ ಲೇಖನಿಯಿಂದ ಬರೆದರೆ ವಿಳ್ಳೆದೆಲೆ, ಬಾಳೆಯ ಎಲೆ ಮೊದಲಾದವುಗಳ ಮೇಲೆ ವಿಭೂತಿ, ಕುಂಕುಮ, ಅರಿಸಿಣ ಮೊದಲಾದವುಗಳಿಂದ ಬರೆಯುತ್ತಾರೆ. ಹಾಳೆಗಳ ಮೇಲೆ ಪೆನ್ನುಗಳಿರದ ಮೊದಲು ದೌತಿಯಲ್ಲಿ ಶಾಯಿ ತುಂಬಿಟ್ಟುಕೊಂಡು ಕಡ್ಡಿಯಿಂದ ಅದ್ದಿ ಬರೆಯುತ್ತಿದ್ದರು. ಹೀಗೆ ಬರೆಯುವ ಸಲುವಾಗಿ 'ಬರು' ಎನ್ನುವ ಜಾತಿಯ ಕಡ್ಡಿಯನ್ನು ಪೆನ್ನಿನ ಪತ್ತಿಯಂತೆ ಚೂಪಾಗಿ ಕೆತ್ತಿಕೊಂಡು ಉಪಯೋಗಿಸುತ್ತಿದ್ದರು. ಈ 'ಬರು' ಕಡ್ಡಿಯ ಕುರಿತು ಕಾಳಿದಾಸ ಮಹಾಕವಿ ಬರೆದ ಪದ್ಯದ ಮರಾಠಿರೂಪ ಈ ಕೆಳಗಿನಂತೆ ಕಾಣಬಹುದು.

'ಬರು'

ಕೋಣೆ ಏಕ ವಿಚಿತ್ರ ಪುತಳಾ
ಮೇಘೋದಕಿ ಜನ್ಮಲಾ
ಬಾಲತ್‌ವೇ ನಗನಾಮಾ ತ್ಯಾಸಿ ಅಸತಾ
ಸ್ತ್ರೀ ನಾಮತೋ ಪಾವಲಾ
ಪಂಚಾನಿ ಪರಣಿಲಿ ತ್ಯಾಂತತೇಹಿ
ಅತ್ಯಾಸರೆ ವಂದಿಲಿ
ತೆಥೆತಿ ಶ್ರಮಪಾವಲಿ ಮಣ್ಬುನ
ಯಾ ಕರಣಾಶ್ರಮಿ ರಾಹಿಲಿ

ಒಂದು ವಿಚಿತ್ರ ಮೂರ್ತಿ(ಬರು/ಹುಲ್ಲು) ಮಳೆಯಲ್ಲಿ ಹುಟ್ಟಿತು, ಸಣ್ಣತನದಲ್ಲಿ (ಮೊದಲು) ಹುಲ್ಲು ಎಂದು ಪುರುಷನಾಮ ಉಳ್ಳ ಆದು (ಲೇಖನಿ ಎಂದು) ಸ್ತ್ರೀ ಹೆಸರು

ಪಡೆದುಕೊಂಡಿತು. ಅದಕ್ಕೆ ಐದು (ಬೆರಳು) ಜನರು ಹಿಡಿದರು; ಅವರಲ್ಲಿ ಮೂವರು ಹೆಚ್ಚು ಗೌರವದಿಂದ (ಉಪಯೋಗಿಸಿದರು) ಕಂಡರು. ಈ ಮೂವರಿಂದ ದುಡಿದು ಶ್ರಮವಾಯಿತೆಂದು ಕಿವಿಯ ಮೇಲು ಸಂದಿಯಲ್ಲಿ ಕೂತು ಬಿಟ್ಟಿತು.

ಊಟದ ಪದಾರ್ಥಗಳ ಮೇಲೆ ಚಿತ್ರ ಬಿಡಿಸಲು ಯಾವ ಬಣ್ಣ, ಮೊದಲಾದವುಗಳ ಅವಶ್ಯಕತೆ ಇಲ್ಲ, ಹಾಗೂ ಯಾವ ಚಿತ್ರಕಲಾಕಾರರೂ ಬೇಕಾಗಲಾರರು. ಅಡಿಗೆ ಮಾಡುವ (ಮಹಿಳೆ)ವರು ಹಿಟ್ಟುನಾದಿಕೊಂಡು ಮಾಡುವ ಪದಾರ್ಥ ಮಾಡಿ ಕಚ್ಚಾ ಇರುವಾಗಲೇ ಚಿತ್ರ ಬಿಡಿಸುತ್ತಾರೆ. ನಂತರ ಬೇಯಿಸುತ್ತಾರೆ. ಉದಾ: ಕರಜಿಕಾಯಿ, ವಿವಿಧ ರೀತಿಯ ಸಿಹಿ ಪದಾರ್ಥಗಳು, ಕೇಕ್ ಮೊದಲಾದವುಗಳು. ಹೀಗೆ ಚಿತ್ರಕಾರರು ಹಾಗೂ ಚಿತ್ರ ಚಿತ್ರಿಸುವಿಕೆಯನ್ನು ನೋಡಬಹುದಾಗಿದೆ.

೬. ಚಿತ್ರಕಲೆಯ ಧ್ಯೆಯೋದ್ದೇಶ:

ಮನೆಯ ಕಳೆ ಅಂಗಳು ಹೇಳುವಂತೆ ಸಂಸ್ಕೃತಿಯ ಕಳೆ ಚಿತ್ರಕಲೆ ಬಿಂಬಿಸುತ್ತದೆ. ಇದು ''ಮಾನವನ ಬುದ್ಧಿಮತ್ತೆಯ ವಿಕಾಸಕ್ಕೆ ಪ್ರಮುಖ ಸಾಧನವಾಗಿದೆ. ಜೊತೆಗೆ ರಚನಾತ್ಮಕ ಬುದ್ಧಿ (Creative Sense) ಬೆಳವಣಿಗೆಗೆ ಸಹಾಯಕಾರಿ ಆಗಿದೆ.'' ಎಂದು ಡಾ|| ಮ. ಶಿ. ಲಠ್ಠೆ ಅವರು ಹೇಳುತ್ತಾರೆ.

ಚಿತ್ರಕಲೆಯನ್ನು ಕಲಿಯುವುದರಿಂದ ನಿರೀಕ್ಷಣಾ ಶಕ್ತಿಯೂ ಸ್ಮರಣಶಕ್ತಿಯೂ ವೃದ್ಧಿಗೊಂಡು ವಿಮರ್ಶಾತ್ಮಕ ಬುದ್ಧಿಯ ವಿಕಾಸವಾಗುತ್ತದೆ. ಚಿತ್ರಕಲೆಯು ನಮಗೆ ಅಚ್ಚುಕಟ್ಟುತನ, ಸ್ವಚ್ಛತೆ, ಒಪ್ಪವಾದ ನಡೆನುಡಿಗಳನ್ನು ಕಲಿಸಿ ಸುಸಂಸ್ಕೃತರನ್ನಾಗಿ ಮಾಡುತ್ತದೆ ಎಂದು ವ್ಹಿ. ಟಿ. ಕಾಳೆ ಅವರು ಹೇಳುತ್ತಾರೆ.

ಚಿತ್ರಕಲೆ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡುವುದು. ಅದುವೇ ಆನಂದ. ಈ ಆನಂದದ ಜೊತೆಗೆ ಹೃದಯ ಸಂಸ್ಕಾರವನ್ನು ನೀಡುವುದಾಗಿದೆ. ಸುಂದರವಾದ ಬಣ್ಣಗಳಿಂದ ಕೂಡಿದ ಚಿತ್ರಕಲೆಯನ್ನು ನೋಡುತ್ತಿದ್ದರೆ ನಮ್ಮನ್ನೇ ನಾವು ಮರೆತು ಹೋಗಿ ಚಿತ್ರಕಾರನ ಕಲೆಯಲ್ಲಿ ತೇಲಾಡುತ್ತ ಆನಂದದ ಮತ್ತಿನಲ್ಲಿ ಮುಳುಗುವಂತಾಗುತ್ತದೆ.

ಮಾತು ಬಾರದ ಮೂಕ ಕೂಡ ಚಿತ್ರಕಲೆಯ ಮೂಲಕ ತನ್ನ ಭಾವನೆಗಳನ್ನು ಅಭಿವ್ಯಕ್ತ ಪಡಿಸುತ್ತಾನೆ. ಮರೆತ ನೆನಪುಗಳು ಚಿತ್ರಕಲೆಯಿಂದ ಮರುಕಳಿಸುವಂತಾಗುತ್ತದೆ. ನಿರಕ್ಷರಿಗಳಿಗೂ ಬೋಧಿಸದೆ ವಿದ್ಯೆಯನ್ನು ನೀಡುವಂತಹ ಶಕ್ತಿ ಚಿತ್ರಕಲೆ ಪಡೆದುಕೊಂಡಿದೆ. ಹಾಗೂ ಕಸಕ್ಕಿಂತಲೂ ಕಡೆಗಿರುವಂಥದ್ದನ್ನು ಚಿತ್ರಕಲೆಯಿಂದ, ರತ್ನಕ್ಕಿಂತಲೂ ಮೌಲಿಕವಾಗಿ ರೂಪಿಸುವುದಾಗಿದೆ. ಭಾಷೆ ಬರದೆ ಇದ್ದಾಗಲೂ ಚಿತ್ರಕಲೆಯಿಂದ ಮಾತನಾಡುವ ಸಾಧ್ಯತೆಗಳಿವೆ.

ಹಲವಾರು ಧ್ಯೇಯ ಧೋರಣೆಗಳನ್ನುಳ್ಳ ಚಿತ್ರಕಲೆ ಇಂದು ವೃತ್ತಿಕಲೆಯಾಗಿ ವಾಲಿ ಲಾಭದಾಸೆಯೂ ಪಡೆದಿದೆ. ಉಪ್ಪಾರ ಸದಾ ಗೋಡೆಕಟ್ಟುವುದಕ್ಕಿಂತ ಕಲ್ಲುಗಳ ಮೇಲೆ ಚಿತ್ರಗಳನ್ನು ಕೆತ್ತಿ ಗೋಡೆ ಕಟ್ಟಿದರೆ ಅದಕ್ಕೆ ಬೆಲೆ ಹೆಚ್ಚು. ಕಂಬಾರ, ಕುಂಬಾರ, ಬಡಿಗ್ಯ ಮೊದಲಾದವರು ಕೂಡ ತಮ್ಮ ವೃತ್ತಿ ಕಲಾಕೃತಿಗಳನ್ನು ಸಾದಾವಾಗಿ ನಿರ್ಮಿಸದೆ ಚಿತ್ರಕಲೆಗಳಿಂದ ಕೂಡಿದ್ದರೆ ಅವರಿಗೂ, ಅವರ ಕಲಾಕೃತಿಗಳಿಗೂ ಹೆಚ್ಚಿನ ಮನ್ನಣೆ ದೊರೆಯುತ್ತದೆ. ಉಡುವ-ತೊಡುವ ಉಡುಪುಗಳು ಕೂಡ ಸಾಧಾರಣವಾಗಿರದೆ, ಕಸೂತಿ ಮೊದಲಾದ ಚಿತ್ರಗಳಿಂದ ಕೂಡಿದ್ದರೆ ತೊಡುವವರೂ ಭೂಷಣವಾಗಿ ಕಾಣುತ್ತಾರೆ. ರವೀಂದ್ರನಾಥ್ ಟಾಗೋರ್ ಅವರು ಹೇಳುವಂತೆ ಉತ್ತಮ ಕಲಾವಿದನಿಂದ ಭಿಕಾರಿಯೂ ಅಮರನಾಗಿಯೂ, ನಿಕೃಷ್ಟ ಕಲಾವಿದನಿಂದ ಸಾರ್ವಭೌಮನು ಕೂಡ ಅಸಹ್ಯವಾಗಿ ಚಿತ್ರಿಸಲ್ಪಡಬಹುದು.

ಹೀಗೆ ಚಿತ್ರಕಲೆ ಮನುಷ್ಯನಿಗೆ ಶಾಂತಿ, ನೆಮ್ಮದಿ, ಹರ್ಷ, ಆನಂದ, ಲಾಭ, ಚೈತನ್ಯ, ಸ್ಮರಣೆ ಮುಂತಾಗಿ ಮರುಕಳಿಸುವ ಜೀವಂತ ಸಾಧನವಾಗಿದೆ.

೭. ಚಿತ್ರಕಲೆಯ ನಂಬಿಕೆ ಹಾಗೂ ನಿಯಮಗಳು:

೧. ಉತ್ತಮ ಚಿತ್ರಗಳನ್ನು ನೋಡುತ್ತಿರುವುದರಿಂದ ಮನುಸ್ಸು ಕೂಡ ಉತ್ತಮವಾಗುತ್ತದೆ.

೨. ನಿಜವಾದ ವ್ಯಕ್ತಿ ಎದುರಿಗಿರುವುದಕ್ಕಿಂತಲೂ ಆ ವ್ಯಕ್ತಿಯ ಚಿತ್ರ ಎದುರಿಗಿದ್ದರೆ ಹೆಚ್ಚಿನ ಗೌರವ ಮನದಲ್ಲುಂಟಾಗುತ್ತದೆ.

೩. ದೇವರ ಚಿತ್ರಗಳು ಮನೆಯಲ್ಲಿದ್ದರೆ ಆ ಮನೆಯ ಮೇಲೆ ದೇವರ ಕೃಪೆ ಇರುತ್ತದೆ.

೪. ನೆಲದ ಮೇಲೆ ಬಿಡಿಸುವ ರಂಗೋಲಿ ಚಿತ್ರಗಳಿಂದ, ಭೂಮಿ ತಾಯಿಗೆ ಒಡವೆಗಳು ಹಾಕಿದಂತಾಗುತ್ತದೆ. ಹಾಗೂ ಭೂಮಿ ತಾಯಿ ಸದಾ ಸಂತುಷ್ಟಳಾಗಿರುತ್ತಾಳೆ.

೫. ಬೀಸುವ ಕಲ್ಲು ಹಾಗೂ ಒಳ್ಳು ಇವುಗಳ ಮೇಲೆ ಹೂವಿನ ಬಳ್ಳಿಯಂತಹ ಚಿತ್ರಗಳು ಕೆತ್ತಿದರೆ ಗಂಗಿ-ಗೌರಿಯರಿಗೆ ಒಡವೆ ವಸ್ತ್ರ ಹಾಕಿದಂತಾಗುತ್ತದೆ.

೬. ಮೈ ಮೇಲೆ ಮೆಹಂದಿ ಚಿತ್ರ ಬರೆದುಕೊಳ್ಳುವುದರಿಂದ ಗರಮಿ ಆಗುವುದಿಲ್ಲ. ಇದೇ ಮೆಹಂದಿ ಹಣೆಯ ಮೇಲೆ ಹಚ್ಚಿಕೊಂಡಾಗ ಚಿತ್ರ ಮೂಡಿದರೆ ಅಂತಹವರ ಹಣೆಬರಹ ದೊಡ್ಡದಿರುತ್ತದೆಂಬ ನಂಬಿಕೆ ಇರುತ್ತದೆ.

೭. ಬರುವಾಗ ಒಂಟಿ, ಹೋಗುವಾಗ ಒಂಟಿ ಎಂಬ ಮಾತಿದ್ದರೂ ಮೈ ಮೇಲೆ ಹಚ್ಚೆ ಚಿತ್ರ ಹಾಕಿಕೊಳ್ಳುವುದರಿಂದ ಅದು ಸತ್ತರೂ ಸಂಗಡ ಬರುತ್ತದೆ. ಅದಕ್ಕಾಗಿ ನಿಜವಾದ ಗೆಣೆಕಾತಿ ಅಂದರೆ ಹಚ್ಚೆ ಮಾತ್ರ.

೮. ಮೈ ಮೇಲೆ ಹುಲಿಯ ಬಣ್ಣ, ಪ್ರೇತದ ಬಣ್ಣ ಮೊದಲಾಗಿ ಬಳಿದುಕೊಂಡಾಗ ಲಿಂಬಿಕಾಯಿ, ಟೆಂಗು ಮೊದಲಾಗಿ ನಿವಾಳಿಸಿ ಬಿಸಾಡಬೇಕು. ಏಕೆಂದರೆ ಯಾರದೇ ದೃಷ್ಟಿಮೊದಲಾಗಿ ತಾಗದೆಂಬ ಮುನ್ನೆಚ್ಚರಿಕೆ ಆಗಿದೆ.

೯. ಮೈ ಮೇಲೆ ಬಣ್ಣ ಬರೆದುಕೊಂಡವರು ರಂಗಸ್ಥಳ ಮೊದಲಾಗಿ ಬಿಟ್ಟು ಬೇರೆ ಕಡೆಗೆ ಹೋಗಬಾರದು. ಹಾಗೆ ಹೋದರೆ ದೆವ್ವ- ಭೂತಗಳು ಝಪಾಡಿಸಿ ಕೊಳ್ಳುತ್ತವೆ

೧೦. ಕೆಲವರು ಕಪ್ಪುಬಣ್ಣ ಮೈ ಮೇಲೆ ಬರೆದುಕೊಳ್ಳಬಾರದೆನ್ನುತ್ತಾರೆ. ಕಪ್ಪು ಬಣ್ಣ ಬಳಿದುಕೊಂಡರೆ ಕೇಡೆಂಬ ನಂಬಿಕೆ ಇದೆ.

೧೧. ಮೆಹಂದಿಯಿಂದ ಗಂಡಸರು ಹೆಚ್ಚಿಗೆ ಚಿತ್ರ ಬರೆದುಕೊಳ್ಳಬಾರದು. ಆದರಿಂದ ಅವರ ಗರಮಿ ಕಡಿಮೆ ಆಗುತ್ತದೆ.

೧೨. ದನಗಳ ಮೇಲೆ ಬಣ್ಣ ಬರೆಯುವುದರಿಂದ ಅವುಗಳೂ ಒಡವೆ ವಸ್ತುಗಳು ಇಟ್ಟುಕೊಂಡಂತೆ ಖುಷಿ ಪಟ್ಟುಕೊಳ್ಳುತ್ತವೆ. ಹಾಗೂ ಮನುಷ್ಯರ ಕುರಿತು ಗೌರವ ಭಾವನೆ ತಾಳುತ್ತವೆ.

೧೩. ಚರ್ಮಗಳ ಮೇಲೆ ದೇವರ ಚಿತ್ರ ಬಿಡಿಸಬಾರದು. ಅದರಿಂದ ದೇವರಿಗೆ ಅವಮಾನ ಮಾಡಿದಂತಾಗುತ್ತದೆ. ತೊಗಲುಗೊಂಬೆಗಳಲ್ಲಿ ಮಾತ್ರ ಬೇಕಾದ ಚಿತ್ರಗಳು ಬಿಡಿಸಬಹುದು.

೧೪. ಥಾಳಿಯ ಮೇಲೆ ಹಾಲು ಕುದಿಸುವಾಗ ಗಡಗಿಯ ಸುತ್ತ ಬೂದಿಯ ಕರಣಿಯಿಂದ ಹುಲಿ ಬರೆದರೆ ಹಾಲು ಬರಕತ್ ಆಗುತ್ತವೆ ಹಾಗೂ ಉಕ್ಕುವುದಿಲ್ಲ, ಜೊತೆಗೆ ಹೈನ ಮಾಡುವವರ ಲಕ್ಷಣವೆಂದರೆ ಹುಲಿ ಬರೆಯುವುದು.

೧೫. ಮದುವೆಯ ಸಂದರ್ಭದಲ್ಲಿ ಐರಾಣಿ ಗಡಿಗಿಗಳ ಮೇಲೆ ವಿಭೂತಿಯಿಂದ ಚಿತ್ರ ಬರೆದರೆ ಅದು ಶಿವನಿಗೆ ಒಪ್ಪವಾಗುತ್ತದೆ.

೧೬. ಗೋಡೆಗಳ ಮೇಲೆ ಚಿತ್ರ ಬರೆಯುವುದರಿಂದ ಹಿಂದುಗಳು ಎಂದು ಸಹಜವಾಗಿ ತಿಳಿಯುತ್ತದೆ. ಇಲ್ಲದಿದ್ದರೆ ತುರುಕರು ಎನ್ನುತ್ತಾರೆ.

೧೭. ಕುಂಡಗಳ ಮೇಲೆ ಸುಂದರ ಹೂವಿನ ಚಿತ್ತಾರ ಇದ್ದರೆ ಅದರಲ್ಲಿ ಬೆಳೆಸುವ ಹೂವು ಕೂಡ ಅಷ್ಟೇ ಸುಂದರವಾಗಿ ಬೆಳೆಯುತ್ತದೆ.

೧೮. ಶೀಗಿ ಆಚರಣೆಯ ಸಂದರ್ಭದಲ್ಲಿ ಚಿತ್ರ ಬಿಡಿಸುವುದೆಂದರೆ: ಶಿವ-ಪಾರ್ವತಿಯರ ಆರಾಧನೆ ಮಾಡುವುದಾಗಿದೆ. ಇದರಿಂದ ಶಿವ-ಶಿವೆಯರು ತೃಪ್ತರಾಗಿ ನಮಗೆಲ್ಲ

ಸುಖ-ಸಮೃದ್ಧಿ ಒದಗಿಸುತ್ತಾರೆ. (ಹೆಚ್ಚಿನ ವಿವರಕ್ಕೆ ನನ್ನ 'ಶೀಗಿ ಹಾಡುಗಳು' ಪುಸ್ತಕ ನೋಡಬಹುದು)

೧೯. ಮದುವೆಯ ಹಂದರಗಳಲ್ಲಿ ಭಾಸಿಂಗ ಚಿತ್ರ ಬಿಡಿಸಿದರೆ ಮದುಮಕ್ಕಳ ಜೀವನದಲ್ಲಿ ಭಾಷಿಂಗ ಬಲ ಕಡಿಯದಂತಿರುತ್ತದೆ.

೨೦. ಹಂದರದಲ್ಲಿ ನಂದಿಯ ಚಿತ್ರ ಬರೆದರೆ ಮದುಮಕ್ಕಳ ಜೀವನ ನಂದಿಯಂತೆ ಶಾಂತವಾಗಿರುತ್ತದೆ.

೨೧. ಕೆಲವರು ಹಂದರದಲ್ಲಿ ಮಕ್ಕಳ ಹಾಗೂ ಗೊಂಬೆಯ ಚಿತ್ರಗಳನ್ನೂ ಬರೆಯುತ್ತಾರೆ. ಇದರಿಂದ ಮದುವೆ ಆದವರಿಗೆ ಬೇಗ ಮಕ್ಕಳಾಗುತ್ತವೆಂಬ ನಂಬಿಕೆ ಇದೆ.

೨೨. ಮನೆಯ ಬಾಗಿಲ ಮೇಲೆ ಗಣೇಶನ ಚಿತ್ರ ಬರೆಯುವುದರಿಂದ ಮನೆಯ ವಿಘ್ನಗಳೆಲ್ಲ ದೂರ ಆಗುತ್ತವೆಂಬುದಾಗಿದೆ.

೨೩. ಕೆಲವರು ಚುಕ್ಕಿ-ಚಂದ್ರ ಮೊದಲಾದ ಚಿತ್ರಗಳನ್ನು ಬಿಡಿಸುವರು. ಇದರಿಂದ ಜೀವನ ಚುಕ್ಕಿಗಳಂತೆ ಹೊಳೆಯುತ್ತ ಚಂದ್ರನ ಬೆಳದಿಂಗಳಂತೆ ತಂಪಾಗಿರಲೆಂಬುದಾಗಿದೆ.

೨೪. ಬಾಗಿಲ ಚೌಕಟ್ಟುಗಳ ಮೇಲೆ ಆನೆಯ ಚಿತ್ರಗಳನ್ನು ಬಿಡಿಸಿರುತ್ತಾರೆ. ಇದರಿಂದ ಆನೆಯ ಬಲ ಸದಾ ಇರುತ್ತದೆಂಬುದಾಗಿದೆ.

೨೫. ಮಾಳಿಗೆಯ ಕಡಿ, ಚಿಲಕಿ, ತೊಲೆಗಳ ಮೇಲೆ ಹೂ, ಬಳ್ಳಿ, ಆನೆ, ಮೊದಲಾದವುಗಳ ಚಿತ್ರ ಬಿಡಿಸುತ್ತಾರೆ. ಇಂದಿನ ಮಾಳಿಗೆಯ ಮೇಲೆ ಆನೆಯಂತಹ ಭಾರಬಿದ್ದರೂ ಬಳ್ಳಿಯಂತೆ ಹಗುರವಾಗಿ ಮಾಳಿಗೆ ಬಹುದಿನಗಳವರೆಗೆ ಬಾಳಿಕೆಗೆ ಬರುತ್ತದೆ.

೨೬. ನೊಗದ ಮೇಲೆ ನಂದಿಯ ಚಿತ್ರ ಬಿಡಿಸುವುದರಿಂದ ಭಾರ ಎಳೆಯಲು ಎತ್ತುಗಳಿಗೆ ಆಯಾಸವಾಗಲಾರದು.

೨೭. ತಾಮ್ರದ ತಾಯಿತಗಳ ಮೇಲೆ ಹನುಮದೇವರ ಚಿತ್ರ ಬಿಡಿಸುತ್ತಾರೆ. ಈ ತಾಯಿತ ಉಳಿದ ತಾಯಿತಗಳಿಗಿಂತ ವಿಶೇಷವಾದದ್ದು. ಇದನ್ನು ಕಟ್ಟಿಕೊಂಡವರಿಗೆ ತುಳಗಿ-ತಕ್ಕುಡ, ಭೂತ-ಪಿಶಾಚಿ ಮೊದಲಾದ ತೊಂದರೆಗಳಿರುವುದಿಲ್ಲ.

೨೮. ವಿಳ್ಯೆದೆಲೆಯ ಮೇಲೆ ಕುಂಕುಮ-ಅರಸಿಣ, ವಿಭೂತಿಗಳಿಂದ ಚಿತ್ರ ಬರೆದರೆ ಲಕ್ಷ್ಮಿ ಮನೆಯಲ್ಲಿ ನೆಲೆಸಿರುತ್ತಾಳೆ ಎಂಬುದಾಗಿದೆ.

೨೯. ಬಣ್ಣಗಳನ್ನು ಉಪಯೋಗಿಸುವಲ್ಲಿಯೂ ಒಂದೊಂದು ಬಣ್ಣಗಳಿಗೆ ಒಂದೊಂದು ಸಂಕೇತಗಳು, ನಂಬಿಕೆಗಳು ಕಾಣುತ್ತವೆ:

★ ಬಿಳಿಯ ಬಣ್ಣವಾದರೆ ಸುಖ- ಶಾಂತಿಯ ಸಂಕೇತ ಹಾಗೂ ಕಪಟತನವಿಲ್ಲದಂಥದ್ದು. ಹಾಗೂ ಮುಂದಿನ ಭವಿಷ್ಯ ಕುರಿತಂಥದ್ದು. ಜೊತೆಗೆ ಗಂಡಿನ ಸಂಕೇತವೂ ಆಗಿದೆ.

★ ಕೆಂಪು ಬಣ್ಣವಾದರೆ ಕೊಲೆ- ಸುಲಿಗೆ ಮೊದಲಾಗಿ ಕಟುಕ ಪ್ರವೃತ್ತಿಯ ಸಂಕೇತ.

★ ಗುಲಾಬಿಯ ಬಣ್ಣವಾದರೆ ಪ್ರೀತಿ- ಪ್ರೇಮದ ಸಂಕೇತ.

★ ಕುಂಕುಮವಾದರೆ ಸೌಭಾಗ್ಯದ ಸಂಕೇತ. ಮುತ್ತೈದಿಯ ಲಕ್ಷಣ.

★ ಗುಲಾಲು- ಬುಕ್ಕಿಟುಗಳಾದರೆ ಹರ್ಷದ ಸಂಕೇತ.

★ ಹಸಿರುಬಣ್ಣವಾದರೆ ಒಕ್ಕಲುತನ ಹಾಗೂ ಫಲವತ್ತಾದ ಸಂಕೇತ.

★ ಹಳದಿಬಣ್ಣವಾದರೆ ಸಂಕೀರ್ಣವಾದದ್ದು.

★ ಬಿಳಿ ಬಣ್ಣವಾದರೆ ರಾಮ- ಕೃಷ್ಣರ ಸಂಕೇತ.

★ ಕಪ್ಪುಬಣ್ಣವಾದರೆ ತಿರಸ್ಕಾರ, ಕಪಟುತನ, ಮೋಸ- ವಂಚನೆ ಮುಂತಾದ ಕೇಡಿನ ಸಂಕೇತ.

ಈ ಸಂಕೇತ ಹಾಗೂ ನಂಬಿಕೆಗಳು ಅಲ್ಲದೆ ಕೆಲವರಲ್ಲಿ ಬೇರೆ, ಬೇರೆ ರೀತಿಯ ನಂಬಿಕೆಗಳೂ ಕಾಣಬಹುದು. ಒಟ್ಟಿನಲ್ಲಿ ಜನಪದದಲ್ಲಿ ಇಂತಹ ಸಂಕೇತ, ಇಂತಹ ನಂಬಿಕಗಳೇ ಎಂಬುದು ಕಡ್ಡಾಯವಿಲ್ಲ, ಗುಂಪು, ಸಮೂಹ ಹಾಗೂ ಪ್ರದೇಶಕ್ಕನುಗುಣವಾಗಿ ಭಿನ್ನ ಭಿನ್ನ ನಿಯಮ ಹಾಗೂ ನಂಬಿಕೆಗಳನ್ನು ಕಾಣ ಬಹುದಾಗಿದೆ.

೮. ಚಿತ್ರಕಲೆಯ ಲಕ್ಷಣ:

ಕ್ರಿ.ಶ., ಮೂರನೆ ಶತಮಾನದವನೆಂದು ಹೇಳುವ ವಾತ್ಸಾಯನ ಕಾಮಸೂತ್ರಕ್ಕೆ ವ್ಯಾಖ್ಯಾನವನ್ನು ಬರೆದ ಕ್ರಿ.ಶ. ೧೧-೧೨ನೇ ಶತಮಾನದ ಯಶೋಧರ ಪಂಡಿತನು ಒಂದು ಪದ್ಯದಲ್ಲಿ ಚಿತ್ರಕಲೆಯ ಲಕ್ಷಣವನ್ನು ಹೀಗೆ ಹೇಳಿದ್ದಾನೆ.

ರೂಪಭೇದಾಃ ಪ್ರಮಾಣಾನಿ ಭಾವಲಾವಣ್ಯ ಯೋಜನಾಮ್

ಸಾದೃಶಂ ವರ್ಣಿಕಾಭಂಗಃ ಇತಿ ಚಿತ್ರಂ ಷಡಂಗಕಮ್॥

ಇವು ಚಿತ್ರದ ಷಡಂಗಗಳು :

೧. **ರೂಪಭೇದ:** ರೂಪದ ವೈವಿಧ್ಯತೆ. ಉದಾ: ಗಂಡಿನ, ಹೆಣ್ಣಿನ ಅವಸ್ಥೆ ಹೇಗಿರಬೇಕು ಎಂಬುದು.

೨. **ಪ್ರಮಾಣ :** ಚಿತ್ರದ ಅಳತೆಯ ಗೊತ್ತು-ಗುರಿ. ಉದಾ: ಒಂದು ಅಂಗಕ್ಕು ಮತ್ತೊಂದು ಅಂಗಕ್ಕು ಇರಬೇಕಾದ ಅಂತರ, ಹೊಂದಿಕೆ ಇತ್ಯಾದಿ.

೩. **ಭಾವ:** ಭಾವನೆ ಅಭಿವ್ಯಕ್ತಗೊಳಿಸುವಿಕೆ. ಯಾವುದೇ ಭಾವನೆ ಅಭಿವ್ಯಕ್ತಿಗೊಳಿಸದ ಚಿತ್ರಕಲೆ ಜೀವಂತ ಶವವಾಗುತ್ತದೆ. ಆದ್ದರಿಂದ ಚಿತ್ರಕಲೆಯಲ್ಲಿ ವಿವಿಧ ಭಾವಗಳು ಅಭಿವ್ಯಕ್ತಗೊಳ್ಳಲೇ ಬೇಕು.

೪. **ಲಾವಣ್ಯ ಯೋಜನೆ:** ಒಂದು ಚಿತ್ರಕಲೆ ಕೇವಲ ಚಿತ್ರವಾಗಿರದೆ ಸುಂದರವಾಗಿದ್ದು ಮನವನ್ನು ಆಹ್ಲಾದಗೊಳಿಸುವಂತಿರಬೇಕು.

೫. **ಸಾದೃಶ್ಯ :** ಸಾದೃಶ್ಯವೆಂದರೆ ಕೇವಲ ಸಾಮಾನ್ಯ ಅರ್ಥದಲ್ಲಿ ಹೇಳುವ ಹೋಲಿಕೆ ಮಾತ್ರ ಅಲ್ಲ, ಕಲೆಯಲ್ಲಿರುವ ಆಕಾರಿಕ ಮತ್ತು ಪ್ರಾತಿನಿಧಿಕ ಅಂಶಗಳ ಸಂಬಂಧ ಎಂಬುದು ಅದರ ಆಳವಾದ ಅರ್ಥ ಎನ್ನುತ್ತಾರೆ ಎಸ್.ಸಿ. ಪಾಟೀಲರು. (ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಡಿಸೆಂಬರ್ ೮೮ , ಜೂನ್ ೮೭ ಪು. ೧೩೬)

೬. **ವರ್ಣಿಕಾ ಭಂಗ :** ಬಣ್ಣ ತುಂಬುವಿಕೆ. ಅಂದರೆ ಎಷ್ಟೆಷ್ಟು ಪ್ರಮಾಣದಲ್ಲಿ ಯಾವ, ಯಾವ ಬಣ್ಣ ಕಲೆಸಿಕೊಂಡರೆ ಏನಾಗುತ್ತದೆ ಎಂಬ ಜ್ಞಾನ.

ಚಿತ್ರಕಲೆಗೆ ಈ ಮೇಲಿನ ಷಡಂಗಗಳು ಅವಶ್ಯಕವಿದ್ದು ಇವುಗಳ ಜ್ಞಾನದಿಂದೊಡಗೂಡಿದ ಚಿತ್ರವೇ ನಿಜವಾದ ಚಿತ್ರವೆಂಬುದು ಶಿಷ್ಟಕಲೆಯ ಧೋರಣೆ. ಆದರೆ ಜನಪದ ಚಿತ್ರಕಾರರಿಗೆ ಈ ಯಾವ ಶಾಸ್ತ್ರವೂ ಗೊತ್ತಿರದೆ ಸಂದರ್ಭಕ್ಕನುಗುಣವಾಗಿ ತಮ್ಮ ಮತಿಗನುಗುಣವಾಗಿ ಚಿತ್ರಸುವುದೇ ಒಂದು ವೈಶಿಷ್ಟ್ಯ.

★ ★ ★

ಇಂದಿಗೂ ಪ್ರಚಲಿತವಿರುವ ಜನಪದ ಚಿತ್ರಕಲೆಗಳಾವುವು ಎಂದು ಗುರುತಿಸಲು ಪ್ರಯತ್ನಿಸಲಾಗಿರುವ ಇಲ್ಲಿಯ ಕಲೆಗಳು ಸುಂದರವಾದವುಗಳಾದರೂ ಅವು ಅನಾಮಧೇಯವಾದವುಗಳು. ಉದಾ: ರಂಗೋಲಿ ಹಾಕುವುದು, ಗೋಡೆಗಳಿಗೆ ಸುಣ್ಣ- ಬಣ್ಣ ಮಾಡುವುದು. ಖವುದಿ ಹಾಗೂ ಕಸೂತಿ ಹಾಕುವುದು. ಮೊದಲಾದ ಕಲೆಗಳ, ಕಲಾಕಾರರು ಯಾರು? ಎಂದರೆ ಮನೆಯ ಗೃಹಿಣಿ ಎನ್ನಬಹುದು. ಆದರೆ ಇಂಥವಳೆ ಎಂದು ಪ್ರತ್ಯೇಕವಾಗಿ ಹೆಸರಿಸುವಂತಿಲ್ಲ. ಇನ್ನು ಸಮಸ್ಯೆಯಾಗಿ ಸೃಷ್ಟಿಗೊಳ್ಳುವ ಕುಂಬಾರ, ಕಂಬಾರ, ಬಡಿಗ, ಮೊದಲಾದವರ ಕಲೆಗಳೂ ಜನಪದ ಕಲೆಗಳೇ ಆಗಿವೆ. ಕುಂಬಾರ ತಯಾರಿಸಿದ ಗಡಿಗೆಗಳಿಗೆ ಕುಂಬಾರ ತಯಾರಿಸಿರುವನು ಎನ್ನುವರೇ ಹೊರತು ಒಬ್ಬ ಕುಂಬಾರನ ಹೆಸರು ಪ್ರಮುಖವಾಗಿರುವುದಿಲ್ಲ, ಇಂತಹ ಜನಪದ ಕಲೆಗಳೆಲ್ಲ ಪರಮ ಶ್ರೇಷ್ಠವೆಂದು ಹೇಳಲಾರೆನಾದರು ಅವು ಯಾರ ತಿರಸ್ಕಾರಕ್ಕೊಳಗಾಗದೆ ಬಹುಸಂಖ್ಯೆಯ ಜನ- ಮನ ಸೂರೆಗೊಂಡವುಗಳಾಗಿವೆ. ಹಾಗೂ ಇಂದಿನ ಅದೆಷ್ಟೋ ಪ್ರಸಿದ್ಧಿಯ ಅಭಿಜಾತ ಕಲೆಗಳಿಗೆ ಇವು ಮೂಲ ಹಾಗೂ ಮಾದರಿ ಆಗಿವೆ. ಇಂದು ವಿಶ್ವವಿದ್ಯಾಲಯ ಮೊದಲಾದ ಕಡೆಗಳಲ್ಲೆಲ್ಲಾ ಇವು ಅಧ್ಯಯನಕ್ಕೊಳಗಾಗುತ್ತಿರುವುದು ಇವುಗಳ ಹಿರಿಮೆ- ಗರಿಮೆ ಆಗಿದೆ.

★★★

ಅನುಬಂಧಗಳು

ಪ್ರಮುಖ ವ್ಯಕ್ತಿಗಳು.

★ ಶ್ರೀ ಹಾವಗಿರಾವ ತಂದೆ ವಿಠಲರಾವ ಹೂಗಾರ ಠಾಣಾಕುಶನೂರು ತಾ: ಔರಾದ ಜಿಲ್ಲಾ ಬೀದರ, ವಯಸ್ಸು: ೮೫, ಶಿಕ್ಷಣ ೫ನೇ ವರ್ಗ , ಖಾಸಗಿ ವೃತ್ತಿ: ಹೂವುಕಟ್ಟುವುದು. ಜಾತಿ: ಫುಲಾರೆ.

★ ದಿ. ದಿಗಂಬರರಾವ ಪಾಂಚಾಳ : ಕುಶನೂರ ಠಾಣಾ, ವಯಸ್ಸು: ೭೦, ಶಿಕ್ಷಣ: ಇಲ್ಲ ವೃತ್ತಿ : ಬಡಿಗತನ , ಜಾತಿ: ಪಾಂಚಾಳ(ಇವರು ತೀರಿಕೊಂಡು ಇಂದಿಗೆ ೭-೮ ವರ್ಷಗಳಾದವು).

★ ಶ್ರೀ ಬಾಬು ,ತಂದೆ ಪಿರಾಜಿ ಕುಶನೂರು(ಠಾಣಾ) ವಯಸ್ಸು: ೪೦, ಶಿಕ್ಷಣ : ೨ನೇ ತರಗತಿ: ವೃತ್ತಿ:ಸಮಗಾರ ಕೆಲಸ. ಜಾತಿ: ಸಮಗಾರ.

★ ಸಿಂದೆ ರಮೇಶ್ ಔರಾದ, ವಯಸ್ಸು: ೩೦ ವರ್ಷ , ಶಿಕ್ಷಣ: ಡಿಪ್ಲೊಮಾ, ವೃತ್ತಿ: ವಿದ್ಯಾರ್ಥಿ, ಮಾತು: ಮರಾಠಾ.

★ ಶ್ರೀಮತಿ ಸಂಗೀತಾ ಗಂಡಕಲ್ಲಪ್ಪ, ಬಿರಾದಾರ ಎಕಲಾರ. ವಯಸ್ಸು: ೪೧ ವರ್ಷ, ಶಿಕ್ಷಣ :೧೦ನೇ ತರಗತಿ, ವೃತ್ತಿ: ಮನೆಗೆಲಸ, ಜಾತಿ: ಲಿಂಗಾಯತ.

★ ಶ್ರೀಮತಿ ಕಲಾವತಿ , ಗಂಡ ವೀರಶೆಟ್ಟಿಯರನಾಳೆ, ಕುಶನೂರ ಠಾಣಾ, ವಯಸ್ಸು: ೫೪, ಶಿಕ್ಷಣ : ಇಲ್ಲ, ವೃತ್ತಿ: ಮನೆಗೆಲಸ , ಜಾತಿ: ಲಿಂಗಾಯತ.

★★★

ಗ್ರಂಥ ಋಣ

- ಡಾ. ಮ. ಶೀ. ಲಕ್ಕೆ - ಜಾನಪದ ಸಂಶೋಧನಾತ್ಮಕ ಪ್ರಬಂಧಗಳು.
- ಪ್ರೊ. ಎಸ್. ಕೆ. ರಾಮಚಂದ್ರರಾವ್ - ಕರ್ನಾಟಕದ ಕಲೆಗಳು - ಕ. ಸಾ. ಪ ಪ್ರ. ಮು. ೧೯೮೧.
- ಜ್ಞಾನಗಂಗೋತ್ರಿ (ಕಿರಿಯರ ವಿಶ್ವಕೋಶ) ಭಾಗ ೪ ಮತ್ತು ೫ - ಕರ್ನಾಟಕ ಸಹಕಾರಿ ಮಂದಿರ, ಬೆಂಗಳೂರು.
- ಡಾ. ಜಿ. ಎಸ್. ಶಿವರುದ್ರಪ್ಪ - ಸೌಂದರ್ಯ ಸಮೀಕ್ಷೆ.
- ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಬೆಂಗಳೂರು - ಡಿಸೆಂಬರ ೧೯೮೬ ಜೂನ್ ೧೯೮೭, ಪ್ರಜಾವಾಣಿ ದಿನಾಂಕ ೮-೧೧-೧೯೯೧.
- ರಾಜೇಂದ್ರ ಯರನಾಳೆ - ಶೀಗಿ ಹಾಡುಗಳು
- ರಾಜೇಂದ್ರ ಯರನಾಳೆ - ವಿಶ್ವವಿಖ್ಯಾತ ಬಿದ್ರಿಕಲೆ
- ರಾಜೇಂದ್ರ ಯರನಾಳೆ - ಸಹಸ್ರಾರು ಜನಪದ ಗಾದೆಗಳು - ಹಸ್ತಪ್ರತಿ
- ರಾಜೇಂದ್ರ ಯರನಾಳೆ - ರಂಗೋಲಿ ಮತ್ತು ಹಣಚಿಬಟ್ಟು - (ಅಚ್ಚಿನಲ್ಲಿ)

★★★

ಶುಭವಾಗಲಿ

ಗ್ರಾಮೀಣ ಜನತೆ ತಮ್ಮದೇ ಆದ ವಿಶಿಷ್ಟ ಕಲೆಗಾರಿಕೆಯನ್ನು ರೂಢಿಸಿಕೊಂಡಿರುತ್ತಾರೆ. ಅವುಗಳಲ್ಲಿ ಖವುದಿ, ಕುಂಚಿಕುಲಾವಿ ಕಲೆಯೂ ಒಂದು. ಹೊಲಿಗೆಯ ಹಲವು ತರದ ವಿನ್ಯಾಸ, ಈ ಕಲೆಯಲ್ಲಿ ಹಾಸುಹೊಕ್ಕಾಗಿರುತ್ತದೆ. ಕಣ್ಣು-ಮನಸ್ಸನ್ನು ಸೆರೆಹಿಡಿಯುವ ಆಕರ್ಷಕ ಗುಣ ಹೊಂದಿರುವ ಈ ಕಲೆ, ಅಂತರಾಳದಲ್ಲಿ ಹೃದಯವನ್ನೂ ಮಾತನಾಡಿಸಬಲ್ಲುದು.

ಹಾಗೆಯೇ ಪ್ರಾಚೀನ ಗುಡಿ ಗೋಪುರಗಳ, ಮನೆ-ಮಠಗಳ ಗೋಡೆಗಳ ಮೇಲೆ ಚಿತ್ತಾಕರ್ಷಕ ಚಿತ್ರಗಳು ರೂಪುಗೊಂಡಿರುತ್ತವೆ. ಅವುಗಳ ಸಹಜ ವಿನ್ಯಾಸ, ವರ್ಣ ವೈವಿಧ್ಯ ಅಂದಿನ ನೈಜ ಸಂಸ್ಕೃತಿ-ಸಂಪತ್ತನ್ನೇ ಪ್ರತಿಪಾದಿಸುತ್ತದೆ.

ಈ ಹಿನ್ನೆಲೆಯಲ್ಲಿ ಜನಪದ ಹೊಲಿಗೆ ಮತ್ತು ಚಿತ್ರಕಲೆಯನ್ನು ಹಲವು ಕೋನಗಳಲ್ಲಿ ಅಭ್ಯಸಿಸಿ ಈ ಕಿರು ಹೊತ್ತಗೆಯನ್ನು ಸಿದ್ಧಪಡಿಸಿರುತ್ತಾರೆ. ಸಹೃದಯ ಓದುಗರು ಆತ್ಮೀಯವಾಗಿ ಬರಮಾಡಿಕೊಳ್ಳುತ್ತಾರೆಂದು ನಂಬಿರುತ್ತೇವೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು

ಅಧ್ಯಕ್ಷರು